ಯಕ್ಷಗಾನ ಕಲಾವಿದರು : ಒಂದು ಸಮಾಜಶಾಸ್ತ್ರೀಯ ಅಧ್ಯಯನ

ಸಮಾಜಶಾಸ್ತ್ರ ವಿಷಯದಲ್ಲಿ ಪಿಎಚ್.ಡಿ ಪದವಿಗಾಗಿ ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ಸಂಶೋಧನಾ ಮಹಾಪ್ರಬಂಧದ ಸಾರಲೇಖ

ಸಂಶೋಧಕರು

ಸತೀಶ ಎ

ಮಾರ್ಗದರ್ಶಕರು

ಪ್ರೊ.ಜೋಗನ್ ಶಂಕರ್

ವಿಶ್ರಾಂತ ಕುಲಪತಿಗಳು, ಕುವೆಂಪು ವಿಶ್ವವಿದ್ಯಾನಿಲಯ

ಹಾಗೂ ವಿಶ್ರಾಂತ ಪ್ರಾಧ್ಯಾಪಕರು, ಸಮಾಜಶಾಸ್ತ್ರ ವಿಭಾಗ

ಮಂಗಳೂರು ವಿಶ್ವವಿದ್ಯಾನಿಲಯ

ಸಮಾಜಶಾಸ್ತ್ರ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ

ಮಂಗಳಗಂಗೋತ್ರಿ–574199

ಕರ್ನಾಟಕ, ಭಾರತ

2021

ಪರಿವಿಡಿ

- ಪೀಠಿಕೆ
- ಯಕ್ಷಗಾನ
- ಅಧ್ಯಯನದ ಮಹತ್ವ
- ಸಾಹಿತ್ಯ ಪರಾಮರ್ಶೆ
- ಅಧ್ಯಯನದ ಉದ್ದೇಶಗಳು
- ಸಂಶೋಧನಾ ವಿಧಾನ, ಮಾಹಿತಿ ಸಂಗ್ರಹಣೆ
- ಸಂಶೋಧನಾ ವಿನ್ಯಾಸ
- ಪ್ರಮುಖ ಸಂಶೋಧನಾ ಫಲಿತಗಳು
- ಉಪಸಂಹಾರ ಮತ್ತು ಸಲಹೆಗಳು
- ಪರಾಮರ್ಶನ ಗ್ರಂಥಗಳು

ಯಕ್ಷಗಾನ ಕಲಾವಿದರು: ಒಂದು ಸಮಾಜಶಾಸ್ತ್ರೀಯ ಅಧ್ಯಯನ

ಪೀಠಿಕೆ

ಸಂಸ್ಕೃತಿ, ಸಮಾಜ, ಭಾಷೆ, ಜನಜೀವನ, ಸಾಹಿತ್ಯ, ಕಲೆ ಇವೆಲ್ಲ ಪರಸ್ಪರ ಅವಿನಾಭಾವ ಸಂಬಂಧ ಇರುವಂತವುಗಳು. ಒಂದಕ್ಕೊಂದು ಪೂರಕವಾಗಿ ಇರುತ್ತದೆ ಮಾತ್ರವಲ್ಲದೆ ಒಂದನ್ನು ಬಿಟ್ಟು ಮತ್ತೊಂದಕ್ಕೆ ಪೂರ್ಣ ಅಸ್ತಿತ್ವ ಇರುವುದಿಲ್ಲ. ಒಂದು ಕಲೆ ಯಾವುದೋ ಸಾಮಾಜಿಕ, ಧಾರ್ಮಿಕ ಉದ್ದೇಶವನ್ನಿಟ್ಟುಕೊಂಡು ಹುಟ್ಟಿರಬಹುದು, ಆದರೆ ಕಾಲಗತಿ ಆ ಕಲೆಯನ್ನು ಅದೇ ಸ್ಥಿತಿ ಸ್ವರೂಪಗಳಲ್ಲಿ ಇರಲು ಬಿಡುವುದು ವಿರಳ. ಧಾರ್ಮಿಕ, ಸಾಮಾಜಿಕ, ರಾಜಕೀಯ ಸ್ಥಿತ್ಯಂತರಗಳು ಕಲೆಯ ಮೇಲೂ ಪ್ರಭಾವವನ್ನು ಬೀರುತ್ತವೆ. ಹಾಗೆಯೇ ಸಾಮಾಜಿಕ ಜನಜೀವನದಲ್ಲಿ ಕಲೆಯು ಮಹತ್ತರವಾದ ಪಾತ್ರವನ್ನು ನಿರ್ವಹಿಸುತ್ತಾ ಬಂದಿವೆ.

ಕಲೆಗಳ ಸಂಖ್ಯೆಗೆ ಇತಿಮಿತಿ ಎಂಬುದಿರುವುದಿಲ್ಲ. ಜೀವನದಲ್ಲಿ ಸಾವಿರಾರು ಕಲೆಗಳು ಅಂತರ್ಗತವಾಗಿ ಪ್ರಕಟವಾಗುತ್ತಲೇ ಇರುತ್ತವೆ. ಕಲೆಯು ನಮ್ಮ ಭಾವನೆಗಳು ಹಾಗೂ ಅರಿವಿನ ಮೇಲೆ ಪರಿಣಾಮ ಆಗುವ ಹಾಗೆ ಬುದ್ಧಿ ಪೂರ್ವಕವಾಗಿ ಜೋಡಿಸಲಾದ ಅಂಶಗಳ ಒಂದು ರೂಪವಾಗಿದೆ. ಆರಂಭದಲ್ಲಿ ಮನುಷ್ಯ ಒಂದು ಕಡೆ ನೆಲೆ ನಿಲ್ಲಲು ಪ್ರಾರಂಭಿಸಿದ ಬಳಿಕವೇ ಕಲೆಯು ನಿಜವಾಗಿ ಆರಂಭವಾಯಿತು. ಪ್ರಾಚೀನ ಕಾಲದಲ್ಲಿ ಹುಟ್ಟಿದ ಕಲೆ ಸ್ವಚ್ಛಂದವಾಗಿ ಬೆಳೆಯುತ್ತಾ ಬಂತು. ಚಿತ್ರ, ನೃತ್ಯ, ಸಂಗೀತ, ಜನಪದ ಹೀಗೆ ಅನೇಕ ಕವಲುಗಳಾಗಿ ಕಲೆ ಸ್ವತಂತ್ರವಾದ ಬೆಳವಣಿಗೆಯನ್ನು ಕಂಡುಕೊಂಡಿತ್ತಾದರೂ ಅವು ಪರಸ್ಪರ ಪೋಷಕವಾಗಿಯೇ ಮುನ್ನಡೆದವು. ಹಾಗೆಯೇ ನಾಗರಿಕತೆಗಳು ಬೆಳೆದಂತೆಲ್ಲಾ ಕಲೆಯ ಪ್ರಕಾರಗಳೂ ಬೆಳೆಯುತ್ತಾ ಬಂದವು. 'ಕಲೆ ಎನ್ನುವುದು ಮಾನವ ನಿರ್ಮಿತ ಕೌಶಲ ಎಂದರೆ ಸಾಲದು. ಮನುಷ್ಯನಲ್ಲಿ ಉಂಟಾಗುವ ವಿವಿಧ ಭಾವಗಳಿಗೆ ಅವನ ಕಲ್ಪನೆಗಳಿಂದ ಲಭಿಸುವ ಭಾಗ್ಯರೂಪವಾಗಿ ಹೊರಪ್ರಕಟಿಸುವುದು ಕಲೆ. ವಿದ್ಯೆ ಎಂಬುದು ಅಭ್ಯಾಸ ಪ್ರಧಾನವಾದರೆ ಕಲೆಯೆಂಬುದು ಪ್ರತಿಭಾ ಪ್ರಧಾನದತ್ತವಾದುದು'.(ವಾಸುದೇವ ಕಾಣೆಮಾರ್,2001: ಕಲಾಪ್ರಕಾರಗಳು,ಪುಟ.ಸಂ.13)

1985ರ ನೋಬೆಲ್ ಪಾರಿತೋಷಕ ಪಡೆದ ಕ್ಲಾಡ್ ಸೀಮೋ ಎಂಬ ಲೇಖಕ ಹೇಳುವಂತೆ ಮಾನವನ ಬದುಕಿಗೆ ಹಸಿವು ತೃಷೆ ಉಸಿರಾಟಗಳಷ್ಟೇ ಅಗತ್ಯವಾದುದು ಕಲೆ ಮತ್ತು ಸಾಹಿತ್ಯ. ಚಿಂತನಶೀಲತೆ, ಪಾರಮಾರ್ಥಿಕ ಸತ್ಯದ ಅನ್ವೇಷಣೆ, ಕಣ್ಣಿಗೆ ಕಾಣದ ಶಕ್ತಿಗಳ ಬಗ್ಗೆ ವಿಶ್ಲೇಷಣೆ, ಸಮಾಜ ಜೀವನವನ್ನು ನಿಯಂತ್ರಿಸುವ ಮೌಲ್ಯಗಳ ಪ್ರತಿಪಾದನೆ, ಕಲೆ ಸಾಹಿತ್ಯಗಳ ಸೃಜನೆ ಇವೇ ಮುಂತಾದ ಪ್ರವೃತ್ತಿಗಳನ್ನು ಅನಾದಿ ಕಾಲದಿಂದಲೂ ಮಾನವ ಬೆಳೆಸಿಕೊಂಡು ಬಂದಿದ್ದಾನೆ.

'ಯಾವುದೇ ಒಂದು ಕಲಾ ಸಂಪ್ರದಾಯ ತಲೆಮಾರಿಂದ ತಲೆಮಾರಿಗೆ ನಿರ್ದಿಷ್ಟ ರೀತಿಯಲ್ಲಿ ಉಳಿಯಬೇಕಾದರೆ ಆ ವ್ಯವಸಾಯವನ್ನು ನಿರ್ವಹಿಸುವವರ ಜೀವನದ ಮುಖ್ಯ ವೃತ್ತಿಯೇ ಅದಾಗಿರಬೇಕು. ಅದು ಕೇವಲ ಉತ್ಸಾಹ ಬಂದಾಗ ಆಡುವ, ಉಳಿದಾಗ ಮರೆಯುವ ಹವ್ಯಾಸವಾದಲ್ಲಿ ಯಾವುದೇ ಸಂಪ್ರದಾಯದ ಗುಣಲಕ್ಷಣಗಳು ಮುಂದುವರಿಯಲಾರವು' (ಶಿವರಾಮ ಕಾರಂತ; ಯಕ್ಷಗಾನ ಮಕರಂದ, ಕನ್ನಡನಾಡಿನ ಜಾನಪದ ರಂಗಭೂಮಿ, ಪುಟ-2)

ಆರಾಧನೆ ಮತ್ತು ಆಚರಣೆಗಳ ಕ್ರೀಯೆಗಳಾಗಿ ವಿಕಸನ ಹೊಂದಿ ಪೂರ್ಣ ಸ್ವರೂಪದ ಕಲೆಗಳಾದದ್ದು ಒಂದು ಬಗೆಯಾದರೆ, ಧರ್ಮ ಅಥವಾ ಪಂಥ ಪ್ರಸಾರಕ್ಕಾಗಿ ಹುಟ್ಟಿದ ಕಲೆಗಳು, ನಂತರ ಧರ್ಮಪಂಥದ ಉದ್ದೇಶ ಮೀರಿ ಸಾರ್ವಜನಿಕ ಕಲೆಗಳಾದದ್ದು ಇನ್ನೊಂದು ಬಗೆ. ಕಲೆಯೇ ವೃತ್ತಿಯಾಗಿ ನಂತರ ಅದೊಂದು ಪರಂಪರೆಯಾಗಿ ಬೆಳೆದದ್ದು ಒಂದು ಬಗೆಯಾದರೆ ಇರುವ ವ್ಯವಸ್ಥೆಗೆ

ಪ್ರತಿಭಟನೆಯಾಗಿ ಹೊಸ ಕಲೆಗಳೇ ಹುಟ್ಟಿಕೊಂಡದ್ದು ಮತ್ತೊಂದು ಬಗೆಯಾಗಿದೆ. ಹೀಗೆ ಕಲೆಗಳ ಶೋಧನೆಯನ್ನು ಮಾಡುತ್ತಾ ಹೋದರೆ ಹಲವಾರು ಕುತೂಹಲಕಾರಿ ಸಂಗತಿಗಳನ್ನು ಕೂಡಾ ಕಾಣಬಹುದಾಗಿದೆ.

ಸೃಜನಾತ್ಮಕ ಕಲೆಯನ್ನು ಸಾಮಾನ್ಯವಾಗಿ ಅದರ ಕಲಾತಂತ್ರ, ಮಾಧ್ಯಮಗಳಿಗೆ ಸಂಬಂಧಿಸಿದ ಹಾಗೆ ಅದನ್ನು ನಿರ್ಧಿಷ್ಟ ಗುಂಪುಗಳಿಗೆ ವಿಂಗಡಿಸಬಹುದು. ಅವುಗಳನ್ನು ಅಲಂಕಾರಿಕ ಕಲೆ, ರೂಪಶಿಲ್ಪ ಕಲೆ ಮತ್ತು ಪ್ರದರ್ಶನ ಕಲೆ ಅಥವಾ ಸಾಹಿತ್ಯ ಎಂದು ಗುರುತಿಸಬಹುದು.

ಪ್ರದರ್ಶನಾತ್ಮಕ ಕಲೆಗಳಲ್ಲಿ ಕುಣಿತ ಪ್ರಧಾನ, ಆರಾಧನಾ ಪ್ರಧಾನ ಹಾಗೂ ಜನಮನರಂಜನಾ ಪ್ರಧಾನ ಕಲೆಗಳಲ್ಲಿ ಕರ್ನಾಟಕದಲ್ಲಿರುವ ಕೆಲವನ್ನು ಈ ರೀತಿಯಾಗಿ ಗುರುತಿಸಬಹುದು. ಪ್ರಮುಖವಾಗಿ ಯಕ್ಷಗಾನ, ಗೊಂಬೆಯಾಟ, ತೊಗಲು ಗೊಂಬೆಯಾಟ, ಸಿಂಹ ನೃತ್ಯ, ಭೂತಾರಾಧನೆ, ಆಟಿಕಳೆಂಜ, ಸೋಮನ ಕುಣಿತ, ಕೀಲು ಕುದುರೆ, ಗಾರುಡಿ ಗೊಂಬೆ, ಹುಲಿ ವೇಷ, ಪಿಲಿಪಂಜಿ ಕುಣಿತ, ಸುಗ್ಗಿ ಕುಣಿತ ಹೀಗೆ ಹಲವಾರು ಕಲಾಪ್ರಕಾರವನ್ನು ಗುರುತಿಸಬಹುದಾಗಿದೆ.

ಕರ್ನಾಟಕದಲ್ಲಿ ಆರಾಧನೆಯ ಕಲೆಗಳಿವೆ, ಧರ್ಮಪ್ರಸಾರದ ಕಲೆಗಳಿವೆ, ವೃತ್ತಿಗಾಯಕರ ಕಲೆಗಳಿವೆ. ಕೃಷಿಗೆ ಸಂಬಂಧಿಸಿದ ಕಲೆಗಳಿವೆ, ನೀತಿರೂಪದ ಕಲೆಗಳಿವೆ, ಶುದ್ಧ ಮರಂಜನೆಯ ಕಲೆಗಳಿವೆ, ರಂಗಭೂಮಿ ಕಲೆಗಳೂ ಇವೆ. ಇಷ್ಟಲ್ಲದೆ ಕುಣಿತವೇ ಪ್ರಧಾನವಾದ, ಹಾಡೇ ಪ್ರಧಾನವಾದ, ವಾದ್ಯಗಳೇ ಮುಖ್ಯವಾದ ನಾನಾ ರೀತಿಯ ಕಲೆಗಳಿವೆ. ಯಕ್ಷಗಾನ, ತಾಳಮದ್ದಲೆ, ಬಯಲಾಟ, ಸಣ್ಣಾಟ, ತೊಗಲುಗೊಂಬೆ, ಸೂತ್ರದ ಗೊಂಬೆ ಮುಂತಾದ ವಿಶಿಷ್ಟ ಕಲೆಗಳು ಕರಾವಳಿಯಲ್ಲಿ, ಮಳೆನಾಡಿನಲ್ಲಿ ಬಯಲುನಾಡಿನಲ್ಲಿ ಬೇರೆ ಬೇರೆ ರೀತಿಯಲ್ಲಿದ್ದುಕೊಂಡು ತುಂಬಾ ಕುತೂಹಲ ಹುಟ್ಟಿಸುತ್ತದೆ.

ಪ್ರದರ್ಶನಾತ್ಮಕ ಕಲೆಗಳಲ್ಲಿ ಯಕ್ಷಗಾನ ಅತ್ಯಂತ ಶ್ರೀಮಂತ ಕಲೆ ಎನಿಸಿದೆ. ಅದು ಕರ್ನಾಟಕದಲ್ಲಿ ಅದರಲ್ಲೂ ಕರಾವಳಿಯ ಜಿಲ್ಲೆಗಳಲ್ಲಿ ಈ ಕಲೆಯು ಜನರ ಸಾಮಾಜಿಕ ಬದುಕಿನೊಂದಿಗೆ ತನ್ನದೇ ಆದ ರೀತಿಯಲ್ಲಿ ಪರಿಣಾಮವನ್ನು ಬೀರಿದೆ. ಆರಾದನಾ ಕಲೆಯಾಗಿ ಬೆಳೆದು ಬಂದ ಈ ಯಕ್ಷಗಾನವು ಸಂಗೀತ, ಕುಣಿತ, ವೇಷಭೂಷಣ, ಮಾತುಗಾರಿಕೆಯಿಂದ ಜನರಿಗೆ ಮನರಂಜನೆ ಹಾಗೂ ಧರ್ಮಬೋಧನೆಯನ್ನು ಮಾಡುವಂತಹ ಕಲೆಯಾಗಿಯೂ ಬೆಳೆಯುತ್ತಾ ಬಂದಿದೆ. ಅಲ್ಲದೆ ಸಾವಿರಾರು ಕಲಾವಿದರು ಯಕ್ಷಗಾನ ಕಲೆಯ ಮೂಲಕವೇ ಬದುಕನ್ನು ಕಟ್ಟಿಕೊಂಡಿದ್ದಾರೆ.

ಯಕ್ಷಗಾನ

ಯಕ್ಷಗಾನ ಕಲೆಯು ಕರ್ನಾಟಕದ ಸಾಂಸ್ಕೃತಿಕ ಹೆಗ್ಗುರುತು. ಸಂಗೀತ, ವೇಷಭೂಷಣ, ಕುಣಿತ ಹಾಗೂ ಮಾತುಗಾರಿಕೆಯೆಂಬ ವೈಶಿಷ್ಟ್ಯಪೂರ್ಣತೆಯಿಂದ ಸಾಗಿ ಬಂದ ಈ ಕಲೆಯು ಸಮೃದ್ಧವೂ ಆದ ಸಮಷ್ಟಿ ಕಲೆಯಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಹುಟ್ಟಿಬೆಳೆದ ಯಕ್ಷಗಾನ ಕಲೆಯು ನಮ್ಮ ಜನಜೀವನ ಹಾಗೂ ಸಂಸ್ಕೃತಿಯ ಒಂದು ಅಂಗವಾಗಿ ಬೆಳೆದುಬಂದಿವೆ.

ಕರ್ನಾಟಕದ ವಿವಿಧ ಪ್ರದೇಶಗಳಲ್ಲಿ ಯಕ್ಷಗಾನವು ದಶವತಾರ, ಬಯಲಾಟ, ಆಟ, ಭಾಗವತರಾಟ ಮುಂತಾದ ಹೆಸರುಗಳಿಂದ ಗುರುತಿಸಲ್ಪಟ್ಟಿದೆ. ಯಕ್ಷಗಾನದ ಬಯಲಾಟದಲ್ಲಿ ಬಹಳ ಮುಖ್ಯವಾಗಿ ಕಂಡು ಬರುವ ಎರಡು ಪ್ರಬೇಧಗಳೆಂದರೆ 'ಮೂಡಲಪಾಯ' ಮತ್ತು 'ಪಡುವಲಪಾಯ'. ಕರ್ನಾಟಕದ ದಕ್ಷಿಣ ಭಾಗದಲ್ಲಿ ಕಂಡು ಬರುವ ಯಕ್ಷಗಾನ ಪದ್ಧತಿಯನ್ನು ಮೂಡಲಪಾಯವೆಂದೂ, ಪಡುವಲಪಾಯವೆಂದೂ ಸ್ಥೂಲವಾಗಿ ವಿಭಜಿಸಲಾಗಿದೆ. ಉತ್ತರ ಕರ್ನಾಟಕದ 'ದೊಡ್ಡಾಟ'ವೆಂಬ ಬಯಲಾಟದ ಪ್ರಕಾರವನ್ನು ಮೂಡಲಪಾಯದ ಗುಂಪಿಗೆ ಸೇರಿಸುತ್ತಾರೆ. ಉತ್ತರ ಕರ್ನಾಟಕದಲ್ಲಿ ಕಂಡು ಬರುವ 'ಸಣ್ಣಾಟ'ಗಳೂ ಕೂಡಾ ಯಕ್ಷಗಾನ ಬಯಲಾಟದ ಪ್ರಭೇದಗಳೇ ಆಗಿವೆ. ಶ್ರೀಕೃಷ್ಣ ಪಾರಿಜಾತ,

ಸಂಗ್ಯಾ ಬಾಳ್ಯ, ದಾಸರಾಟ ಇವುಗಳೆಲ್ಲಾ ಸಣ್ಣಾಟದ ಪ್ರಭೇದಗಳೇ ಆಗಿವೆ. ಮೂಡಲಪಾಯ ಯಕ್ಷಗಾನ ಬಯಲಾಟವು ಕರ್ನಾಟಕದ ತುಮಕೂರು, ಬೆಂಗಳೂರು, ಮಂಡ್ಯ, ಮೈಸೂರು, ಕೋಲಾರ, ಚಿತ್ರದುರ್ಗ, ಹಾಸನ, ಬಳ್ಳಾರಿ, ಧಾರವಾಡ, ಬಿಜಾಪುರ, ರಾಯಚೂರು, ಬೆಳಗಾವಿ ಪ್ರದೇಶಗಳಲ್ಲಿ ಕಂಡು ಬರುತ್ತದೆ. ಮೂಡಲಪಾಯ ಮತ್ತು ಪಡುವಲಪಾಯ ಯಕ್ಷಗಾನಗಳಲ್ಲಿ ಸ್ಪಷ್ಟ ವ್ಯತ್ಯಾಸಗಳು ಗೋಚರಿಸುತ್ತದೆ. ದಕ್ಷಿಣಕನ್ನಡ ಮತ್ತು ಉತ್ತರಕನ್ನಡ ಜಿಲ್ಲೆಗಳಲ್ಲಿ ಪ್ರಚಾರದಲ್ಲಿರುವ ಯಕ್ಷಗಾನ ಬಯಲಾಟದ ಪ್ರಭೇದವನ್ನು 'ಪಡುವಲಪಾಯ'ಎಂದು ಗುರುತಿಸಲಾಗಿದೆ. ಪಡುವಲಪಾಯದಲ್ಲಿ 'ತೆಂಕುತಿಟ್ಟು' ಮತ್ತು 'ಬಡಗುತಿಟ್ಟು' ಎಂಬ ಎರಡು ಪ್ರಭೇದಗಳಿವೆ. ಉಡುಪಿಯನ್ನು ಕೇಂದ್ರವಾಗಿರಿಸಿಕೊಂಡು ಅದರ ಉತ್ತರ ಭಾಗದ ಯಕ್ಷಗಾನವನ್ನು 'ಬಡಗುತಿಟ್ಟು' ಎಂದೂ, ತೆಂಕುಭಾಗದ ಯಕ್ಷಗಾನವನ್ನು 'ತೆಂಕುತಿಟ್ಟು' ಎಂದೂ ಕರೆಯುತ್ತಾರೆ. ಉತ್ತರಕನ್ನಡ ಜಿಲ್ಲೆಯ ಯಕ್ಷಗಾನವು ಬಡಗುತಿಟ್ಟಿನಲ್ಲಿಯೇ ಕಂಡು ಬಂದರೂ ಅದರಲ್ಲಿ ಅನೇಕ ಭಿನ್ನತೆಗಳಿವೆ. ಇದನ್ನು ಅಮೃತಸೋಮೇಶ್ವರರು 'ಉತ್ತರಕನ್ನಡದ ಮಟ್ಟು' ಎಂದು ಕರೆದಿದ್ದಾರೆ. ಇದನ್ನು 'ಬಡಾ ಬಡಗುತಿಟ್ಟು' ಅಂತಲೂ ಕರೆಯುತ್ತಾರೆ.

ಕರ್ನಾಟಕದ ಅತ್ಯುನ್ನತ ಪ್ರದರ್ಶನ ಕಲೆಗಳಲ್ಲಿ ಯಕ್ಷಗಾನ ಬಯಲಾಟವು ಅಗ್ರಸ್ಥಾನವನ್ನು ಪಡೆಯುತ್ತದೆ. ಕರ್ನಾಟಕದಾದ್ಯಂತ ಪ್ರಾದೇಶಿಕ ಭೇದಗಳೊಡನೆ ಕಂಡು ಬರುವ ಈ ಯಕ್ಷಗಾನ ತನ್ನ ಎಲ್ಲಾ ವೈವಿಧ್ಯತೆಗಳೊಡನೆ ಕರಾವಳಿಯಲ್ಲಿ ಸಮೃಧ್ಧವಾಗಿ ಬೆಳೆದು ಬಂದಿದೆ. ಭಾರತೀಯ ಪುರಾಣಗಳ ಸಂದೇಶವನ್ನು, ಭಾರತೀಯ ಸಂಸ್ಕೃತಿಯ ಸಂದೇಶವನ್ನು ಶ್ರೀಸಾಮಾನ್ಯನ ಚಿತ್ತಕ್ಕೆ ವರ್ಗಾಯಿಸುವ ಕಾಯಕವನ್ನು ಯಕ್ಷಗಾನ ಶತಮಾನಗಳಿಂದ ಮಾಡುತ್ತಾ ಬಂದಿದೆ. ಕರಾವಳಿ ಜಿಲ್ಲೆ ಹಾಗೂ ಮಳೆನಾಡಿನಲ್ಲಿ ಒಂದು ಕಾಲದಲ್ಲಿ ಬಹುತೇಕ ಅನಕ್ಷರಸ್ಥರೇ ಆಗಿದ್ದ ಜನರನ್ನು ಸಾಂಸ್ಕೃತಿಕವಾಗಿ ಸಂಪನ್ನರಾಗಿಸುವಲ್ಲಿ ಯಕ್ಷಗಾನದ ಪಾತ್ರ ಮಹತ್ತ್ವದ್ದು. ನಾಲ್ಕು ಕಂಬಗಳ ಮಧ್ಯೆ ವೈಭವೀಕೃತಗೊಂಡು ಪ್ರೇಕ್ಷಕರನ್ನು ಲೋಕಾಂತರ ವಿಹಾರಕ್ಕೊಯ್ಯಬಲ್ಲ ಯಕ್ಷಗಾನದಲ್ಲಿ ಕಲಾವಿದರ ಪಾತ್ರವೂ ಬಹಳ ಮಹತ್ವದ್ದಾಗಿದೆ.

ಯಕ್ಷಗಾನ ಕಲಾವಿದರನ್ನು ಹೊರತುಪಡಿಸಿ ಯಕ್ಷಗಾನ ಕಲೆಯ ಕುರಿತು ಕಲ್ಪಿಸುವುದೇ ಸಾಧ್ಯವಿಲ್ಲ, ಯಕ್ಷಗಾನ ಕಲೆಯ ಮೂಲವೇ ಯಕ್ಷಗಾನ ಕಲಾವಿದರಾಗಿದ್ದಾರೆ. ಜಗತ್ತಿನ ಶ್ರೇಷ್ಠ ದೃಶ್ಯಕಲೆಗಳಲ್ಲಿ ಒಂದಾಗಿರುವ ಯಕ್ಷಗಾನವನ್ನು ಉಳಿಸಿಬೆಳೆಸುವಲ್ಲಿ ಯಕ್ಷಗಾನ ಕಲಾವಿದರ ಪಾತ್ರವೂ ಅತ್ಯಂತ ಮಹತ್ವವಾದುದು. ಹಲವಾರು ವರ್ಷಗಳ ಸುದೀರ್ಘ ಹಾಗೂ ವೈಶಿಷ್ಟ್ಯಪೂರ್ಣವಾದ ಇತಿಹಾಸವನ್ನು ಯಕ್ಷಗಾನ ಕಲೆಯು ಹೊಂದಿದ್ದು, ಇದು ಕರಾವಳಿ ಕರ್ನಾಟಕ ಮಾತ್ರವಲ್ಲ ಇಂದು ರಾಜ್ಯ, ದೇಶ ಹಾಗೂ ವಿದೇಶಗಳಲ್ಲಿಯೂ ಪ್ರದರ್ಶನಗೊಂಡು ತನ್ನ ಭವ್ಯ ಪರಂಪರೆಯ ಸೊಗಡನ್ನು ವಿಸ್ತರಿಸಿಕೊಂಡಿದೆ. ಈ ಮಣ್ಣಿನಲ್ಲೇ ಹುಟ್ಟಿಬೆಳೆದ ಯಕ್ಷಗಾನ ಕಲೆಯು ಭವ್ಯ ಪರಂಪರೆಯೊಂದಿಗೆ ನಮ್ಮ ಸಾಂಸ್ಕೃತಿಕ ಹೆಗ್ಗುರುತಾಗಿ ಗುರುತಿಸಿಕೊಳ್ಳುವುದಕ್ಕೆ ಯಕ್ಷಗಾನಕ್ಕಾಗಿ ತನ್ನ ಜೀವನವನ್ನೇ ಮುಡಿಪಾಗಿರಿಸಿ ಕಲೆಯ ಸಂರಕ್ಷಣೆಗಾಗಿ ಪರಿಶ್ರಮದ ಬೆವರು ಸುರಿಸಿದ ಅದೆಷ್ಟೋ ಹಿರಿಯ ಕಲಾವಿದರು ಹಾಗೂ ಜೊತೆಗೆ ಇಂದಿಗೂ ಯಕ್ಷಗಾನ ರಂಗದಲ್ಲಿ ದುಡಿಯುತ್ತಿರುವ ಕಲಾವಿದರೇ ಕಾರಣಕರ್ತರಾಗಿದ್ದಾರೆ. ಯಕ್ಷಗಾನವನ್ನು ಶ್ರೇಷ್ಠತೆಯತ್ತ ಬೆಳೆಸಿದ ಕೀರ್ತಿ ಯಕ್ಷಗಾನ ಕಲಾವಿದರಿಗೆ ಸಲ್ಲುತ್ತದೆ. ಆದರಿಂದಾಗಿಯೇ ಯಕ್ಷಗಾನ ಕಲೆಯು ಈ ನೆಲದಲ್ಲಿ ಇಂದಿಗೂ ಸಮೃಧ್ಧವಾಗಿ ಬೆಳೆದುನಿಂತಿದೆ.

ಯಕ್ಷಗಾನಕ್ಕೆ ಸಂಬಂಧಿಸಿದಂತೆ ಕಲಾವಿದರಲ್ಲಿ ಮುಖ್ಯವಾಗಿ ಹವ್ಯಾಸಿ ಕಲಾವಿದರು ಮತ್ತು ವೃತ್ತಿಕಲಾವಿದರು ಎಂಬ ಎರಡು ವರ್ಗವನ್ನು ಗುರುತಿಸಬಹುದು. ಹವ್ಯಾಸಿ ಕಲಾವಿದರು ಇತರ ವೃತ್ತಿಯೊಂದಿಗೆ ಯಕ್ಷಗಾನ ಕಲೆಯ ಪರಂಪರೆಯನ್ನು ಬೆಂಬಲಿಸುವುದು ಇವರ ಮುಖ್ಯ

ಕಾಳಜಿಯಾಗಿರುತ್ತದೆ. ವೃತ್ತಿಕಲಾವಿದರು ಯಕ್ಷಗಾನವನ್ನೇ ಪ್ರಮುಖ ವೃತ್ತಿಯನ್ನಾಗಿ ಸ್ವೀಕರಿಸಿರುತ್ತಾರೆ. ವೃತ್ತಿಕಲಾವಿದರಿಗೆ ಪರಂಪರೆಯನ್ನು ಬೆಂಬಲಿಸುವುದರ ಜೊತೆಗೆ ದಿನನಿತ್ಯ ಪ್ರೇಕ್ಷಕನ ಸವಾಲುಗಳನ್ನು ಎದುರಿಸಬೇಕಾದ ಸನ್ನಿವೇಶವಿರುತ್ತದೆ.

ಯಕ್ಷಗಾನ ನಡೆದುಬಂದ ಹಾದಿ ಸುಗಮವಾಗಿರಲಿಲ್ಲ. ಹಲವಾರು ಏರಿಳಿತಗಳ ನಡುವೆ ಯಕ್ಷಗಾನವು ಹೇಗೆ ನಡೆದು ಬಂದಿವೆಯೋ ಹಾಗೆಯೇ ಯಕ್ಷಗಾನಕ್ಕಾಗಿ ಸೇವೆ ಸಲ್ಲಿಸುತ್ತಾ ಬಂದಿರುವ ಕಲಾವಿದರ ಬದುಕಿನಲ್ಲಿಯೂ ಹಲವಾರು ವೈಪರಿತ್ಯಗಳು, ಏರುಪೇರುಗಳಾಗಿರುವುದನ್ನು ಕಾಣಬಹುದು. ಉದಾತ್ತವೂ ಪುಣ್ಯಕರವೂ ಧರ್ಮ ಪ್ರಭೋಧನಾತ್ಮಕವೂ ಎಂದು ಕೊಂಡಾಡಲ್ಪಟ್ಟ ಯಕ್ಷಗಾನದ ಕುರಿತು ಅದೇ ಯಕ್ಷಗಾನ ಕ್ಷೇತ್ರದಲ್ಲಿ ದುಡಿದು ಅನ್ನ ಸಂಪಾದಿಸಿದ ಕಲಾವಿದರು ನಾನಾ ಕಷ್ಟಗಳಿಂದ ಬಳಲಿ ಹೋಗಿದ್ದರು. ಯಕ್ಷಗಾನದ ಕಲೆಯ ಮೇಲಿನ ಆಕರ್ಷಣೆ, ಪ್ರೀತಿಯಿಂದ ವೃತ್ತಿಗಿಳಿದಿದ್ದ ಅಂದಿನ ಕಾಲದ ಕಲಾವಿದರು ಹಲವಾರು ಸಂಕಷ್ಟಗಳ ನಡುವೆಯೂ ಯಕ್ಷಗಾನದ ಸಂಪ್ರದಾಯಕ್ಕೆ ಯಾವುದೇ ಚ್ಯುತಿ ಬಾರದಂತೆ ಯಕ್ಷಗಾನ ಕಲೆಯನ್ನು ಮುಂದುವರಿಸಿಕೊಂಡು ಬಂದಿದ್ದಾರೆ.

ಯಕ್ಷಗಾನವೆಂದರೆ, ಕಲಾವಿದರೆಂದರೆ ಹೀನಾಯವಾಗಿ ನೋಡುವ ಕಾಲವೂ ಇತ್ತು. ಸಾರಿಗೆ ಸಂಪರ್ಕಗಳು ಇಲ್ಲದೇ ಇದ್ದ ಕಾಲದಲ್ಲಿ ಅಥವಾ ಕಡಿಮೆ ಇರುವ ಕಾಲದಲ್ಲಿ ಒಂದೂರಿನಿಂದ ಮತ್ತೊಂದು ಊರಿಗೆ ನಡೆದುಕೊಂಡೇ ತಮ್ಮ ತಮ್ಮ ವೇಷಭೂಷಣಗಳ ಪೆಟ್ಟಿಗೆಗಳನ್ನು ಹೊತ್ತುಕೊಂಡು ಯಕ್ಷಗಾನ ಸ್ಥಳಕ್ಕೆ ಮುಟ್ಟಬೇಕಿತ್ತು. ಇಂತಹ ಕೆಲವೊಂದು ಸಂದರ್ಭದಲ್ಲಿ ಕಲಾವಿದರಿಗೆ ನಿದ್ದೆಗೂ ಅವಕಾಶವಿರಲಿಲ್ಲ. ಅಂದು ಪ್ರದರ್ಶನ ಸಿಗಲಿಕ್ಕೇ ಅಷ್ಟೇ ಕಷ್ಟಗಳಿದ್ದುವು. ಆಗ ಹಣ ಸಂಪಾದನೆಗಿಂತ ಅನ್ನ ಸಂಪಾದನೆಗಾಗಿಯೇ ಕಲಾವಿದರು ಕಷ್ಟ ಪಡುತ್ತಿದ್ದರು. ಈ ಸಂಕಷ್ಟಗಳ ನಡುವೆ ಕಲಾವಿದರಿಗೆ ಸಾಮಾಜಿಕವಾಗಿಯೂ ಮಾನ್ಯತೆಗಳಿರಲಿಲ್ಲ. ಕಲಾವಿದರೆಂದರೆ ಊರೂರು ಅಲೆದಾಡುವವರು, ದುಶ್ಚಟಗಳ ದಾಸರು ಎಂಬ ಹಣೆಪಟ್ಟಿಯೂ ಇವರ ಮೇಲಿತ್ತು. ಯಕ್ಷಗಾನ ಕಲಾವಿದರಿಗೆ ಹೆಣ್ಣು ಕೊಡುವುದಕ್ಕೂ ಹಿಂಜರಿಯುವ ಕಾಲವಿತ್ತು. ಇವುಗಳ ನಡುವೆ ಸಮಾಜದಲ್ಲಿ ಮೇಲ್ವರ್ಗದವರು ಎನಿಸಿಕೊಂಡಿದ್ದವರಿಗೆ ಯಕ್ಷಗಾನ ಮಾಡುವುದು, ಯಕ್ಷಗಾನ ನೋಡುವುದಕ್ಕೂ ನಿಷೇದವಿತ್ತು. ಬಳಿಕ ಕಾಲ ಬದಲಾದಂತೆ ಯಕ್ಷಗಾನ ಕ್ಷೇತ್ರದಲ್ಲಿಯೂ ಹಲಾವರು ಬದಲಾವಣೆಗಳಾದಂತೆ ಕಲಾವಿದರ ಬದುಕಿನಲ್ಲಿಯೂ ಅವರ ಸಾಮಾಜಿಕ ಸ್ಥಿತಿಗತಿಯಲ್ಲಿಯೂ ಬದಲಾವಣೆಗಳು ನಡೆಯುತ್ತಾ ಬಂದಿವೆ.

ಹಿಂದಿನ ಕಾಲಕ್ಕೆ ಹೋಲಿಸಿದರೆ ಇಂದಿನ ಪರಿಸ್ಥಿತಿಯ ಕಲಾವಿದರು ಮೊದಲಿನ ಹಾಗೆ ಬಡವರು ಎಂದು ಹೇಳುವಂತಿಲ್ಲ. ದುಡಿಯುವ ಮನಸ್ಸುಳ್ಳವನಿಗೆ ಹೊಟ್ಟೆ ಬಟ್ಟೆಗೆ ಕೊರತೆ ಎದುರಾಗದು ಎಂದು ಹೇಳಬಹುದು. ಇಂದು ಅನುಕೂಲತೆಗಳು ಹೆಚ್ಚಿದ್ದರೂ ಯಕ್ಷಗಾನ ವೃತ್ತಿ ಕಲಾವಿದರ ಪರಿಸ್ಥಿತಿಯು ಹಸನಾಗಿಲ್ಲ. ಬದುಕಿನ ಅಭದ್ರತೆ ಯಕ್ಷಗಾನ ಕಲಾವಿದರನ್ನು ಕಾಡುತ್ತಿದೆ. ಹಿಂದೆ ಇದ್ದ ಕೂಡು ಕುಟುಂಬಗಳಿಂದ ಕಲಾವಿದರು ಆರು ತಿಂಗಳು ಹೊರಗಿರುತ್ತಿದ್ದುದಕ್ಕೂ ಇಂದು ವಿಭಕ್ತ ಕುಟುಂಬದಲ್ಲಿ ಮನೆಯಲ್ಲಿ ಹೆಂಡತಿ ಮಕ್ಕಳನ್ನು ಬಿಟ್ಟು ಮೇಳಕ್ಕೆ ಬರುವ ಕಲಾವಿದರ ಮಾನಸಿಕ ಒತ್ತಡಕ್ಕೂ ವ್ಯತ್ಯಾಸವನ್ನು ಕಾಣಬಹುದು. ಹೀಗಾದಾಗ ಕಲೆಯ ಕಸುಬಿನಲ್ಲಿ ತೊಡಗಿಸಿಕೊಳ್ಳುವಿಕೆಯಲ್ಲೂ ವ್ಯತ್ಯಾಸವಾಗುತ್ತದೆ. ಅಲ್ಲದೆ ವೃತ್ತಿ ವೈರಾಗ್ಯ ಮೂಡುವುದರಲ್ಲಿಯೂ ಆಶ್ಚರ್ಯವಿಲ್ಲ. ಅನೇಕ ಕಲಾವಿದರು ಯಕ್ಷಗಾನವನ್ನು, ಯಕ್ಷಗಾನ ಕಲೆಯನ್ನು ಆರಾಧಿಸುವ, ಆಸ್ವಾಧಿಸುವ ಮತ್ತು ಪ್ರೀತಿಸುವ ಮನೋಭಾವನೆಯವರೇ ಆಗಿದ್ದರೂ ಕೂಡಾ ಯಕ್ಷಗಾನ ನನ್ನ ಕಾಲಕ್ಕೆ ಸಾಕು, ನನ್ನ ಮಕ್ಕಳಿಗೆ ಈ ಕಷ್ಟ ಬೇಡ ಎನ್ನುವವರೇ ಹೆಚ್ಚಾಗಿದ್ದಾರೆ. ಯಕ್ಷಗಾನ ಎಂಬ ಸಾಂಸ್ಕೃತಿಕ ಶ್ರೀಮಂತ ಕಲೆಯಲ್ಲಿ ಇಂದಿಗೂ ಹೆಚ್ಚಿನ ಯಕ್ಷಗಾನ ಕಲಾವಿದರು ಆರ್ಥಿಕವಾಗಿ, ಸಾಮಾಜಿಕವಾಗಿ ಹಿಂದೆ ಉಳಿದುಕೊಂಡಿರುವುದಕ್ಕೆ ಹಲವಾರು ಕಾರಣಗಳೂ ಇರಬಹುದು. ಯಕ್ಷಗಾನವನ್ನು ಕೇವಲ ಧಾರ್ಮಿಕ, ಮನೋರಂಜನೆಯ ವಸ್ತುವನ್ನಾಗಿ ಮಾತ್ರ ನೋಡದೆ ಸಾಮಾಜಿಕ ಸಂಸ್ಥೆಯನ್ನಾಗಿ ಪರಿಗಣಿಸಿ, ಕಲೆಗಾಗಿ ಜೀವನವನ್ನೇ

ಮುಡಿಪಾಗಿಟ್ಟಿರುವ ಕಲಾವಿದರ ಬದುಕಿನ ವಾಸ್ತವತೆಯ ಬಗ್ಗೆ ಸಮಾಜಶಾಸ್ತ್ರೀಯ ನೆಲೆಯಲ್ಲಿ ಅಧ್ಯಯನ ಮಾಡುವ ಅಗತ್ಯವಿದೆ. ಆಧುನಿಕತೆ, ವರ್ತಮಾನದ ಸ್ಥಿತಿಗತಿಗಳ ನಡುವೆ ಯಕ್ಷಗಾನ ಮತ್ತು ಕಲಾವಿದನ ಆರ್ಥಿಕ, ಸಾಮಾಜಿಕ ಸ್ಥಿತಿಗತಿಯನ್ನು ಅರ್ಥಮಾಡಿಕೊಳ್ಳುವಲ್ಲಿ ಹಾಗೂ ಪ್ರಸ್ತುತ ಕಾಲದ ವೃತ್ತಿಕಲಾವಿದರ ಮುಂದಿರುವ ಸವಾಲುಗಳ ಬಗ್ಗೆ ತಿಳಿದುಕೊಳ್ಳಲು ಈ ಅಧ್ಯಯನವು ಮಹತ್ವಪೂರ್ಣವಾಗಿದೆ.

ಅಧ್ಯಯನದ ಮಹತ್ವ

ಯಕ್ಷಗಾನವು ಕರಾವಳಿ ಕರ್ನಾಟಕದ ಶ್ರೀಮಂತ ಕಲೆಯಾಗಿದೆ. ನಾಟ್ಯ, ಗಾನ, ಬಣ್ಣ, ಅಭಿನಯ ಸೇರಿದಂತೆ ಸಮೃದ್ಧವೂ ಆದ ಸಮಷ್ಠಿ ಕಲೆಯಾಗಿದೆ. ಸಾಂಸ್ಕೃತಿಕವಾಗಿ ಮತ್ತು ಸಾಮಾಜಿಕವಾಗಿ ಯಕ್ಷಗಾನವು ಕರಾವಳಿ ಕರ್ನಾಟಕದಲ್ಲಿ ತನ್ನದೇ ಆದ ಪರಿಣಾಮವನ್ನು ಬೀರಿದೆ. ಯಕ್ಷಗಾನದ ಸ್ವರೂಪ, ಪ್ರಭೇದಗಳು ಮತ್ತು ಕಲಾಪ್ರಕಾರಗಳನ್ನು ಈಗಾಗಲೇ ವಿವರಿಸಲಾಗಿದೆ. ಯಕ್ಷಗಾನದ ಬಗ್ಗೆ ಈಗಾಗಲೇ ಬಹಳಷ್ಟು ಅಧ್ಯಯನಗಳು ನಡೆದಿವೆ. ಹೀಗೆ ಈವರೆಗಿನ ಸಂಶೋಧನಾ ಅಧ್ಯಯನಗಳನ್ನು ಗಮನಿಸಿದಾಗ ಯಕ್ಷಗಾನದ ಹಲವು ಮಗ್ಗಲುಗಳನ್ನು ಪರಿಚಯಿಸುವ ಪ್ರಯತ್ನಗಳು ನಡೆದಿರುವುದನ್ನು ಗಮನಿಸಬಹುದು. ಯಕ್ಷಗಾನವನ್ನು ಪ್ರಧಾನವಾಗಿ ಧಾರ್ಮಿಕ ರಂಗಭೂಮಿಯಾಗಿ ಪರಿಗಣಿಸಲಾಗಿದೆ. ಪುರಾಣಗಳ ಕಥಾನಕಗಳನ್ನು ಆಧರಿಸಿದ ಪ್ರಸಂಗಗಳ ಪ್ರದರ್ಶನಗಳು ಯಕ್ಷಗಾನದ ಮೂಲಕ ನಡೆಯುತ್ತವೆ. ಯಕ್ಷಗಾನವನ್ನು ಒಂದು ಕಲಾಪ್ರಕಾರವಾಗಿ ಮತ್ತು ಧರ್ಮಪ್ರಚಾರವನ್ನು ಮಾಡುವ 'ಧಾರ್ಮಿಕ ಸಂಸ್ಥೆಯಾಗಿ' ಪರಿಭಾವಿಸಿದ್ದೇ ಹೆಚ್ಚು. ಯಕ್ಷಗಾನವನ್ನು 'ಸಾಮಾಜಿಕ ಸಂಸ್ಥೆ' (Social Institution)ಯನ್ನಾಗಿ ಪರಿಗಣಿಸಿ ಇದರ ಸಾಮಾಜಿಕ ಸಂರಚನೆಯ ಬಗ್ಗೆ ವಿಶ್ಲೇಷಿಸುವ ಅಗತ್ಯವಿದೆ. ಯಕ್ಷಗಾನ ಬೆಳವಣಿಗೆಯಲ್ಲಿ ಕಲಾವಿದರ ಪಾತ್ರ, ಕೊಡುಗೆ ಅತ್ಯಂತ ಪ್ರಮುಖವಾದುದು. ವಾಸ್ತವಿಕವಾಗಿ ಕಲಾವಿದರನ್ನು ಹೊರತುಪಡಿಸಿ ಯಕ್ಷಗಾನ ಕಲೆಯ ಬಗ್ಗೆ ಕಲ್ಪಿಸುವುದೇ ಸಾಧ್ಯವಿಲ್ಲ. ಆದರೆ ಈವರೆಗೆ ನಡೆದ ಹೆಚ್ಚಿನ ಅಧ್ಯಯನಗಳಲ್ಲಿ ಯಕ್ಷಗಾನ ಕಲಾವಿದರ ಬಗ್ಗೆ ಸೂಕ್ಷ್ಮವಾಗಿ ಪರಿಚಯ ಮಾಡಿದ್ದರೂ ವೃತ್ತಿ ಕಲಾವಿದ ಸಮೂಹದ ಬದುಕು, ಅವರ ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳ ಬಗ್ಗೆ, ಅವರು ಎದುರಿಸುತ್ತಿರುವ ಸಮಸ್ಯೆ ಹಾಗೂ ಸವಾಲುಗಳ ಕುರಿತು ವ್ಯಾಪಕವಾದ ಅಧ್ಯಯನಗಳು ನಡೆದಿರುವುದಿಲ್ಲ. ಯಕ್ಷಗಾನ ಪರಿಕಲ್ಪನೆಯ ಅತ್ಯಂತ ಮುಖ್ಯ ಘಟಕವಾಗಿರುವ ಕಲಾವಿದರ ಸಾಮಾಜಿಕ ಬದುಕನ್ನು ಸಮಾಜಶಾಸ್ತ್ರೀಯ ನೆಲೆಯಲ್ಲಿ ಪರಿಶೀಲಿಸುವ ಅಗತ್ಯವಿದೆ. ಈ ಹಿನ್ನೆಲೆಯಲ್ಲಿ ಹಾಗೂ ಈ ಕೊರತೆಯನ್ನು ನೀಗಿಸುವ ಒಂದು ಪ್ರಯತ್ನವಾಗಿ ಈ ಸಂಶೋಧನಾ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಸಾಹಿತ್ಯ ಪರಾಮರ್ಶೆ

ಪುರುಷೋತ್ತಮ ಬಿಳಿಮಲೆ(1997)ಕೂಡುಕಟ್ಟು ಎಂಬ ಕೃತಿಯಲ್ಲಿ ಯಕ್ಷಗಾನದ ಪ್ರಾಂತಭೇದ, ಪ್ರಾದೇಶಿಕ ವೈವಿಧ್ಯತೆ, ಯಕ್ಷಗಾನ ಮೇಳಗಳು ಹಾಗೂ ಕಲಾವಿದರ ಬಗ್ಗೆ ಸೈದ್ಧಾಂತಿಕವಾಗಿ ಇಲ್ಲಿ ಚರ್ಚಿಸಿದ್ದಾರೆ. ಪ್ರಮುಖವಾಗಿ ಈ ಲೇಖನದಲ್ಲಿ ಯಕ್ಷಗಾನ ಕಲಾವಿದರು ಮತ್ತು ಸಾಮಾಜಿಕ ಹಿನ್ನೆಲೆಯ ಬಗ್ಗೆ ವಿವರಿಸಿದ್ದಾರೆ. **ಡಾ.ಎಚ್.ಕೆ.ರಾಮನಾಥ್(2004)** ಅವರು ರಂಗಸಂಬಂಧ ಎಂಬ ಕೃತಿಯಲ್ಲಿ, ರಂಗಭೂಮಿಯ ಹುಟ್ಟುಗುಣವೇ ಕಾಲದಿಂದ ಕಾಲಕ್ಕೆ ಪ್ರಯೋಗದಿಂದ ಪ್ರಯೋಗಕ್ಕೆ ಬದಲಾವಣೆ ಹೊಂದುವುದು. ಒಂದು ಕಾಲದಲ್ಲಿ ಇದ್ದಂತೆ ಮತ್ತೊಂದು ಕಾಲದಲ್ಲಿ ಇರಲಾರದು. ಇರಬೇಕಾದುದೂ

ಇಲ್ಲ. ಇದು ವ್ಯತ್ಯಾಸ ಹೊಂದುತ್ತಲೇ ಇರುತ್ತದೆ. ಅಕ್ಷರ ಮಾಧ್ಯಮಕ್ಕಿಂತ ರಂಗಮಾಧ್ಯಮ ಅತ್ಯಂತ ಪ್ರಭಾವಶಾಲಿ ಎಂಬುದನ್ನು ಗುರುತಿಸಿದ್ದಾರೆ. **ಅಮೃತ ಸೋಮೇಶ್ವರ (1995)**ಯಕ್ಷಾಂದೋಳ ಎಂಬ ಕೃತಿಯಲ್ಲಿ ಯಕ್ಷಗಾನದ ಪ್ರಾಚೀನತೆ, ಅದರ ಮೂಲ ಸ್ವರೂಪದ ಬಗ್ಗೆ ವಿಶ್ಲೇಷಣೆ ನಡೆಸಿದ್ದಾರೆ.**ಡಾ.ಕೆ.ಶಿವರಾಮ ಕಾರಂತ**(2007) ಯಕ್ಷಗಾನ ಬಯಲಾಟ ಕೃತಿಯಲ್ಲಿ ಕನ್ನಡನಾಡಿನ ಯಕ್ಷಗಾನ ಬಯಲಾಟದ ಪರಂಪರೆ, ಬಯಲಾಟದ ಹುಟ್ಟು, ಯಕ್ಷಗಾನ ಕಲಾವಿದರು, ಯಕ್ಷಗಾನ ಬೆಳೆದುಬಂದ ದಾರಿಗಳ ಬಗ್ಗೆ ಇಲ್ಲಿ ತಿಳಿಸಿದ್ದಾರೆ. **ಅಮೃತ ಸೋಮೇಶ್ವರ(ಸಂ)(2007)** ಸುಂದರಕಾಂಡ ಕೃತಿಯಲ್ಲಿ ಕಲಾವಿದನ ಬಣ್ಣದ ಬದುಕಿನ ವೈಚಿತ್ರ್ಯಗಳು, ಒಳಸುಳಿಗಳು, ಕಲಾವಿದರ ನಡುವಿನ ಮೇಲ್ಜಾತಿ-ಕೆಳಜಾತಿ ಭಾವಗಳು, ಯಕ್ಷಗಾನ ರಂಗದಲ್ಲಿ ಮತ್ತು ಚೌಕಿಯಲ್ಲಿ ಕಲಾವಿದರು ಹಾಗೂ ಮೇಳಗಳು ಹಾಗೂ ಕಲಾವಿದರ ಸಂಕಷ್ಟಗಳ ಬಗೆಗಿನ ವಿವರಗಳು ಈ ಕೃತಿಯಲ್ಲಿವೆ.**ಡಾ.ಸಿ.ಆನಂದರಾಮ ಉಪಾಧ್ಯ(1986)** ಯಕ್ಷದರ್ಶನ ಕೃತಿಯಲ್ಲಿ ಕಲಾವಿದರ ಒಂದು ನೋಟ ಸಮಾಜಿಕ ಮೌಲ್ಯ, ಜೀವನ ಚರಿತ್ರೆ ಹಾಗೂ ಅನಿಸಿಕೆಗಳನ್ನು, ಯೋಜನೆಗಳನ್ನು, ಕಲಾವಿದರ ಅಭಿಪ್ರಾಯಗಳನ್ನು ಇಲ್ಲಿ ಚರ್ಚಿಸಲಾಗಿದೆ. **ಡಾ.ಎಂ.ಪ್ರಭಾಕರ ಜೋಶಿ(2006)**ಮುಡಿ ಎಂಬ ಕೃತಿಯಲ್ಲಿ ಆಧುನಿಕತೆಯು ಯಕ್ಷಗಾನ ಕಲೆಯ ಮೇಲೆ ಬೀರುವ ಪರಿಣಾಮ, ಯಕ್ಷಗಾನದ ಸವಾಲುಗಳು-ಪ್ರತಿಫಲನಗಳು, ಯಕ್ಷಗಾನದ ಸಮೃದ್ಧಿ ಮತ್ತು ಗೊಂದಲ, ಕಲೆ ಮೂಲ ಶೋಧನೆಯ ವಿಧಾನ, ಹರಕೆ ಬಯಲಾಟ ಮತ್ತು ಕಲಾರೂಪ, ಕಲೆ ಮತ್ತು ಆಧುನಿಕ ಸ್ಪಂದನೆ, ವಸ್ತು ಸಾಂಗತ್ಯ-ರೂಪನಿಷ್ಠೆ ಮುಂತಾದ ವಿಷಯಗಳನ್ನು ಈ ಕೃತಿಯಲ್ಲಿ ಡಾ.ಪ್ರಭಾಕರ ಜೋಶಿಯವರು ವಿವರಿಸಿದ್ದಾರೆ.**ಕೋಟಿಕಾರು ದೇರಣ್ಣ ರೈ(2004)**ತೆಂಕಣ ಯಕ್ಷಪಥದಲ್ಲಿ ಯಕ್ಷಗಾನ ಕಲಾವಿದರು ಸುಮಾರು 1940-50ರ ಕಾಲಘಟ್ಟದಲ್ಲಿ ಎದುರಿಸುತ್ತಿದ್ದ ಸಂಕಷ್ಟದ ದಿನಗಳನ್ನು ಈ ಕೃತಿಯಲ್ಲಿ ಚಿತ್ರಿಸಿದ್ದಾರೆ. ಯಕ್ಷಗಾನ ಮೇಳಗಳು, ಕಲಾವಿದರ ನೈಪುಣ್ಯತೆಗಳು, ಪರಿಶ್ರಮಗಳು ಮತ್ತು ಉತ್ತಮ ಯಕ್ಷಗಾನ ಕಲಾವಿದನಿಗಿರುವ ಮೌಲ್ಯಗಳ ಬಗ್ಗೆ ಅವರು ವಿವರಿಸಿದ್ದಾರೆ. **ಚಂದ್ರಶೇಖರ ದಾಮ್ಲೆ: (2013)** ಯಕ್ಷಗಾನ ರಂಗಭಾಷೆ ಕೃತಿಯಲ್ಲಿ ತುಳುನಾಡಿನ ಸಾಮಾಜಿಕ ಸ್ಥಿತ್ಯಂತರಗಳು, ಬದಲಾಗುತ್ತಿರುವ ಸಮಾಜದಲ್ಲಿ ಯಕ್ಷಗಾನ ಕಲೆ, ಬದಲಾಗುತ್ತಿರುವ ಮೌಲ್ಯ, ಯಕ್ಷಗಾನ ಪೋಷಣೆ, ಸಂರಕ್ಷಣೆ ಬಗೆಗೆ ವಿವರಿಸಿದ್ದಾರೆ.**ಕೆ.ಎಸ್.ಉಪಾಧ್ಯಾಯ(1987)** ಅವರು ನಮ್ಮೂರ ಯಕ್ಷರು ಎಂಬ ಕೃತಿಯಲ್ಲಿ ತಮ್ಮ ಯಕ್ಷಲೋಕದ ಪಯಣ ಮತ್ತು ಇತಿಹಾದೊಂದಿಗೆ ಯಕ್ಷಗಾನದ ನಂಟನ್ನು ಇಲ್ಲಿ ತೆರೆದಿಟ್ಟಿದ್ದಾರೆ. ಅಲ್ಲದೆ 1960-80 ರ ದಶಕದಲ್ಲ ವಿದೇಶಗಳಲ್ಲಿ ಹೋಗಿ ಯಕ್ಷಗಾನ ಪ್ರದರ್ಶಿಸಿದ ಅನುಭವನ್ನು ಸಹ ಕಲಾವಿದರ ನೆನಪಿನೊಂದಿಗೆ ಈ ಕೃತಿಯಲ್ಲಿ ಉಲ್ಲೇಖಿಸಿದ್ದಾರೆ. **ಪ್ರೊ.ಶ್ರೀಧರ ಉಪ್ಪೂರ(1998)** ಅವರು ಯಕ್ಷಗಾನ ಮತ್ತು ನಾಟಕ ಎಂಬ ಗ್ರಂಥದಲ್ಲಿ ವೃತ್ತಿಭೂಮಿಯಲ್ಲಿ ಯಕ್ಷಗಾನ ವೃತ್ತಿ ಕಲಾವಿದನಿಗೆ ಪ್ರಾಧಾನ್ಯತೆ, ಮಹತ್ವದ ವಿಚಾರಗಳ ಬಗೆಗೆ ತಿಳಿಸಿದ್ದಾರೆ. **ಡಾ.ಆನಂದರಾಮ ಉಪಾಧ್ಯ(2015)**: ಯಕ್ಷಚಿಂತನೆ ಎಂಬ ಕೃತಿಯಲ್ಲಿ ಸ್ವಾತಂತ್ರ್ಯೋತ್ತರ ಕಾಲದಲ್ಲಿ ಯಕ್ಷಗಾನ ರಂಗಭೂಮಿಯ ಪರಿಸ್ಥಿತಿಗಳು, , ಯಕ್ಷಗಾನ ಸಂಶೋಧನೆಯ ಮಜಲುಗಳು, ಯಕ್ಷಗಾನ ಸಾಹಿತ್ಯ ಮತ್ತು ಆವಿಷ್ಕಾರ ಚಿಂತನೆ, ಯಕ್ಷಗಾನ ಪ್ರಸಂಗದಲ್ಲಿ ಕೌಟುಂಬಿಕ ಚಿತ್ರಣ ಮೊದಲಾದ ವಿಚಾರಗಳನ್ನು ವಿವರಿಸಿದ್ದಾರೆ. **ಡಾ.ಎಂ.ಪ್ರಭಾಕರ ಜೋಶಿ(2015)** ತಮ್ಮ ಯಕ್ಷಗಾನ ಸ್ಥಿತಿಗತಿ ಎಂಬ ಕೃತಿಯಲ್ಲಿ ಯಕ್ಷಗಾನ ಶಾಸ್ತ್ರೀಯ ಪರಂಪರೆ ಮತ್ತು ಆಧುನಿಕ, ಅನ್ವಯಿಕ ಪ್ರಯೋಗ, ಯಕ್ಷಗಾನ ರಂಗಭೂಮಿಯ ಭವಿಷ್ಯ ಮತ್ತು ರಂಗಭೂಮಿಯ ಮತ್ತು ಮುನ್ನೋಟದ ಚಿಂತನೆಗಳ ಬಗ್ಗೆ ತಿಳಿಸಿದ್ದಾರೆ. **ವಾಸುದೇವ ಕಾಣೆಮಾರ್(2001), ಡಾ.ಸುಶೀಲಾ ಪಿ.ಉಪಾಧ್ಯಾಯ(1980), ಜಿ.ಎಸ್.ಭಟ್ಟ(1995), ಸದಾನಂದ ಹೆಗಡೆ ಹರಗಿ(2010), ಡಾ.ಬಸವರಾಜ ಮಲಶೆಟ್ಟಿ(1983), ಎಲ್.ಎಸ್.ಶಾಸ್ತ್ರಿ(2008), ಪಾದೆಕಲ್ಲು ವಿಷ್ಣು ಭಟ್(2010), ಮಾಧವಪೆರಾಜೆ (2000) , ಹೊಸ್ತೋಟ ಮಂಜುನಾಥ ಭಾಗವತ (2009), ಬೊಟ್ಟಿಕೆರೆ ಪುರುಷೋತ್ತಮ ಪೂಂಜ(2017), ಚಂದ್ರಶೇಖರ ದಾಮ್ಲೆ:**

(2013) –ಹೀಗೆ ಯಕ್ಷಗಾನ ಹಾಗೂ ಕಲಾವಿದರಿಗೆ ಸಂಬಂಧಿಸಿದ ಹಲವು ಅಧ್ಯಯನಗಳನ್ನು ವಿಮರ್ಶಿಸಲಾಗಿದೆ. ಆದರೆ ಪ್ರಮುಖವಾಗಿ ಕಲಾವಿದರ ಸಾಮಾಜಿಕ, ಆರ್ಥಿಕ ಸ್ಥಿತಿಗತಿ ಹಾಗೂ ಕಲಾವಿದರು ಎದುರಿಸುತ್ತಿರುವ ಸವಾಲುಗಳ ಬಗೆಗೆ ಹೆಚ್ಚಿನ ಅಧ್ಯಯನಗಳು ಕಂಡು ಬರುವುದಿಲ್ಲ. ಈ ಹಿನ್ನೆಲೆಯಲ್ಲಿ ಬದಲಾಗುತ್ತಿರುವ ಪರಿಸ್ಥಿತಿಯಲ್ಲಿ ಯಕ್ಷಗಾನ ವೃತ್ತಿ ಕಲಾವಿದನ ಬದುಕು, ಸ್ಥಿತಿಗತಿಗಳ ಬಗೆಗೆ ಸಮಾಜಶಾಸ್ತ್ರೀಯ ನೆಲೆಯಲ್ಲಿ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಈ ನಿಟ್ಟಿನಲ್ಲಿ ಯಕ್ಷಗಾನದ ಹಿರಿಯ ಕಲಾವಿದರು ಮತ್ತು ಯುವ ಕಲಾವಿದರ ಬದುಕು, ಅನುಭವ, ಸಾಮಾಜಿಕ ಸ್ಥಾನಮಾನ, ಆರ್ಥಿಕ ಸ್ಥಿತಿಗತಿಗಳನ್ನು ಸಮಾಜಶಾಸ್ತ್ರೀಯ ದೃಷ್ಟಿಯಿಂದ ವಿಶ್ಲೇಷಿಸುವುದು ಹೆಚ್ಚು ಪರಿಣಾಮಕಾರಿಯಾಗಿದೆ.

ಯಕ್ಷಗಾನದ ಇತಿಹಾಸವನ್ನು ಅವಲೋಕಿಸಿದಾಗ ಕೆಲವು ಮಹತ್ವದ ಸಂಗತಿಗಳು ಸ್ಪಷ್ಟವಾಗುತ್ತದೆ. ಒಂದು ಕಲಾಪ್ರಕಾರವಾಗಿ ಧಾರ್ಮಿಕ ಪ್ರಚಾರ ಮತ್ತು ಮನೋರಂಜನೆಯ ಉದ್ದೇಶಗಳನ್ನು ಇತಿಹಾಸದ ಮೊದಲಹಂತದಲ್ಲಿ ಹೊಂದಿದ್ದ ಯಕ್ಷಗಾನವು ಅನಂತರದ ಹಂತಗಳಲ್ಲಿ ಸಾಮಾಜಿಕ ಆಶಯಗಳನ್ನು ಮೈಗೂಡಿಸಿಕೊಂಡು ಬೆಳೆದುಬಂದಿರುವುದು ಕಂಡು ಬರುತ್ತವೆ. ಯಕ್ಷಗಾನವನ್ನು ಕಲಾಪ್ರಕಾರವಾಗಿ, 'ಧಾರ್ಮಿಕ ಸಂಸ್ಥೆ'ಯಾಗಿ ಪರಿಭಾವಿಸಿರುವುದೇ ಹೆಚ್ಚು. ಯಕ್ಷಗಾನವನ್ನು ಸಾಮಾಜಿಕ ಸಂಸ್ಥೆ((Social Institution)ಯಾಗಿ ಪರಿಗಣಿಸಿ ಇದರ ಸಾಮಾಜಿಕ ಸಂರಚನೆಯ ಬಗ್ಗೆ ವಿಶ್ಲೇಷಿಸುವ ಅಗತ್ಯತೆ ಇದೆ. ಯಕ್ಷಗಾನ ಮೇಳವೊಂದನ್ನು ರೂಪಿಸುವ ಸಾಮಾಜಿಕ ಅಂಶಗಳು(Social Factors) ಯಾವುವು? ಯಕ್ಷಗಾನ ಮೇಳದ ಪ್ರದರ್ಶನ ಮತ್ತು ಸಮಾಜದ ನಡುವೆ ಏರ್ಪಡುವ ಸಂಪರ್ಕದ ಸ್ವರೂಪವೇನು? ಸಾಮಾಜಿಕ ಸಂಸ್ಥೆಯಾಗಿ ಯಕ್ಷಗಾನವು ವ್ಯವಹರಿಸುವ ನೆಲೆಗಳು ಯಾವುವು? ನಮ್ಮ ಸಾಮಾಜಿಕ ವ್ಯವಸ್ಥೆಯಿಂದ (Social System) ಯಕ್ಷಗಾನವನ್ನು ಪ್ರತ್ಯೇಕವಾಗಿ ನೋಡುವುದು ಸರಿಯೇ? ಜನರ ಸಾಮಾಜಿಕ ಬದುಕಿನ ಮೇಲೆ ಯಕ್ಷಗಾನವು ಬೀರುವ ಪ್ರಭಾವಗಳೇನು? ಯಕ್ಷಗಾನ ಮೇಳದ ರಚನೆ ಮತ್ತು ಪ್ರದರ್ಶನದಲ್ಲಿ ಕಲಾವಿದರ ಪಾತ್ರವೇನು?– ಇಂತಹ ಪ್ರಶ್ನೆಗಳು ಬಹಳ ಮುಖ್ಯವಾಗುತ್ತವೆ. ಯಕ್ಷಗಾನ ಪರಿಕಲ್ಪನೆಯ ಅತ್ಯಂತ ಮುಖ್ಯ ಘಟಕವಾಗಿರುವ ಕಲಾವಿದರ ಸಾಮಾಜಿಕ ಬದುಕನ್ನು ಸಮಾಜಶಾಸ್ತ್ರೀಯ ನೆಲೆಯಲ್ಲಿ ಪರಿಶೀಲಿಸುವ ಅಗತ್ಯವಿದೆ. ವಾಸ್ತವಿಕವಾಗಿ ಕಲಾವಿದರಿಲ್ಲದೆ ಯಕ್ಷಗಾನಕ್ಕೆ ಅಸ್ತಿತ್ವವೇ ಇಲ್ಲ. ಯಕ್ಷಗಾನವನ್ನು ಸಾಮಾಜಿಕ ಸಂಸ್ಥೆ ಎಂದು ಪರಿಗಣಿಸಿ ಪ್ರಸ್ತುತ ಅಧ್ಯಯನವನ್ನು ನಡೆಸಲಾಗಿದೆ. ಕಲಾವಿದರು ಸೇರಿದಂತೆ ಯಕ್ಷಗಾನವನ್ನು ರೂಪಿಸಿದ ಸಾಮಾಜಿಕ ಅಂಶಗಳನ್ನು ವಿಶ್ಲೇಷಿಸಲಾಗಿದೆ. ಯಕ್ಷಗಾನ ಕಲಾವಿದರನ್ನು ಅಂಚಿನಿಂದ 'ಕೇಂದ್ರ'ಕ್ಕೆ ತಂದು ಇಡಿಯ ಯಕ್ಷಗಾನವನ್ನು ಸಮಾಜವಿಜ್ಞಾನದ ತತ್ವ, ಸಿದ್ಧಾಂತ ಮತ್ತು ಅಧ್ಯಯನ ವಿಧಾನಗಳನ್ನು ಬಳಸಿಕೊಂಡು ವಿಶ್ಲೇಷಿಸಲಾಗಿದೆ. ಯಕ್ಷಗಾನದ ಮೇಳಕ್ಕೆ ಸಂಬಂಧಿಸಿದಂತೆ ಇರುವ 'ಕುಟುಂಬ'ದ ಪರಿಕಲ್ಪನೆ, ಕಲಾವಿದರ ಕುಟುಂಬವನ್ನು ನಿರೂಪಿಸುವ ಅಂಶಗಳು, ಕಲಾವಿದರ ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳು, ಕುಟುಂಬದ ಸದಸ್ಯರಾಗಿರುವ ಕಲಾವಿದರ ಆರ್ಥಿಕ ಗಳಿಕೆ ಮತ್ತು ಸಂಬಳದ ಮೂಲಕ ಆಗುವ ಗಳಿಕೆಯ ವಿತರಣೆ, ಕಲಾವಿದರ ಶ್ರಮವನ್ನು ಅಳೆಯುವ ಮಾನದಂಡಗಳು, 'ಜಾತಿ'ಯನ್ನು ಮುರಿದು ಕಟ್ಟಲಾಗುವ 'ಕುಟುಂಬ'ದ ರಚನೆ ಮೊದಲಾದ ಮಹತ್ವದ ಸಾಮಾಜಿಕ ಅಂಶಗಳನ್ನು ಈ ಅಧ್ಯಯನದಲ್ಲಿ ವಿಶ್ಲೇಷಣೆಗೆ ಒಳಪಡಿಸುವ ಉದ್ದೇಶವನ್ನು ಇಟ್ಟುಕೊಳ್ಳಲಾಗಿದೆ. ಯಕ್ಷಗಾನ ಕಲಾವಿದರು ಪ್ರದರ್ಶನ ಸಂದರ್ಭದಲ್ಲಿ ಮಾಡುವ ಮುಖವರ್ಣಿಕೆ, ಕುಣಿತ, ಮಾತುಗಾರಿಕೆ– ಈ ಬಗೆಯ ಎಲ್ಲಾ ಕೆಲಸಗಳನ್ನು 'ದುಡಿಮೆ' ಎಂದು ಪರಿಗಣಿಸಲಾಗಿದೆ. ಕಲಾವಿದರ 'ಶ್ರಮ ಸಂಸ್ಕೃತಿ'ಯನ್ನು ಸಮಾಜ ವಿಜ್ಞಾನವು ನಿರೂಪಿಸುವ 'ದುಡಿಮೆ' ಅಥವಾ 'ಕೆಲಸ' ಎಂದು ಅರ್ಥೈಸಲಾಗಿದೆ. ಯಕ್ಷಗಾನ

ಕಲೆಯನ್ನು ಕಲಾವಿದರ 'ಆಸ್ತಿ' (Asset) ಎಂದು ಪರಿಗಣಿಸಿ ಇಂತಹ ಆಸ್ತಿಯ ಉತ್ಪಾದನಾ ವಿಧಾನ, ಸಂಪತ್ತಿನ ಗಳಿಕೆ ಮತ್ತು ವಿತರಣೆಯ ವಿಧಾನಗಳನ್ನು ಪ್ರಸ್ತುತ ಅಧ್ಯಯನದಲ್ಲಿ ಚರ್ಚಿಸಲು ಉದ್ದೇಶಿಸಲಾಗಿದೆ.

ಈ ಹಿನ್ನೆಲೆಯಲ್ಲಿ **ಅಧ್ಯಯನದ ಉದ್ದೇಶ**ಗಳನ್ನು ಈ ಕೆಳಗಿನಂತೆ ನೀಡಬಹುದಾಗಿದೆ.

1.ಕರ್ನಾಟಕದ ಶ್ರೀಮಂತ ಕಲೆ ಎಂದೆನಿಸಿಕೊಂಡಿರುವ ಯಕ್ಷಗಾನ ಕಲೆಯ ಸಾಹಿತ್ಯ, ವೇಷಭೂಷಣ, ಯಕ್ಷಗಾನದ ಆಹಾರ್ಯ, ಹಿಮ್ಮೇಳ, ಯಕ್ಷಗಾನ ತಾಳಮದ್ದಳೆ ಹೀಗೆ ಯಕ್ಷಗಾನವನ್ನು ಕಲಾಪ್ರಕಾರವಾಗಿ ಪರಿಗಣಿಸಿ ಹೆಚ್ಚಿನ ಎಲ್ಲಾ ವಿಭಾಗಗಳ ಬಗ್ಗೆಯೂ ಅಧ್ಯಯನ ನಡೆದಿವೆ. ಆದರೆ ಯಕ್ಷಗಾನವನ್ನು ಸಾಮಾಜಿಕ ಸಂಸ್ಥೆಯಾಗಿ ಪರಿಗಣಿಸಿ ಈ ಕಲೆಯ ಬೆನ್ನೆಲುಬು ಆಗಿರುವ ಕಲಾವಿದರ ಸಮೂಹವನ್ನು ಮೂಲವಾಗಿಟ್ಟುಕೊಂಡು ಸಮಾಜಶಾಸ್ತ್ರೀಯ ನೆಲೆಯಲ್ಲಿ ಯಾವುದೇ ವ್ಯಾಪಕವಾದ ಅಧ್ಯಯನಗಳು ನಡೆದಿರುವುದಿಲ್ಲ. ಆದ್ದರಿಂದ ಯಕ್ಷಗಾನ ವೃತ್ತಿ ಕಲಾವಿದರನ್ನು ಗುರಿಯಾಗಿರಿಸಿಕೊಂಡು ಅವರ ಬದುಕು ಹಾಗೂ ಸಾಮಾಜಿಕ ಸ್ಥಿತಿಗತಿಯನ್ನು ಕಂಡು ಹಿಡಿಯುವುದು.

2. ಯಕ್ಷಗಾನ ಕಲೆಯ ಉಳಿವು, ಬೆಳವಣಿಗೆ ಹಾಗೂ ಶ್ರೀಮಂತಿಕೆಯಲ್ಲಿ ಕಲಾವಿದನ ಸೃಜನಶೀಲತೆ, ನೈಪುಣ್ಯತೆ, ಕೌಶಲ ಹಾಗೂ ಅವರ ಪರಿಶ್ರಮ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಯಕ್ಷಗಾನ ಕಲೆಗಾಗಿ ತಮ್ಮ ಬದುಕನ್ನೇ ಸಮರ್ಪಿಸಿ ದುಡಿಯುತ್ತಿರುವ ಯಕ್ಷಗಾನದ ವೃತ್ತಿಕಲಾವಿದರಲ್ಲಿ ಬಹುಕಲಾವಿದರು ಆರ್ಥಿಕವಾಗಿ ಹಿಂದುಳಿದವರೇ ಆಗಿದ್ದಾರೆ. ಕಲೆಯ ಜೀವಂತಿಕೆಯ ದೃಷ್ಟಿಯಿಂದ ಕಲಾವಿದರ ಬಣ್ಣದ ಬದುಕಿನ ಹಿಂದೆ ಅಡಗಿರುವ ನಿಜ ಬದುಕು ಚರ್ಚೆಗೆ ಒಳಗಾಗಬೇಕಿದೆ ಆದ್ದರಿಂದ ಯಕ್ಷಗಾನದ ವೃತ್ತಿಕಲಾವಿದರ ಆರ್ಥಿಕ ಸ್ಥಿತಿಗತಿಯನ್ನು ಕಂಡು ಹಿಡಿಯುವುದು.

3. ಯಕ್ಷಗಾನವು ಆರಂಭದಿಂದ ಹಲವಾರು ಏರುಪೇರುಗಳೊಂದಿಗೆ ಬೆಳೆದು ಬಂದ ಹಾದಿಯ ಬಗ್ಗೆ ವಿವಿಧ ರೀತಿಯ ಅಭಿಪ್ರಾಯ ವ್ಯತ್ಯಾಸಗಳಿವೆ. ಅನೇಕ ಹಿರಿಯ ವಿದ್ವಾಂಸರು ಯಕ್ಷಗಾನ ಕಲೆಯು ಶ್ರಮಿಕವರ್ಗ, ಹಿಂದುಳಿದ ವರ್ಗದ ಜನರ ನಡುವೆ ಬೆಳೆದು, ನಂತರದ ಬೆಳವಣಿಗೆಯಲ್ಲಿ ಮೇಲ್ವರ್ಗದ ಜನರ ಪ್ರವೇಶ ಮತ್ತು ಆ ಬಳಿಕದ ಪರಿಣಾಮ ಹಲವು ಬದಲಾವಣೆಗಳನ್ನು ವಿಶ್ಲೇಷಿಸಿದ್ದಾರೆ. ಈ ಹಿನ್ನೆಲೆಯೊಂದಿಗೆ ಪ್ರಸ್ತುತ ಕಾಲಘಟ್ಟದಲ್ಲಿ ಯಕ್ಷಗಾನ ಕಲೆಯ ಬಗ್ಗೆ ಹಾಗೂ ಕಲಾವಿದರ ಪರಿಸ್ಥಿತಿಯನ್ನು ಸಾಮಾಜಿಕ ದೃಷ್ಟಿಕೋನದಿಂದ ಸಂಶೋಧಿಸುವುದು.

4. ಯಕ್ಷಗಾನ ಕಲೆಯ ಪ್ರಮುಖ ಭಾಗವಾಗಿ ಗುರುತಿಸಲ್ಪಡುವ ಯಕ್ಷಗಾನ ಕಲಾವಿದರಿಗೆ ಹಲವಾರು ಸಂಘ, ಸಂಸ್ಥೆಗಳಿಂದ ಸಿಗುವ ಪ್ರೋತ್ಸಾಹ ಮತ್ತು ಸರಕಾರಗಳಿಂದ ಲಭ್ಯವಿರುವ ಸೌಲಭ್ಯ, ಯೋಜನೆಗಳು ಹಾಗೂ ಈ ಬಗ್ಗೆ ಕಲಾವಿದರಿಗಿರುವ ಮಾಹಿತಿಯನ್ನು ತಿಳಿದುಕೊಳ್ಳುವುದು.

5. ಯಕ್ಷಗಾನ ಕಲೆಯ ಬೆಳವಣಿಗೆಯಲ್ಲಿ ಕಲಾವಿದನ ಪಾತ್ರ, ಪ್ರಸ್ತುತ ಕಾಲಘಟ್ಟದಲ್ಲಿ ಆತನ ಮುಂದಿರುವ ಸಮಸ್ಯೆ, ಸವಾಲುಗಳು ಹಾಗೂ ಅವಕಾಶಗಳ ಬಗ್ಗೆ ತಿಳಿದುಕೊಳ್ಳಬೇಕಾದ ಅಗತ್ಯತೆಗಳಿವೆ. ಯಕ್ಷಗಾನವನ್ನು ಜನರ ಬದುಕನ್ನಾಗಿ ನೋಡದೆ ಧಾರ್ಮಿಕವಾಗಿ, ಮನೋರಂಜನೆಯ ವಸ್ತುವನ್ನಾಗಿ ಮಾತ್ರ ಪರಿಗಣಿಸುತ್ತಿರುವುದರಿಂದ ಹೆಚ್ಚಾಗಿ ವಾಸ್ತವಾಂಶಗಳು ಮರೆಯಾಗುತ್ತಿವೆ.

ಕಲಾವಿದ, ಪ್ರೇಕ್ಷಕ, ಆಧುನಿಕತೆ, ವರ್ತಮಾನದ ಸ್ಥಿತಿಗತಿಗಳು ಮುಂತಾದ ವಿಚಾರಗಳ ವಿಶ್ಲೇಷಣೆ ನಡೆಸಿ, ಅವುಗಳ ನೈಜ ಚಿತ್ರಣವನ್ನು ನೀಡುವುದೇ ಅಧ್ಯಯನದ ಉದ್ದೇಶವಾಗಿದೆ.

ಸಂಶೋಧನಾ ವಿಧಾನ

ಯಾವುದೇ ಒಂದು ಸಂಶೋಧನೆಯು ಯಶಸ್ವಿಯಾಗಬೇಕಾದರೆ ಆ ಸಂಶೋಧನೆಯ ವಿಧಾನವು ವೈಜ್ಞಾನಿಕವಾಗಿರಬೇಕು. ಈ ನಿಟ್ಟಿನಲ್ಲಿ ಪ್ರಸ್ತುತ ಅಧ್ಯಯನವು ಒಂದು ವಿವರಣಾತ್ಮಕ ಅಧ್ಯಯನವಾಗಿದೆ. ಯಕ್ಷಗಾನವು ತೆಂಕುತಿಟ್ಟು, ಬಡಗುತಿಟ್ಟು, ಬಡಾಬಡಗುತಿಟ್ಟು ಎಂಬ ನೆಲೆಯಲ್ಲಿ ವ್ಯಾಪಕತೆಯನ್ನು ಒಳಗೊಂಡಿದ್ದು ಸಾವಿರಾರು ವೃತ್ತಿ ಕಲಾವಿದರು, ಹವ್ಯಾಸಿ ಕಲಾವಿದರು ಈ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಪ್ರಸ್ತುತ ಅಧ್ಯಯನದಲ್ಲಿ ಪ್ರಮುಖವಾಗಿ ದಕ್ಷಿಣ ಕನ್ನಡ ಹಾಗೂ ಕಾಸರಗೋಡು ಜಿಲ್ಲೆಯನ್ನು ಒಳಗೊಂಡಿರುವ ತೆಂಕುತಿಟ್ಟು ವ್ಯಾಪ್ತಿಯ ವೃತ್ತಿಕಲಾವಿದರನ್ನು ಆಯ್ಕೆ ಮಾಡಿಕೊಂಡು ಕ್ಷೇತ್ರಕಾರ್ಯದ ಮೂಲಕ ಮಾಹಿತಿಯ ವಿಶ್ಲೇಷಣೆಯ ಫಲಿತಾಂಶಗಳನ್ನು ಕಂಡುಕೊಳ್ಳಲಾಗಿದೆ.

ಅ) ನಮೂನೆಯ ಆಯ್ಕೆ ಹಾಗೂ ಅಧ್ಯಯನ ವ್ಯಾಪ್ತಿ

ಪ್ರಸ್ತುತ ಅಧ್ಯಯನದ ಮಾಹಿತಿದಾರರನ್ನು ಅಧ್ಯಯನ ಕ್ಷೇತ್ರವಾಗಿರುವ ಯಕ್ಷಗಾನದ ತೆಂಕುತಿಟ್ಟು ಭಾಗವಾಗಿರುವ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು, ಬಂಟ್ವಾಳ, ಸುಳ್ಯ, ಬೆಳ್ತಂಗಡಿ, ಪುತ್ತೂರು ಹಾಗೂ ಕಾಸರಗೋಡು ಜಿಲ್ಲಾ ವ್ಯಾಪ್ತಿಯಿಂದ ಅಧ್ಯಯನಕ್ಕೆ ಆಯ್ಕೆ ಮಾಡಲಾಗಿದೆ, ಈ ಪ್ರದೇಶದ ಒಟ್ಟು 180 ಯಕ್ಷಗಾನ ವೃತ್ತಿ ಕಲಾವಿದರನ್ನು ಸರಳಯಾದೃಚ್ಛಿಕ ನಮೂನೆಯಲ್ಲಿ ಆಯ್ಕೆ ಮಾಡಿ ಅವರಿಂದ ಮಾಹಿತಿ ಪಡೆಯಲಾಗಿದೆ.

ಯಕ್ಷಗಾನ ಕಲಾವಿದರ ಸಮಾಜಶಾಸ್ತ್ರೀಯ ಅಧ್ಯಯನ ವ್ಯಾಪ್ತಿಯು ಯಕ್ಷಗಾನದ ತೆಂಕುತಿಟ್ಟು (ದಕ್ಷಿಣ ಕನ್ನಡ ಮತ್ತು ಕಾಸರಗೋಡು ಜಿಲ್ಲೆ) ಪರಿಸರಕ್ಕೆ ಸೀಮಿತವಾಗಿದೆ. ಅದರಲ್ಲೂ ಯಕ್ಷಗಾನಕ್ಕೆ ಸಂಬಂಧಿಸಿದ ಎಲ್ಲಾ ಅಂಶಗಳು ಅಥವಾ ವಿಭಾಗಗಳನ್ನು ಅಧ್ಯಯನ ಮಾಡದೆ ಯಕ್ಷಗಾನ ಕಲಾವಿದರು, ಕಲಾವಿದರ ಕೌಟುಂಬಿಕ ವಿವರ, ಅವರ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಮತ್ತು ಸೌಲಭ್ಯ, ಅವಕಾಶಗಳು ಹಾಗೂ ಕಲಾವಿದನ ಪ್ರಸ್ತುತ ಪರಿಸ್ಥಿತಿಯ ನೆಲೆಯಲ್ಲಿ ಅಧ್ಯಯನ ವ್ಯಾಪ್ತಿಯನ್ನು ಆಯ್ಕೆ ಮಾಡಿಕೊಳ್ಳಲಾಗಿತ್ತು.

ಆ) ಮಾಹಿತಿ ಸಂಗ್ರಹಣೆ

ಪ್ರಾಥಮಿಕ ಮಾಹಿತಿ ಸಂಗ್ರಹಣೆ

ಸಮಾಜವಿಜ್ಞಾನಗಳಲ್ಲಿ ಮಾಹಿತಿ ಪಡೆಯಲು ಅನುಕೂಲವಾಗುವಂತೆ ಅನೇಕ ವಿಧಾನಗಳಿವೆ. ಓದು ಬರಹಗಳಿಂದ ಅಸಂಖ್ಯಾತ ಮತ್ತು ಅರ್ಥವತ್ತಾದ ವಿಷಯ ಸಂಗ್ರಹಣೆ ಮಾಡಬಹುದು. ಸಮಾಜಶಾಸ್ತ್ರೀಯ ದೃಷ್ಟಿಯಿಂದ ನೋಡಲಾಗಿ, ಪ್ರಾಥಮಿಕ ಮಾಹಿತಿಯನ್ನು ಸಂಗ್ರಹಿಸಲು 'ಸಂದರ್ಶನ'ವು ಬಹಳ ಮಹತ್ತರವಾದ ವಿಧಾನವಾಗಿದೆ. ಸಂದರ್ಶನಕ್ಕೆ ಹೋಗುವ ಮೊದಲು ಮಾದರಿ ಪ್ರಶ್ನಾವಳಿಯನ್ನು ಸಿದ್ಧಪಡಿಸಲಾಗಿತ್ತು. ಈ ಸಂದರ್ಶನವು ಮುಚ್ಚಿದ ಮತ್ತು ತೆರೆದ ಪ್ರಶ್ನಾವಳಿಗಳನ್ನು ಹೊಂದಿದೆ. ಇದರೊಂದಿಗೆ ಸಂಭಾಷಣೆ, ಧ್ವನಿಮುದ್ರಣ ಹಾಗೂ ಛಾಯಾಚಿತ್ರಗಳನ್ನು ಬಳಸಿಕೊಳ್ಳಲಾಗಿದೆ.

ಅನುಷಂಗಿಕ ಮಾಹಿತಿ ಸಂಗ್ರಹಣೆ

ಅನುಷಂಗಿಕ ಮಾಹಿತಿಯನ್ನು ಪ್ರಕಟಿತ ಮತ್ತು ಅಪ್ರಕಟಿತ ಸಾಹಿತ್ಯ ಕೃತಿಗಳು, ಪ್ರಸಂಗ ಸಂಪುಟಗಳು, ಯಕ್ಷಗಾನ ಕಲಾವಿದರ ಅಭಿನಂಧನಾ ಮತ್ತು ಸಂಸ್ಮರಣಾ ಗ್ರಂಥಗಳು, ಅರೆ ಸರ್ಕಾರಿ ಕಚೇರಿಗಳಿಂದ, ಪಿಎಚ್‌ಡಿ ಮಹಾಪ್ರಬಂಧಗಳು ಅಲ್ಲದೆ ಇತರ ಸಂಶೋಧನಾ ಗ್ರಂಥಗಳು, ಅನುವಾದ ಗ್ರಂಥಗಳು, ಯಕ್ಷಗಾನ ಮಾಸಪತ್ರಿಕೆಗಳನ್ನು ಅಧ್ಯಯನಕ್ಕೆ ಅನುಷಂಗಿಕ ಆಕರ ಸಾಮಾಗ್ರಿಗಳಾಗಿ ಬಳಸಲಾಯಿತು. ಅಲ್ಲದೆ ಅಂತರ್ಜಾಲದಿಂದ ಮಾಹಿತಿಯನ್ನು ಪಡೆದುಕೊಳ್ಳಲಾಯಿತು.

ಸಂಶೋಧನಾ ವಿನ್ಯಾಸ(ಅಧ್ಯಯನ ಸ್ವರೂಪ)

1.**ಮೊದಲನೇ ಅಧ್ಯಾಯವು** ಪ್ರಸ್ತಾವನೆಯಾಗಿದ್ದು, ಅಧ್ಯಯನದ ಉದ್ದೇಶ, ವ್ಯಾಪ್ತಿ, ಅಧ್ಯಯನದ ಸ್ವರೂಪ, ಅಧ್ಯಯನ ವಿಧಾನ, ನಮೂನೆಯ ಆಯ್ಕೆ, ಮಾಹಿತಿ ಸಂಗ್ರಹಣೆ ಮತ್ತು ಅಧ್ಯಯನದ ಮಹತ್ವಗಳನ್ನು ಒಳಗೊಂಡಿದೆ. ಯಕ್ಷಗಾನ, ಪ್ರಬೇಧಗಳು ಹಾಗೂ ಅಧ್ಯಯನ ವಿಷಯಕ್ಕೆ ಪೂರಕವಾಗಿ ಸಾಹಿತ್ಯ ಪರಾಮರ್ಶೆಯನ್ನು ಈ ಅಧ್ಯಾಯದಲ್ಲಿ ಮಾಡಲಾಗಿದೆ.

2.**ಎರಡನೇ ಅಧ್ಯಾಯದಲ್ಲಿ** ಯಕ್ಷಗಾನದ ಉಗಮ, ಬೆಳವಣಿಗೆ, ಚಾರಿತ್ರಿಕ ಹಿನ್ನೆಲೆ ಹಾಗೂ ವೈಶಿಷ್ಟ್ಯತೆಗಳು, ಸಾಂಸ್ಕೃತಿಕ ಹಿನ್ನೆಲೆ, ಯಕ್ಷಗಾನ ಮೇಳ, ಮೇಳ ಮತ್ತು ಕುಟುಂಬದ ಪರಿಕಲ್ಪನೆ, ಯಕ್ಷಗಾನ ಪ್ರಸಂಗಗಳಲ್ಲಿ ಕೌಟುಂಬಿಕ ಚಿತ್ರಣ, ಯಕ್ಷಗಾನ- ಸಾಮಾಜಿಕ ಜಾಗೃತಿ, ಯಕ್ಷಗಾನ ಸಂಘಟನೆ, ಕಲಾವಿದರಿಗಿರುವ ಪ್ರಶಸ್ತಿಗಳ ಬಗ್ಗೆ ವಿವರಿಸಲಾಗಿದೆ.

3.**ಮೂರನೆಯ ಅಧ್ಯಾಯದಲ್ಲಿ** ಯಕ್ಷಗಾನ ವೃತ್ತಿಕಲಾವಿದರು, ಕಲಾವಿದರ ವೈಯುಕ್ತಿಕ, ಕೌಟುಂಬಿಕ ಮಾಹಿತಿ ಸೇರಿದಂತೆ ಶೈಕ್ಷಣಿಕ ಹಾಗೂ ಸಾಮಾಜಿಕ ಬದುಕಿನ ಬಗ್ಗೆ ವಿವರವಾಗಿ ಅಧ್ಯಯನ ನಡೆಸಲಾಗಿದೆ.

4.**ನಾಲ್ಕನೆಯ ಅಧ್ಯಾಯದಲ್ಲಿ** ವೃತ್ತಿಪರ ಮೇಳಗಳಲ್ಲಿ ತೊಡಗಿಸಿಕೊಂಡಿರುವ ಯಕ್ಷಗಾನ ಕಲಾವಿದರ ಆರ್ಥಿಕ ಸ್ಥಿತಿಗತಿಯ ವಿಷಯಕ್ಕೆ ಸಂಬಂಧಿಸಿ ಅಧ್ಯಯನವನ್ನು ಒಳಗೊಂಡಿದೆ.

5.**ಐದನೆಯ ಅಧ್ಯಾಯದಲ್ಲಿ** ಯಕ್ಷಗಾನದ ಸ್ಥಿತ್ಯಂತರ, ಕಲಾವಿದರ ಪ್ರಸ್ತುತ ಪರಿಸ್ಥಿತಿ, ಮುಂದಿರುವ ಸವಾಲುಗಳು, ಯಕ್ಷಗಾನದ ಬೆಳವಣಿಗೆ, ಸವಲತ್ತುಗಳ ಬಳಕೆ ಬಗ್ಗೆ ಅಧ್ಯಯನ ಮಾಡಲಾಗಿದೆ.

6.**ಆರನೆಯ ಅಧ್ಯಾಯವು** ಉಪಸಂಹಾರಗಳನ್ನೊಳಗೊಂಡಿದ್ದು ಇದರಲ್ಲಿ ಎಲ್ಲಾ ಅಧ್ಯಾಯದ ಸಾರಾಂಶ, ತೀರ್ಮಾನ ಮತ್ತು ಸಲಹೆಗಳನ್ನು ನೀಡಲಾಗಿದೆ.

ಅಧ್ಯಯನದ ಪ್ರಮುಖ ಫಲಿತಗಳು

ಸಮಾಜದಲ್ಲಿ ಹಲವಾರು ಶತಮಾನಗಳಿಂದ ಧಾರ್ಮಿಕವಾಗಿ ಹಾಗೂ ಕಲಾಪ್ರಕಾರವಾಗಿ ಮುನ್ನಡೆಯುತ್ತಾ ಬಂದಿರುವ ಯಕ್ಷಗಾನವನ್ನು ಒಂದು ಸಾಮಾಜಿಕ ಸಂಸ್ಥೆಯಾಗಿ ಪರಿಭಾವಿಸಿ ಹಾಗೂ ಈ ಕಲೆಯನ್ನು ವೃತ್ತಿಯನ್ನಾಗಿಸಿ ಜೀವನವನ್ನು ಸಾಗಿಸುತ್ತಿರುವಂತಹ ಯಕ್ಷಗಾನ ಕಲಾವಿದರನ್ನು ಮೂಲವಾಗಿಟ್ಟುಕೊಂಡು ಕಲಾವಿದರ ಆರ್ಥಿಕ, ಸಾಮಾಜಿಕ ಸ್ಥಿತಿಗತಿಗಳು ಹಾಗೂ ಯಕ್ಷಗಾನದ

ಇತ್ತೀಚಿನ ಸ್ಥಿತ್ಯಂತರಗಳು, ಸಮಸ್ಯೆ, ಸವಾಲುಗಳ ಬಗ್ಗೆ ಸಮಾಜಶಾಸ್ತ್ರೀಯ ನೆಲೆಯಲ್ಲಿ ಅಧ್ಯಯನವನ್ನು ನಡೆಸಲಾಗಿದೆ.

ಕಲಾವಿದರ ಮಾಹಿತಿ ಸಂಗ್ರಹಕ್ಕೆ ಬಳಸಲಾದ ಪ್ರಶ್ನಾವಳಿಗಳಲ್ಲಿ ಅವರ ಸಾಮಾಜಿಕ, ಕೌಟುಂಬಿಕ ಮತ್ತು ಆರ್ಥಿಕ ವಿಷಯಗಳಿಗೆ ಸಂಬಂಧಿಸಿದ ಪ್ರಶ್ನೆಗಳಿವೆ. ಕಲಾವಿದರ ವಯಸ್ಸು, ವೈವಾಹಿಕ ಸ್ಥಾನಮಾನ, ಶೈಕ್ಷಣಿಕ, ಕೌಟುಂಬಿಕ ವಿವರ, ವಾಸ್ತವ್ಯ, ಆಸ್ತಿ ಇತ್ಯಾದಿ ಸಂಪನ್ಮೂಲಗಳು, ವೃತ್ತಿ ವಿವರಗಳು, ಸೇವಾ ವಿವರಗಳು, ಉದ್ಯೋಗದ ಸಮಸ್ಯೆಗಳು, ವೃತ್ತಿ ಭಡ್ತಿಯ ಅವಕಾಶಗಳು, ವೃತ್ತಿ ಸೌಲಭ್ಯಗಳು, ಆರೋಗ್ಯದ ಸಮಸ್ಯೆಗಳು, ರಜಾ ಸೌಲಭ್ಯ, ಗಳಿಕೆ ವೆಚ್ಚ ಉಳಿತಾಯ, ಜೀವ ವಿಮಾ ಸೌಲಭ್ಯಗಳು, ಸಂಘ ಸಂಸ್ಥೆಗಳ ಉತ್ತೇಜನ, ಕಲೆ ಮತ್ತು ಕಲಾವಿದರ ಭವಿಷ್ಯ– ಹೀಗೆ ಕಲಾವಿದರ ಸಾಮಾಜಿಕ ಮತ್ತು ಆರ್ಥಿಕ ಬದುಕಿನ ಕುರಿತಂತೆ ವ್ಯಾಪಕ ಮಾಹಿತಿಗಳನ್ನು ವಿಶ್ಲೇಷಣೆ ಮಾಡಲಾಗಿದೆ.

ಸಾಮಾಜಿಕ ಸ್ಥಿತಿಗತಿ ಹಾಗೂ ಕಲಾವಿದರ ಆರ್ಥಿಕತೆಗೆ ಪೂರಕವಾಗಿರುವ ವೇತನ, ಉಳಿತಾಯ, ವಿವಿಧ ಸೌಲಭ್ಯಗಳು ಹಾಗೂ ಪ್ರಸ್ತುತ ಕಾಲಘಟ್ಟದಲ್ಲಿ ಯಕ್ಷಗಾನ ಕ್ಷೇತ್ರದಲ್ಲಾಗುತ್ತಿರುವ ಬದಲಾವಣೆಗಳಿಗೆ ಕಲಾವಿದರ ಪ್ರತಿಕ್ರಿಯೆ ಮೊದಲಾದವುಗಳ ಬಗ್ಗೆ ಅಧ್ಯಯನ ನಡೆಸಲಾಗಿದೆ.

ಈ ಪ್ರಬಂಧದ ಮೊದಲನೆಯ ಅಧ್ಯಾಯದಲ್ಲಿ ಪ್ರಸ್ತಾವನೆ, ಯಕ್ಷಗಾನ, ಪ್ರಭೇದಗಳು, ಅಧ್ಯಯನದ ಮಹತ್ವ, ವಿಷಯ ನಿರೂಪಣೆ, ಅಧ್ಯಯನದ ಸ್ವರೂಪ, ವ್ಯಾಪ್ತಿ, ಅಧ್ಯಯನ ಉದ್ದೇಶ, ಅಧ್ಯಯನದ ವಿಧಾನ ಮತ್ತು ವಿನ್ಯಾಸಗಳನ್ನು ಒಳಗೊಂಡಿದೆ. ಅಲ್ಲದೆ ಇದರಲ್ಲಿ ಅಧ್ಯಯನ ವಿಷಯಕ್ಕೆ ಸಂಬಂಧಿಸಿದಂತೆ ಯಕ್ಷಗಾನ ಕ್ಷೇತ್ರದಲ್ಲಿ ಈವರೆಗೆ ನಡೆದ ಅಧ್ಯಯನಗಳು ಹಾಗೂ ಅಧ್ಯಯನ ವಿಷಯಕ್ಕೆ ಪೂರಕವಾಗುವ ಗ್ರಂಥಗಳ ವಿಮರ್ಶೆಯನ್ನು ಮಾಡಿ ಚರ್ಚಿಸಲಾಗಿದೆ.

ಎರಡನೇ ಅಧ್ಯಾಯದಲ್ಲಿ ಯಕ್ಷಗಾನದ ಚಾರಿತ್ರಿಕ ಹಿನ್ನೆಲೆ, ಯಕ್ಷಗಾನ ಮೇಳ, ಮೇಳದ ಸ್ವರೂಪ, ಯಕ್ಷಗಾನ ಮೇಳ ಮತ್ತು ಕುಟುಂಬದ ಪರಿಕಲ್ಪನೆ, ಸಂಘಟನೆ, ಯಕ್ಷಗಾನ ಮತ್ತು ಸಾಮಾಜಿಕ ಜಾಗೃತಿ, ಕಲಾವಿದರಿಗೆ ಪ್ರೋತ್ಸಾಹ ನೀಡುವ ಸಂಸ್ಥೆಗಳಾದ ಯಕ್ಷಗಾನ ಬಯಲಾಟ ಅಕಾಡೆಮಿ, ಯಕ್ಷಗಾನ ಕಲಾರಂಗ(ರಿ)ಉಡುಪಿ, ಯಕ್ಷಧ್ರುವ ಪಟ್ಲ ಫೌಂಡೇಶನ್ ಟ್ರಸ್ಟ್ ಇವುಗಳ ಸಂಕ್ಷಿಪ್ತ ಪರಿಚಯ, ಸ್ವರೂಪ, ಕೊಡುಗೆಗಳು ಮತ್ತು ಸೌಲಭ್ಯಗಳು, ಕಲಾವಿದರಿಗಿರುವ ಪ್ರಮುಖ ಪ್ರಶಸ್ತಿಗಳ ಬಗ್ಗೆ ಮಾಹಿತಿ ನೀಡಲಾಗಿದೆ.

ಕಲಾವಿದರ ಸಾಮಾಜಿಕ ಸ್ಥಿತಿಗತಿ

ಯಕ್ಷಗಾನವು ಸಮಾಜದಲ್ಲಿ ಒಂದು ಕಲಾಪ್ರಕಾರವಾಗಿ ಧಾರ್ಮಿಕವಾಗಿ ಸಾಮಾಜಿಕತೆಯ ಅಂಶಗಳೊಂದಿಗೆ ಬೆಳೆದು ಬಂದಿರುವ ಕಲೆಯಾಗಿ ಇಲ್ಲಿಯ ಜನರೊಂದಿಗೆ ಅವಿನಾಭಾವ ಸಂಬಂಧವನ್ನು ಹೊಂದಿದೆ. ಅಲ್ಲದೆ ಯಕ್ಷಗಾನ ಕಲಾವಿದರಾಗಿ ಸೇವೆಸಲ್ಲಿಸುತ್ತಿರುವ ವೃತ್ತಿಕಲಾವಿದರು ಈ ಕಲೆಯನ್ನು ಉಳಿಸಿ ಬೆಳೆಸಿ ಮುನ್ನಡೆಸುವಲ್ಲಿ ಬಹಳ ಪ್ರಮುಖರಾಗಿ ಕಾಣುತ್ತಾರೆ. ಆದ್ದರಿಂದ ಯಕ್ಷಗಾನ ವೃತ್ತಿ ಕಲಾವಿದರ ಸಾಮಾಜಿಕ ಸ್ಥಿತಿಗತಿಯ ಬಗೆಗೆ ಬೆಳಕು ಚೆಲ್ಲುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಈ ಅಧ್ಯಾಯದಲ್ಲಿ ಮಾಹಿತಿದಾರ ಕಲಾವಿದರ ವ್ಯಾಪ್ತಿ, ವಯಸ್ಸು, ವೈವಾಹಿಕ ಸ್ಥಾನಮಾನ, ವಿದ್ಯಾರ್ಹತೆ, ಕುಟುಂಬದ ಸ್ವರೂಪ, ಮಾಹಿತಿದಾರರ ಜಾತೀವಾರು ವಿವರ, ಮನೆಕಟ್ಟಡ, ಜಮೀನಿನ ವಿವರಗಳು, ಯಕ್ಷಗಾನವನ್ನು ಆಯ್ದುಕೊಳ್ಳಲು ಕಾರಣಗಳು, ಯಕ್ಷಗಾನವನ್ನು ವೃತ್ತಿಯನ್ನಾಗಿ ಸ್ವೀಕರಿಸುವಾಗ ಎದುರಾದ ಅಡ್ಡಿಆತಂಕಗಳು, ಕಲಾವಿದರು ವೃತ್ತಿ ನಡೆಸುತ್ತಿರುವ ಮೇಳಗಳು, ಮೇಳದಲ್ಲಿ ಕಲಾವಿದರ ನಡುವಿನ ಸಂಬಂಧಗಳು, ಕಲಾವಿದರ ರಜೆಯ ವ್ಯವಸ್ಥೆ, ಸಂಭಾವಣೆ, ವೇತನದ ವ್ಯತ್ಯಾಸಗಳು, ಕೌಟುಂಬಿಕ ಜವಬ್ಧಾರಿಗಳು, ಯಕ್ಷಗಾನ ಕಲಾವಿದರಿಗೆ

ನಿದ್ದೆಗೆಡುವುದರಿಂದ ಎದುರಾಗುವ ಆರೋಗ್ಯ ಸಮಸ್ಯೆಗಳು, ಕಲಾವಿದರಿಗಿರುವ ವ್ಯಸನದ ಹವ್ಯಾಸಗಳು- ಮೊದಲಾದ ವಿಷಯಗಳ ಕುರಿತದ್ದಾಗಿದೆ.

- **ಕಲಾವಿದರ ಕೌಟುಂಬಿಕ ಹಿನ್ನೆಲೆ**

ಪ್ರಸ್ತುತ ಸಮಾಜದಲ್ಲಿ ಅವಿಭಕ್ತ ಕುಟುಂಬಗಳು ಮರೆಯಾಗುತ್ತಿದ್ದು, ವಿಭಕ್ತ ಕುಟುಂಬಗಳೇ ಹೆಚ್ಚಾಗಿ ಕಂಡು ಬರುತ್ತಿವೆ. ಯಕ್ಷಗಾನ ಕಲಾವಿದರ ಕುಟುಂಬವೂ ಇದಕ್ಕೆ ಹೊರತಾಗಿಲ್ಲ. ಮಾಹಿತಿದಾರ ಕಲಾವಿದರಲ್ಲಿ ಪ್ರತಿಶತ 97.77ರಷ್ಟು ಮಂದಿ ವಿಭಕ್ತ ಕುಟುಂಬಕ್ಕೆ ಸೇರಿದವರಾಗಿದ್ದಾರೆ. ಪ್ರತಿಶತ 2.22ರಷ್ಟು ಮಾಹಿತಿದಾರರು ಅವಿಭಕ್ತ ಕುಟುಂಬದಲ್ಲಿ ವಾಸವಾಗಿದ್ದಾರೆ.

ಕಲಾವಿದರ ಮನೆಯ ಒಡೆತನದ ಬಗೆಗೆ ತಿಳಿದಾಗ ಒಟ್ಟು ಮಾಹಿತಿದಾರ ಕಲಾವಿದರ ಪೈಕಿ ಪ್ರತಿಶತ 95.56 ರಷ್ಟು ಕಲಾವಿದರು ಸ್ವಂತ ಮನೆಯಲ್ಲಿ ವಾಸವಾಗಿದ್ದಾರೆ. ಪ್ರತಿಶತ 3.89 ರಷ್ಟು ಕಲಾವಿದರು ಬಾಡಿಗೆ ಮನೆಯಲ್ಲಿ ವಾಸವಾಗಿದ್ದಾರೆ.

ಸ್ವಂತ ಮನೆ ಹೊಂದಿರುವವರಲ್ಲಿ ಪ್ರತಿಶತ 38.33 ರಷ್ಟು ಕಲಾವಿದರು ಕಾಂಕ್ರೀಟು ಮನೆಯನ್ನು ಹೊಂದಿದ್ದು, 58.33 ರಷ್ಟು ಜನರು ಹೆಂಚು ಮನೆಯಲ್ಲಿ ಹಾಗೂ ಪ್ರತಿಶತ 1.67 ರಷ್ಟು ಕಲಾವಿದರು ಸಿಮೆಂಟ್ ಶೀಟ್ ಹಾಸಿದ ಮನೆಯಲ್ಲಿ ವಾಸವಾಗಿರುವ ಕಲಾವಿದರಾಗಿದ್ದಾರೆ.

ಮಾಹಿತಿದಾರ ಕಲಾವಿದರ ವಯೋಮಾನವನ್ನು ಗಮನಿಸಿದಾಗ ಅಧ್ಯಯನದಲ್ಲಿ 36ರಿಂದ 45 ರೊಳಗಿನ ಮತ್ತು 46ರಿಂದ 55ರೊಳಗಿನ ಮಾಹಿತಿದಾರರು ಹೆಚ್ಚಾಗಿ ಕಂಡು ಬಂದಿದ್ದಾರೆ. ಈ ವಯಸ್ಸಿನ ಎಲ್ಲಾ ಕಲಾವಿದರು ಕೂಡಾ ಸುಮಾರು ಹತ್ತು ಅಥವಾ ಇಪ್ಪತ್ತಕ್ಕಿಂತ ಹೆಚ್ಚು ವರ್ಷಗಳ ಕಾಲ ಯಕ್ಷಗಾನರಂಗದಲ್ಲಿ ದುಡಿದ ಅನುಭವವನ್ನು ಹೊಂದಿದವರಾಗಿದ್ದಾರೆ. ಕಲಾವಿದರ ವೈವಾಹಿಕ ಸ್ಥಾನಮಾನವನ್ನು ಗಮನಿಸಿದರೆ, ಮಾಹಿತಿದಾರರ ಪೈಕಿ ಪ್ರತಿಶತ 80ರಷ್ಟು ಕಲಾವಿದರು ವಿವಾಹಿತರಾಗಿದ್ದಾರೆ. ಪ್ರತಿಶತ 20ರಷ್ಟು ಕಲಾವಿದರು ಅವಿವಾಹಿತರಾಗಿದ್ದಾರೆ.

- **ಕಲಾವಿದರ ವಿದ್ಯಾರ್ಹತೆ**

ಯಕ್ಷಗಾನ ಕ್ಷೇತ್ರದಲ್ಲಿ ತೊಡಗಿಸಿಕೊಂಡ ಮಾಹಿತಿದಾರ ಕಲಾವಿದರ ಶೈಕ್ಷಣಿಕ ಮಟ್ಟವನ್ನು ಪರಿಶೀಲಿಸಿದಾಗ ಮಾಹಿತಿದಾರರಲ್ಲಿ ಯಾರೂ ಅನಕ್ಷರಸ್ಥರು ಕಂಡು ಬಂದಿಲ್ಲ. ಒಂದರಿಂದ ಏಳನೇ ತರಗತಿ ಕಲಿತವರನ್ನು ಪ್ರಾಥಮಿಕ ವಿದ್ಯಾಭ್ಯಾಸವೆಂದು ಪರಿಗಣಿಸಲಾಗಿದ್ದು ಮಾಹಿತಿದಾರರಲ್ಲಿ ಪ್ರತಿಶತ 40.00ರಷ್ಟು ಜನರು ಪ್ರಾಥಮಿಕ ವಿದ್ಯಾಭ್ಯಾಸವನ್ನು ಪೂರೈಸಿದವರಾಗಿದ್ದಾರೆ. ಇದರಲ್ಲಿ 1ರಿಂದ ನಾಲ್ಕನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದವರು ಕೂಡಾ ಬಹುತೇಕ ಮಂದಿ ಇದ್ದಾರೆ. ಪ್ರೌಢಶಾಲಾ ಶಿಕ್ಷಣವನ್ನು ಕಲಿತ ಪ್ರತಿಶತ 51.11 ರಷ್ಟು ಮಾಹಿತಿದಾರರು ಇದ್ದಾರೆ. ಪಿಯುಸಿ ಶಿಕ್ಷಣವನ್ನು ಪ್ರತಿಶತ 4.44 ರಷ್ಟು ಜನ ಪಡೆದಿರುತ್ತಾರೆ. ಪದವಿ ಶಿಕ್ಷಣವನ್ನು ಪಡೆದ ಕಲಾವಿದರು ಪ್ರತಿಶತ 1.11ರಷ್ಟು ಇದ್ದಾರೆ. ಪ್ರತಿಶತ 2.22ರಷ್ಟು ಮಾಹಿತಿದಾರರು ಸ್ನಾತಕೋತ್ತರ ಪದವಿಯನ್ನು ಪಡೆದವರಿದ್ದಾರೆ. ಪ್ರತಿಶತ 1.11ರಷ್ಟು ಮಾಹಿತಿದಾರ ಕಲಾವಿದರು ಡಿಪ್ಲೊಮಾ ಅಥವಾ ಐಟಿಐ ಶಿಕ್ಷಣವನ್ನು ಪೂರೈಸಿರುವ ಕಲಾವಿದರು ಕಂಡು ಬಂದಿದ್ದಾರೆ.

ಮಾಹಿತಿದಾರ ಕಲಾವಿದರ ಶೈಕ್ಷಣಿಕ ಸ್ಥಿತಿಯನ್ನು ಗಮನಿಸಿದಾಗ ಪ್ರತಿಶತ 40.00ರಷ್ಟು ಜನರು ಪ್ರಾಥಮಿಕ ವಿದ್ಯಾಭ್ಯಾಸವನ್ನು, ಪ್ರತಿಶತ 51.11 ರಷ್ಟು ಪ್ರೌಢಶಾಲಾ ಶಿಕ್ಷಣವನ್ನು ಪಡೆದವರು ಹೆಚ್ಚು ಕಂಡುಬಂದಿದ್ದಾರೆ. ಹಲವಾರು ದಶಕಗಳ ಹಿಂದೆ ಯಕ್ಷಗಾನದಲ್ಲಿ ಅನಕ್ಷರಸ್ಥರು, ವಿದ್ಯಾಭ್ಯಾಸ ಕಡಿಮೆ ಇದ್ದವರೇ ಹೆಚ್ಚು ಇದ್ದರು. ಆದರೆ ಪ್ರಸ್ತುತ ಅಧ್ಯಯನದಲ್ಲಿ ಅನಕ್ಷರಸ್ಥರು ಯಾರೂ ಕಂಡುಬಂದಿರುವುದಿಲ್ಲ. ಪದವಿ, ಸ್ನಾತಕೋತ್ತರ ಪದವಿ ಪಡೆದವರು ಕೂಡಾ ಯಕ್ಷಗಾನದ

ಕಲಾಜೀವನದಲ್ಲಿ ಔದ್ಯೋಗಿಕವಾಗಿ ತೊಡಗಿಸಿಕೊಂಡಿರುವುದನ್ನು ಗಮನಿಸಿದಾಗ ಇಂದಿನ ಕಾಲಘಟ್ಟದಲ್ಲಿ ವಿದ್ಯಾವಂತರು ಕೂಡಾ ಹೆಚ್ಚಾಗಿ ಯಕ್ಷಗಾನದತ್ತ ಆಕರ್ಷಿತರಾಗುತ್ತಿದ್ದಾರೆ. ಯಕ್ಷಗಾನ ಕಲಾವಿದರು ಶೈಕ್ಷಣಿಕವಾಗಿ ಕಡಿಮೆ ಸಾಧನೆ ಮಾಡಿದವರಾಗಿದ್ದರೂ ಕೂಡಾ ಯಕ್ಷಗಾನ ಕ್ಷೇತ್ರದಲ್ಲಿ ಉತ್ತಮ ಭಾಷಾ, ಪುರಾಣ ಜ್ಞಾನದೊಂದಿಗೆ ಅಪಾರ ಪಾಂಡಿತ್ಯವನ್ನು ಬೆಳೆಸಿಕೊಂಡು ಯಕ್ಷಗಾನ ರಂಗದಲ್ಲಿ ಪ್ರೌಢಿಮೆಯನ್ನು ಮೆರೆಯುತ್ತಾರೆ. ಒಂದು ರೀತಿಯಲ್ಲಿ ಯಕ್ಷಗಾನ ಕಲಾವಿದರಿಂದ ಪುರಾಣ ಕಥೆಗಳ ಮೂಲಕ ನೀತಿ, ಧರ್ಮಬೋಧನೆಯಂತಹ ಕಾರ್ಯಗಳು ಸಮಾಜದಲ್ಲಿ ನಡೆಯುತ್ತಿರುತ್ತವೆ. ಇತ್ತೀಚಿನ ದಶಕಗಳಲ್ಲಿ ಪದವಿ, ಸ್ನಾತಕೋತ್ತರ ಪದವಿ ಪಡೆದವರು ಯಕ್ಷಗಾನದಂತಹ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದಾರೆ. ಯಕ್ಷಗಾನ ಕ್ಷೇತ್ರದಲ್ಲಿ ಶೈಕ್ಷಣಿಕವಾಗಿ ಸಾಧನೆ ಮಾಡಿದವರು ಕೂಡಾ ಇತ್ತೀಚೆಗೆ ಕಂಡು ಬರುತ್ತಿರುವುದು ಸಮಾಜದಲ್ಲಿ ಯಕ್ಷಗಾನದ ಮೌಲ್ಯವೂ ಹೆಚ್ಚಿರುವುದಕ್ಕೆ ಸಾಕ್ಷಿಯಾಗಿದೆ.

- **ಕಲಾವಿದರ ಜಾತಿವಾರು ವಿವರ**

ಮಾಹಿತಿದಾರ ಕಲಾವಿದರ ಜಾತಿವಾರು ವಿವರಗಳನ್ನು ಗಮನಿಸಿದಾಗ ಬಹಳಷ್ಟು ಜಾತಿಯ ಕಲಾವಿದರು ಇಂದು ಯಕ್ಷಗಾನ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವುನ್ನು ಕಾಣಬಹುದು. ಪ್ರಮುಖವಾಗಿ ಬಂಟ್ಸ್, ಬ್ರಾಹ್ಮಣ, ಬಿಲ್ಲವ, ಕುಲಾಲ, ಒಕ್ಕಲಿಗ ಗೌಡ, ಶೆಟ್ಟಿಗಾರ, ವಿಶ್ವಕರ್ಮ, ದಾಸ, ದೇವಾಡಿಗ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಮಡಿವಾಳ, ಕುಡುಬಿ, ಕ್ರಿಶ್ಚಿಯನ್, ಶಿವಾಜಿ ಕ್ಷತ್ರಿಯ, ಮಣಿಯಾಣಿ, ಕೊಂಕಣಿ, ಜೋಗಿ, ಗುಡಿಗಾರ, ಪಾಟಾಳಿ, ಮುಕಾರಿ, ಹೆಗ್ಡೆ ಮೊದಲಾದ ಜಾತಿಯವರು ಇದ್ದಾರೆ. ಮಾಹಿತಿ ನೀಡಿದ ಕಲಾವಿದರಲ್ಲಿ ಪ್ರತಿಶತ 17.78ರಷ್ಟು ಕಲಾವಿದರು ಬಿಲ್ಲವ ಅಥವಾ ಪೂಜಾರಿ ಸಮುದಾಯಕ್ಕೆ ಸೇರಿದವರಾಗಿದ್ದಾರೆ. ಹಾಗೆಯೇ ಬಂಟ್ಸ್ ಹಾಗೂ ಬ್ರಾಹ್ಮಣ ಜಾತಿಯ ಮಾಹಿತಿದಾರರು ಪ್ರತಿಶತ 16.67 ರಷ್ಟು ಮಂದಿ ಇದ್ದಾರೆ. ಈ ಮೂರು ಸಮುದಾಯದ ಕಲಾವಿದರು ಅಧ್ಯಯನದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಂಡು ಬಂದಿದ್ದರೆ ಅತ್ಯಂತ ಕಡಿಮೆ ಸಂಖ್ಯೆಯಲ್ಲಿ ಪಾಟಾಳಿ, ಗುಡಿಕಾರ, ಕುಡುಬಿ, ಕ್ರಿಶ್ಚಿಯನ್, ಮಣಿಯಾಣಿ, ಕೊಂಕಣಿ ಮೊದಲಾದ ಜಾತಿಯ ಕಲಾವಿದರು ಕಂಡು ಬಂದಿದ್ದಾರೆ. ಪ್ರಮುಖವಾಗಿ ನಾವು ಇಲ್ಲಿ ಗಮನಿಸುವುದಾದರೆ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಜಾತಿ ಬಲಾಬಲವನ್ನು ಪರಿಶೀಲಿಸಿದರೆ ಬಿಲ್ಲವ ಸಮುದಾಯದವರು ಬಹುಸಂಖ್ಯೆಯಲ್ಲಿ ಕಂಡುಬರುತ್ತಾರೆ. ಬಿಲ್ಲವ ಸಮುದಾಯದವರಿಗೆ ಕೆಲವು ದೇವಾಲಯ ಅಥವಾ ದೈವಸ್ಥಾನಗಳಿಗೆ ಪ್ರವೇಶವಿರಲಿಲ್ಲ. ಹಾಗೆಯೇ ಯಕ್ಷಗಾನದಲ್ಲಿಯೂ ಕೂಡಾ ಕೆಲವೊಂದು ಮೇಳಗಳಲ್ಲಿ ಅವರಿಗೆ ಪ್ರವೇಶವಿರಲಿಲ್ಲ. ಅಲ್ಲದೆ ಪರಿಶಿಷ್ಟ ಜಾತಿ ಮತ್ತು ಪಂಗಡದ ಕಲಾವಿದರಿಗೆ ಯಕ್ಷಗಾನಕ್ಕೆ ಅವಕಾಶಗಳು ಇರಲಿಲ್ಲ. ಆದರೆ ಪ್ರಸ್ತುತ ಅಧ್ಯಯನದಲ್ಲಿ ಗಮನಿಸಿದ ಹಾಗೆ ಈ ಕಾಲಘಟ್ಟದಲ್ಲಿ ಯಕ್ಷಗಾನ ಕ್ಷೇತ್ರದಲ್ಲಿ ಎಲ್ಲಾ ಮೇಳಗಳಲ್ಲಿಯೂ ಬಿಲ್ಲವರಿಗೆ ಅವಕಾಶಗಳಿದ್ದು ಅಧಿಕ ಸಂಖ್ಯೆಯಲ್ಲಿ ಬಿಲ್ಲವರು ಯಕ್ಷಗಾನ ಕಲಾವಿದರಾಗಿ ದುಡಿದು ಜೀವನ ಸಾಗಿಸುತ್ತಿದ್ದಾರೆ. ಹಾಗೆಯೇ ಜಾತಿಯಲ್ಲಿ ಮೇಲ್ವರ್ಗವಾಗಿ ಗುರುತಿಸಲ್ಪಟ್ಟಿದ್ದ ಬ್ರಾಹ್ಮಣರಿಗೆ ಯಕ್ಷಗಾನಕ್ಕೆ ಸೇರುವುದು ಮಾತ್ರವಲ್ಲ ನೋಡುವುದು ಕೂಡಾ ನಿಷೇದವಾಗಿತ್ತು. ಒಂದು ಯಕ್ಷಗಾನ ನೋಡಿದರೆ ಏಳು ರಂಗಪೂಜೆ ನೋಡಬೇಕೆಂಬ ನಿಯಮವೂ ಇತ್ತೆಂದು ಕೆಲವು ಹಿರಿಯ ಕಲಾವಿದರು ನೆನಪಿಸುತ್ತಾರೆ. ಯಕ್ಷಗಾನದಲ್ಲಿ ಆರಂಭದಲ್ಲಿ ಕೆಳವರ್ಗಕ್ಕೆ ಸೇರಿದ ಸಮುದಾಯದವರೇ ಹೆಚ್ಚಾಗಿ ಇದ್ದುದರಿಂದ ಹಾಗೂ ಯಕ್ಷಗಾನದಲ್ಲಿ ಅಶ್ಲೀಲತೆಯೂ ಇದ್ದುದರಿಂದ ಬ್ರಾಹ್ಮಣರು ಇದರಿಂದ ದೂರವಿದ್ದರು ಎಂದು ಹೇಳಲಾಗುತ್ತದೆ. ಆದರೆ ಬಳಿಕ ಬ್ರಾಹ್ಮಣರೂ ಯಕ್ಷಗಾನಕ್ಕೆ ಪ್ರವೇಶಿಸಿದ ಬಳಿಕ ಯಕ್ಷಗಾನದಲ್ಲಿಯೂ ಸಾಕಷ್ಟು ಬದಲಾವಣೆಗಳಾಗಿ ಇಂದು ಅಧಿಕ ಸಂಖ್ಯೆಯಲ್ಲಿ ಬ್ರಾಹ್ಮಣರು ಹಿಮ್ಮೇಳ ಹಾಗೂ ಮುಮ್ಮೇಳ ಕಲಾವಿದರಾಗಿ ದುಡಿಯುತ್ತಿದ್ದಾರೆ. ಅಲ್ಲದೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರು ಕೂಡಾ ಇಂದು ಯಕ್ಷಗಾನದಲ್ಲಿ ಬಹಳಷ್ಟು ಸಂಖ್ಯೆಯಲ್ಲಿ ಕಂಡು ಬರುತ್ತಾರೆ.

ಹಾಗೆಯೇ ಕ್ರಿಶ್ಚಿಯನ್ ಹಾಗೂ ಮುಸ್ಲಿಂ ಧರ್ಮದ ಕಲಾವಿದರು ಕೂಡಾ ಯಕ್ಷಗಾನದಲ್ಲಿ ತೊಡಗಿಸಿಕೊಂಡಿರುವುದನ್ನು ಕೂಡಾ ನಾವು ಕಾಣಬಹುದು. ಹಿಂದಿನ ಸ್ಥಿತಿಗತಿಗೆ ಹೋಲಿಸಿದರೆ ಪ್ರಸ್ತುತ ಕಾಲಘಟ್ಟದಲ್ಲಿ ಯಕ್ಷಗಾನದಲ್ಲಿ ಎಲ್ಲಾ ಜಾತಿಯ ಕಲಾವಿದರಿಗೂ ಅವಕಾಶಗಳಿದ್ದು, ಎಲ್ಲಾ ಜಾತಿಯ ಕಲಾವಿದರೂ ಸಕ್ರಿಯವಾಗಿ ತೊಡಗಿಸಿಕೊಳ್ಳುತ್ತಿದ್ದಾರೆ.

- **ಯಕ್ಷಗಾನ ವೃತ್ತಿ ಸ್ವೀಕರಿಸಲು ಪ್ರೇರಣೆ**

ಯಕ್ಷಗಾನವು ಧಾರ್ಮಿಕತೆಯೊಂದಿಗೆ ಮನೋರಂಜನಾತ್ಮಕವಾಗಿ ಬೆಳೆದು ಬಂದ ಕಲೆಯಾಗಿದೆ. ಈ ಕಲೆಯನ್ನು ವೃತ್ತಿಯನ್ನಾಗಿಸಲು ಕಾರಣಗಳ ಬಗ್ಗೆ ಮಾಹಿತಿದಾರರಲ್ಲಿ ತಿಳಿದುಕೊಂಡಾಗ ಪ್ರತಿಶತ 85.56 ರಷ್ಟು ಕಲಾವಿದರು ಯಕ್ಷಗಾನ ಕಲೆಯ ಅಭಿಮಾನದಿಂದಲೇ ಈ ವೃತ್ತಿಯನ್ನು ಆಯ್ಕೆ ಮಾಡಿಕೊಂಡವರಾಗಿದ್ದಾರೆ. ಕಲಾಸಕ್ತಿ ಇಲ್ಲದವರು ಈ ವೃತ್ತಿಯನ್ನು ಆಯ್ಕೆ ಮಾಡಿಕೊಳ್ಳಲು ಖಂಡಿತಾ ಸಾಧ್ಯವಿಲ್ಲ. ಆರ್ಥಿಕವಾಗಿ ಹಿಂದುಳಿದವರಾಗಿದ್ದರೂ ಯಕ್ಷಗಾನದ ಮೇಲಿನ ಪ್ರೀತಿ, ಆಕರ್ಷಣೆ ಮತ್ತು ಆಸಕ್ತಿಯಿಂದ ಯಕ್ಷಗಾನವನ್ನು ಕಲಿತು ಯಕ್ಷಗಾನವನ್ನೇ ಬದುಕನ್ನಾಗಿಸಿದ ಕಲಾವಿದರು ಸಮಾಜದಲ್ಲಿ ಬಹಳಷ್ಟು ಮಂದಿ ಇರುವುದನ್ನು ನಾವು ಕಾಣಬಹುದು. ಅಲ್ಲದೆ ಯಕ್ಷಗಾನವೆಂದರೆ ಅದನ್ನು ಕೀಳರಿಮೆಯಿಂದ ಕಾಣುವವರೂ ಕೂಡಾ ಹಿಂದೆ ಇದ್ದರು. ಸಮಾಜದ ಇಂದು ಬದಲಾವಣೆಯನ್ನು ಕಂಡಿದೆಯಾದರೂ ಇತ್ತೀಚೆಗೆ ಕೂಡಾ ಯಕ್ಷಗಾನ ಕಲಾವಿದರೆಂದರೆ ತಾತ್ಸಾರ ಭಾವನೆಯಿಂದ ನೋಡುವವರು ಬಹಳಷ್ಟು ಮಂದಿ ಇದ್ದಾರೆ.

- **ಯಕ್ಷಗಾನ ವೃತ್ತಿಗೆ ಸೇರುವಾಗ ಎದುರಾಗುವ ಅಡ್ಡಿಗಳು**

ಈ ಹಿನ್ನೆಲೆಯಲ್ಲಿ ಯಕ್ಷಗಾನವನ್ನು ವೃತ್ತಿಯನ್ನಾಗಿ ಸ್ವೀಕರಿಸುವಾಗ ಕೆಲವರು ಕಲಾವಿದರಿಗೆ ಅಡ್ಡಿಗಳೂ ಎದುರಾಗುತ್ತದೆ. ಈ ಬಗ್ಗೆ ಮಾಹಿತಿದಾರರ ಕಲಾವಿದರಲ್ಲಿ ಪ್ರತಿಶತ 52.22 ರಷ್ಟು ಕಲಾವಿದರು ಯಕ್ಷಗಾನ ವೃತ್ತಿಗೆ ಸೇರಿದಾಗ ಅಡ್ಡಿಯನ್ನು ಎದುರಿಸಿ ಯಕ್ಷಗಾನ ರಂಗಕ್ಕೆ ಬಂದವರಾಗಿದ್ದರೆ, ಪ್ರತಿಶತ 47.78 ರಷ್ಟು ಕಲಾವಿದವರು ಯಾವುದೇ ಅಡ್ಡಿ ಆತಂಕವಿಲ್ಲದೆ ಯಕ್ಷಗಾನ ವೃತ್ತಿರಂಗಕ್ಕೆ ಪಾದಾರ್ಪಣೆ ಮಾಡಿದ್ದರು. ಪ್ರಮುಖವಾಗಿ ಯಕ್ಷಗಾನ ಕ್ಷೇತ್ರದಲ್ಲಿ ಸೇವೆಗೈಯ್ಯಲು ಮುಂದೆ ಬಂದಾಗ ಮನೆಯವರು ಅಥವಾ ಇತರರು ಅಡ್ಡಿಪಡಿಸಲು ಕಾರಣಗಳ ಬಗ್ಗೆ ಅವಲೋಕಿಸಿದಾಗ ಯಕ್ಷಗಾನದಲ್ಲಿ ಉತ್ತಮ ಭವಿಷ್ಯವನ್ನು ಕಂಡುಕೊಳ್ಳಲು ಸಾಧ್ಯವಿಲ್ಲ ಎಂಬ ಭಾವನೆ, ಅಧಿಕ ಸಂಪಾದನೆ ಮಾಡಲು ಸಾಧ್ಯವಿಲ್ಲ, ಯಕ್ಷಗಾನದಲ್ಲಿ ಅನಕ್ಷರಸ್ಥರು ಹೆಚ್ಚಿದ್ದರಿಂದ, ಕಲಾವಿದರಲ್ಲಿ ದುಶ್ಚಟಗಳು ಅಧಿಕಗೊಂಡಿರುವ ಕಾರಣ, ಯಕ್ಷಗಾನದ ಬಗ್ಗೆ ಇರುವ ಕೀಳರಿಮೆ ಮೊದಲಾದ ಕಾರಣಗಳ ಬಗ್ಗೆ ಮಾಹಿತಿದಾರರು ತಿಳಿಸಿದ್ದಾರೆ. ಆದರೆ ಇತ್ತೀಚೆಗೆ ಸಮಾಜವು ಬದಲಾವಣೆಯಾಗಿರುವುದರಿಂದ ಯಕ್ಷಗಾನ ಕಲಾವಿದರಿಗೆ ಸಮಾಜದಲ್ಲಿ ಗೌರವಗಳು ಹೆಚ್ಚಾಗುತ್ತಿದ್ದು, ಕಲಾವಿದರ ಕುಟುಂಬದಲ್ಲಿಯೂ ತಮಗೆ ಗೌರವಗಳು ಸಿಗುತ್ತವೆ ಎಂಬುದನ್ನು ಹೆಚ್ಚಿನ ಕಲಾವಿದರು ಒಪ್ಪಿಕೊಂಡರು ಕೂಡಾ ಪ್ರಸ್ತುತೆಯಲ್ಲಿಯೂ ಯಕ್ಷಗಾನ ವೃತ್ತಿಯನ್ನಾಗಿ ಸ್ವೀಕರಿಸುವ ಹೆಚ್ಚಿನ ಕಲಾವಿದರಿಗೆ ಕುಟುಂಬಸ್ಥರಿಂದ ಅಡ್ಡಿಗಳು ಎದುರಾಗುವುದನ್ನು ಕಾಣಬಹುದು.

- **ಹೆಚ್ಚಿನ ಕಲಾವಿದರು ವೃತ್ತಿಗೆ ಸೇರ್ಪಡೆಗೊಳ್ಳುವ ವಯಸ್ಸು**

ಯಕ್ಷಗಾನವನ್ನು ವೃತ್ತಿಯನ್ನಾಗಿ ಸ್ವೀಕರಿಸುವ ಸಮಯದಲ್ಲಿ ಅವರ ವಯಸ್ಸನ್ನು ಗಮನಿಸಿದಾಗ ಮಾಹಿತಿದಾರ ಕಲಾವಿದರಲ್ಲಿ ಪ್ರತಿಶತ 66.11 ರಷ್ಟು ಕಲಾವಿದರು 15ರಿಂದ 19ರ ವಯಸ್ಸಿನೊಳಗೆ ಯಕ್ಷಗಾನ ವೃತ್ತಿರಂಗಕ್ಕೆ ಬಂದವರಾಗಿದ್ದಾರೆ. ಪ್ರತಿಶತ 28.33 ರಷ್ಟು ಕಲಾವಿದರು 20-24ರ ವಯಸ್ಸಿನ ಅವಧಿಯಲ್ಲಿ ಯಕ್ಷಗಾನವನ್ನು ವೃತ್ತಿಯನ್ನಾಗಿ ಸ್ವೀಕರಿಸಿರುವ ಕಲಾವಿದರಾಗಿದ್ದಾರೆ.

ಯಕ್ಷಗಾನದ ಆಸಕ್ತಿಯೊಂದಿಗೆ ಹುಮ್ಮಸ್ಸು, ಪರಿಶ್ರಮ, ಸಾಮರ್ಥ್ಯ ಕಲಾವಿದನಿಗೆ ಇರಬೇಕಾಗುತ್ತದೆ. ಆದ್ದರಿಂದ ಕಲಾವಿದರು ಯಕ್ಷಗಾನಕ್ಕೆ ಸೇರಿದ ವಯಸ್ಸನ್ನು ಗಮನಿಸಿದಾಗ 15ರಿಂದ 24 ರೊಳಗಿನ ವಯಸ್ಸಿನ ಅವಧಿಯಲ್ಲಿಯೇ ಯಕ್ಷಗಾನ ವೃತ್ತಿಗೆ ಸೇರ್ಪಡೆಗೊಳ್ಳುವುದು ಅಧಿಕವಾಗಿ ಕಂಡು ಬರುತ್ತದೆ.

- **ಯಕ್ಷಗಾನ ಕಲಾವಿದರ ಮೇಳ ಪಲ್ಲಟಗಳ ಕುರಿತು**

ಯಕ್ಷಗಾನ ಕಲಾವಿದರು ಒಂದೇ ಮೇಳದಲ್ಲಿ ಸ್ಥಿರವಾಗಿ ಇರುವುದು ಬಹಳಷ್ಟು ಕಡಿಮೆ. ವೃತ್ತಿ ಕಲಾವಿದರು ಒಂದು ಮೇಳದಿಂದ ಮತ್ತೊಂದು ಮೇಳಕ್ಕೆ ಪಲ್ಲಟವಾಗುತ್ತಾ ಇರುವುದನ್ನು ಸಾಮಾನ್ಯವಾಗಿ ಕಾಣುತ್ತೇವೆ. ಮಾಹಿತಿದಾರ ಕಲಾವಿದರು ಮೇಳಗಳಲ್ಲಿ ಸೇವೆ ಸಲ್ಲಿಸಿರುವ ವಿವರಗಳನ್ನು ಗಮನಿಸಿದಾಗ ಪ್ರತಿಶತ 20.56 ರಷ್ಟು ಕಲಾವಿದರು ಒಂದೇ ಮೇಳದಲ್ಲಿ ದುಡಿದವರಾಗಿದ್ದರೆ, ಪ್ರತಿಶತ 56.67 ರಷ್ಟು ಕಲಾವಿದರು 2-5 ಮೇಳಗಳಲ್ಲಿ ದುಡಿದವರಾಗಿದ್ದಾರೆ. ಪ್ರತಿಶತ 20.00 ರಷ್ಟು ಕಲಾವಿದರು 6-10 ಮೇಳಗಳಲ್ಲಿ ದುಡಿದ್ದಿದ್ದಾರೆ. ಪ್ರತಿಶತ 1.67 ರಷ್ಟು ಕಲಾವಿದರು 11-15 ಮೇಳಗಳಲ್ಲಿ ದುಡಿದ ಕಲಾವಿದರಾಗಿದ್ದಾರೆ. ಹಾಗೆಯೇ ಪ್ರತಿಶತ 1.11 ರಷ್ಟು ಕಲಾವಿದರು 16ಕ್ಕಿಂತಲೂ ಹೆಚ್ಚು ಮೇಳಗಳಲ್ಲಿ ದುಡಿದ ಕಲಾವಿದರಿದ್ದಾರೆ. ಇಲ್ಲಿ ಪ್ರಮುಖವಾಗಿ 2-5 ಮೇಳಗಳಲ್ಲಿ ದುಡಿದವರು ಹೆಚ್ಚಾಗಿ ಕಂಡುಬರುತ್ತಾರೆ. ಒಂದೇ ಮೇಳದಲ್ಲಿ ದುಡಿದವರೂ ಇದ್ದಾರೆ, 16ಕ್ಕಿಂತಲೂ ಹೆಚ್ಚಿನ ಮೇಳಗಳಲ್ಲಿ ದುಡಿದ ಕಲಾವಿದರೂ ಅಧ್ಯಯನದಲ್ಲಿ ಕಂಡು ಬಂದಿದ್ದಾರೆ. ಹೀಗೆ ಒಟ್ಟು ಯಕ್ಷಗಾನ ಕಲಾವಿದರು ಮೇಳಗಳಲ್ಲಿ ಸೇವೆ ಸಲ್ಲಿಸಿರುವ ಬಗ್ಗೆ ಅವಲೋಕನ ಮಾಡಿದಾಗ ಹೆಚ್ಚಿನ ಕಲಾವಿದರು ಒಂದು ಮೇಳದಿಂದ ಮತ್ತೊಂದು ಮೇಳಕ್ಕೆ ಪಲ್ಲಟವಾಗುತ್ತಾ ಇರುತ್ತಾರೆ. ಇಂತಹ ಪಲ್ಲಟಗಳು ಸಾಮಾನ್ಯವಾಗಿ ಹೆಚ್ಚಿನ ಅವಕಾಶಕ್ಕಾಗಿ, ಅಧಿಕ ಸಂಪಾದನೆಗಾಗಿ, ಮೇಳದಲ್ಲಿ ಸಮಸ್ಯೆಯಾದಾಗ, ವೈಯಕ್ತಿಕ ಸಮಸ್ಯೆಗಳು ಮೊದಲಾದ ಕಾರಣಗಳಿಂದ ಹೆಚ್ಚಾಗಿ ನಡೆಯುತ್ತಿರುವುದನ್ನು ಅಧ್ಯಯನದಲ್ಲಿ ಕಂಡುಹಿಡಿಯಲಾಗಿದೆ. ಅಲ್ಲದೆ ಇತ್ತೀಚಿನ ಬೆಳವಣಿಗೆಯಲ್ಲಿ ಮೇಳಗಳ ಸಂಖ್ಯೆಯೂ ವೃದ್ಧಿಸುತ್ತಿವೆ. ಹರಕೆಯಾಟವನ್ನೇ ಆಡುವ ಕಟೀಲು ಮೇಳ ಇಂದು ಆರು ಮೇಳಗಳಾಗಿ ಮುನ್ನಡೆಯುತ್ತಿವೆ. ಅಲ್ಲದೆ ಇತರ ನೂತನ ಮೇಳಗಳು ಆರಂಭಗೊಳ್ಳುತ್ತಿವೆ. ಈ ಸಂದರ್ಭದಲ್ಲಿ ಕಲಾವಿದರಿಗೆ, ಖ್ಯಾತ ಕಲಾವಿದರಿಗೆ ಬೇಡಿಕೆಯೂ ಹೆಚ್ಚುತ್ತಿದೆ ಹಾಗೂ ಕಲಾವಿದರಿಗೂ ಉತ್ತಮ ಅವಕಾಶಗಳು ದೊರೆಯುತ್ತಿರುವ ಪರಿಣಾಮ ಯಕ್ಷಗಾನ ಕಲಾವಿದರು ಮೇಳದಿಂದ ಮೇಳಕ್ಕೆ ಪಲ್ಲಟಗೊಳ್ಳುತ್ತಿರುವುದನ್ನು ನಾವು ಗಮನಿಸಬಹುದಾಗಿದೆ.

ಅಲ್ಲದೆ ಯಕ್ಷಗಾನ ಕಲಾವಿದರಿಗೆ ಅವರ ಕಲಾಸಾಮರ್ಥ್ಯವೇ ಪ್ರಮುಖ ಮಾನದಂಡವಾಗಿದೆ. ಇತ್ತೀಚೆಗೆ ಕಲಾ ಸಾಮರ್ಥ್ಯದೊಂದಿಗೆ ಶೈಕ್ಷಣಿಕವಾಗಿ ಹೆಚ್ಚು ಸಾಧನೆಗೈದು ಬೆಳೆದ ಕಲಾವಿದರಿಗೆ ಬೇಡಿಕೆಯೂ ಹೆಚ್ಚುತ್ತಿದೆ. ಅಧ್ಯಯನದಲ್ಲಿ ಪ್ರತಿಶತ 42.78 ರಷ್ಟು ಮಾಹಿತಿದಾರ ಕಲಾವಿದರು ಕಲಾಸಾಮರ್ಥ್ಯದೊಂದಿಗೆ ಶೈಕ್ಷಣಿಕ ಸಾಧನೆಗೈದ ಕಲಾವಿದರಿಗೆ ಹೆಚ್ಚಿನ ಮನ್ನಣೆ ಸಿಗುತ್ತಿದೆ ಎಂದಿದ್ದಾರೆ. ಅಲ್ಲದೆ ಶಿಕ್ಷಣವು ಕಲಾವಿದನ ಭಾಷಾ ಕೌಶಲ್ಯತೆ, ಪುರಾಣಜ್ಞಾನವನ್ನು ವೃದ್ಧಿಸಿ ನೈಪುಣ್ಯತೆಯನ್ನು ಬೆಳೆಸಲು ಸಹಕಾರಿಯಾಗುತ್ತದೆ ಎಂದು ತಿಳಿಯಬಹುದಾಗಿದೆ.

- **ಯಕ್ಷಗಾನ ವೃತ್ತಿಯ ಬಗ್ಗೆ ಕಲಾವಿದರಿಗಿರುವ ಹೆಮ್ಮೆ**

ಹಿಂದೆ ಯಕ್ಷಗಾನ ಕಲಾವಿದರಾಗಿದ್ದವರಿಗೆ ಸಮಾಜದಲ್ಲಿ ಗೌರವ ಸಿಗುತ್ತಿರಲಿಲ್ಲ. ಯಕ್ಷಗಾನವನ್ನು ಧಾರ್ಮಿಕವಾಗಿ, ಮನೋರಂಜನಾತ್ಮಕವಾಗಿ ಜನ ಸ್ವೀಕರಿಸಿದ್ದರೂ ಅದರಲ್ಲಿ ದುಡಿಯುವ ಕಲಾವಿದರಿಗೆ ಮನ್ನಣೆ ಇರಲಿಲ್ಲ. ಅವರನ್ನು ಹೀನಾಯವಾಗಿ ನೋಡಲಾಗುತ್ತಿತ್ತು. ಆದರೂ ಯಕ್ಷಗಾನ ಕಲಾವಿದರು ತಾವು ಮಾಡುವ ವೃತ್ತಿಗೆ ಅಥವಾ ಯಕ್ಷಗಾನ ಕಲೆಗೆ ಎಂದೂ ಅಪಮಾನ ಮಾಡದೆ ಗೌರವಿಸುತ್ತಾ

ಬಂದವರಾಗಿದ್ದಾರೆ. ಆದರೆ ಪ್ರಸ್ತುತ ಕಾಲಘಟ್ಟದಲ್ಲಿಯೂ ಯಕ್ಷಗಾನ ಕಲಾವಿದರಿಗೆ ತಮ್ಮ ವೃತ್ತಿಯ ಮೇಲೆ ಓರ್ವ ಕಲಾವಿದನಾಗಿ ತಮಗಿರುವ ಹೆಮ್ಮೆಯ ಬಗ್ಗೆ ಮಾಹಿತಿದಾರರಲ್ಲಿ ಕೇಳಿದಾಗ ಪ್ರತಿಶತ 96.67ರಷ್ಟು ಕಲಾವಿದರು ಯಕ್ಷಗಾನ ಕಲಾವಿದನಾಗಿ ಹೆಮ್ಮೆ ಇದೆ ಎಂದಿದ್ದಾರೆ. ಪ್ರತಿಶತ 2.78 ರಷ್ಟು ಕಲಾವಿದರು ಕಲಾವಿದನಾಗಿ ಹೆಮ್ಮೆ ಇಲ್ಲ ಎಂದು ತಿಳಿಸಿದ್ದಾರೆ. ಇಲ್ಲಿ ಬಹುತೇಕ ಕಲಾವಿದರು ತಮ್ಮ ವೃತ್ತಿಯ ಮೇಲೆ ಗೌರವ, ಪ್ರೀತಿ ಹಾಗೂ ಕಲಾವಿದನಾಗಿ ಹೆಮ್ಮೆ ಪಡುವವರೇ ಆಗಿರುವುದನ್ನು ಗಮನಿಸಬಹುದಾಗಿದೆ. ಯಾವುದೇ ಉದ್ಯೋಗ, ವೃತ್ತಿ ಅಥವಾ ಕಲೆಯಲ್ಲಾಗಲೀ ನಾವು ಮಾಡುವ ಕಾರ್ಯದಲ್ಲಿ ತೃಪ್ತಿಯಿರಬೇಕು. ಹಾಗಿದ್ದರೆ ತಾವು ಮಾಡುವ ವೃತ್ತಿಗೂ ಒಂದು ನ್ಯಾಯ ಸಿಗುತ್ತದೆ ತಮಗೂ ಆ ವೃತ್ತಿಯ ಬಗ್ಗೆ ಹೆಮ್ಮೆಯಿರುತ್ತದೆ. ಇದಕ್ಕೆ ಯಕ್ಷಗಾನ ಕಲಾವಿದರೇ ಸಾಕ್ಷಿಯಾಗಿದ್ದು, ಕಲಾವಿದರಾಗಿ ಹಲವಾರು ಸಮಸ್ಯೆಗಳಿದ್ದರೂ ಯಕ್ಷಗಾನ ಕಲೆಯ ಮೇಲೆ ಅವರಿಟ್ಟಿರುವ ಪ್ರೀತಿ, ಕಾಳಜಿ, ಗೌರವವೇ ಯಕ್ಷಗಾನವು ಇಂದಿಗೂ ಕೂಡಾ ಸಂಪ್ರದಾಯಬದ್ಧವಾಗಿ ಇದ್ದುಕೊಂಡು ಸಮೃದ್ಧವಾಗಿ ಬೆಳೆದು ಶ್ರೀಮಂತವಾಗಿ ಇರುವುದಕ್ಕೆ ಕಾರಣವಾಗಿದೆ ಎನ್ನಬಹುದು.

- **ಎಲ್ಲಾ ಜಾತಿಯ ಕಲಾವಿದರಿಗೆ ಯಕ್ಷಗಾನದಲ್ಲಿ ಅವಕಾಶಗಳು**

ಯಕ್ಷಗಾನ ಕಲೆಯು ಶ್ರೀಮಂತ ಕಲೆಯಾಗಿ ಮೆರೆಯುತ್ತಿದ್ದರೂ ಕಲೆಯೊಳಗೆ ಆಂತರಿಕವಾಗಿ ಕೆಲವೊಂದು ಜಾತಿಯ ವಿಚಾರಗಳು, ಗುಂಪುಗಾರಿಕೆ, ಸಂಘರ್ಷಗಳಿದ್ದವು. ಇದು ಯಕ್ಷಗಾನ ರಂಗದ ಬೆಳವಣಿಗೆಯಲ್ಲಿಯೂ ಹಲವಾರು ಪರಿಣಾಮಗಳಿಗೆ ಕಾರಣವಾಗಿತ್ತು. ಅಲ್ಲದೆ ಹಲವು ಕಲಾವಿದರು ಅವಕಾಶ ವಂಚಿತರಾಗುತ್ತಿದ್ದರು ಮಾತ್ರವಲ್ಲದೆ ಸಾಮಾಜಿಕವಾಗಿ ಹಲವಾರು ಸಮಸ್ಯೆಗಳನ್ನೂ ಎದುರಿಸಬೇಕಾಗಿತ್ತು. ಆದರೆ ಈಗ ಕಾಲ ಬದಲಾಗಿದ್ದು, ಸಮಾಜವು ಬದಲಾಗಿರುವಂತೆ ಯಕ್ಷಗಾನ ರಂಗದ ಸ್ಥಿತಿಗತಿಯಲ್ಲಿಯೂ ಹಲವಾರು ಪರಿವರ್ತನೆ, ಬದಲಾವಣೆಗಳಾಗಿವೆ. ಪ್ರಸ್ತುತ ಕಾಲದಲ್ಲಿ ಎಲ್ಲಾ ಜಾತಿಯ ಕಲಾವಿದರಿಗೂ ಯಕ್ಷಗಾನದಲ್ಲಿ ಅವಕಾಶಗಳ ಬಗ್ಗೆ ಮಾಹಿತಿದಾರರಲ್ಲಿ ಕೇಳಿದಾಗ ಪ್ರತಿಶತ 90.56 ರಷ್ಟು ಕಲಾವಿದರು ಇಂದು ಎಲ್ಲಾ ಜಾತಿಯ ಕಲಾವಿದರಿಗೆ ಅವಕಾಶಗಳಿವೆ ಯಾವುದೇ ಬೇಧ ಭಾವವನ್ನು ತೋರಿಸುವುದಿಲ್ಲ ಎಂದಿದ್ದಾರೆ. ಪ್ರತಿಶತ 1.67 ರಷ್ಟು ಕಲಾವಿದರು ಎಲ್ಲಾ ಜಾತಿಯ ಕಲಾವಿದರಿಗೆ ಸರಿಸಮಾನವಾದ ಅವಕಾಶಗಳು ಸಿಗುತ್ತಿಲ್ಲ ಎಂದು ಹೇಳಿದ್ದರೆ, ಪ್ರತಿಶತ 7.78 ರಷ್ಟು ಕಲಾವಿದರು ಕೆಲವೊಂದು ಮೇಳಗಳಲ್ಲಿ ಅವಕಾಶಗಳು ಇರಲಿಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಇಲ್ಲಿ ಮಾಹಿತಿದಾರ ಕಲಾವಿದರ ಅಭಿಪ್ರಾಯಗಳನ್ನು ಗಮನಿಸಿದಾಗ ಬಹುತೇಕ ಕಲಾವಿದರು ಇಂದಿನ ಕಾಲದಲ್ಲಿ ಜಾತಿಭೇದದ ಲಕ್ಷಣಗಳಿಲ್ಲ ಹಾಗೂ ಎಲ್ಲಾ ಕಲಾವಿದರಿಗೂ ಸಮಾನ ಅವಕಾಶಗಳಿವೆ ಎಂಬುದನ್ನು ಒಪ್ಪಿಕೊಂಡಿರುವುದು ಕಂಡು ಬಂದಿದೆ. ಆದರೆ ಕೆಲವು ಮಂದಿ ಕಲಾವಿದರು ಅಂದರೆ ಪ್ರತಿಶತ 1.67 ರಷ್ಟು ಕಲಾವಿದರು ಎಲ್ಲಾ ಜಾತಿಯ ಕಲಾವಿದರಿಗೆ ಅಂದರೆ ಪರಿಶಿಷ್ಟ ಜಾತಿ ಮತ್ತು ಪಂಗಡ, ಹಿಂದುಳಿದ ಜಾತಿಯ ಸಮುದಾಯ, ಅನ್ಯ ಧರ್ಮದ ಕಲಾವಿದರಿಗೆ ಸಮಾನವಾದ ಅವಕಾಶಗಳು ಸಿಗುತ್ತಿಲ್ಲ ಎಂಬುದರ ಬಗ್ಗೆ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಒಟ್ಟಿನಲ್ಲಿ ಯಕ್ಷಗಾನರಂಗವು ಕಲಾವಿದರ ಅವಕಾಶಗಳ ವಿಚಾರದಲ್ಲಿ ಬಹಳಷ್ಟು ಬದಲಾವಣೆಗಳನ್ನು ಕಾಣಬಹುದಾಗಿದ್ದು ಎಲ್ಲಾ ಜಾತಿಯ ಕಲಾವಿದರಿಗೂ ತಮ್ಮ ಪ್ರತಿಭೆ, ಸಾಮರ್ಥ್ಯದ ಆಧಾರದಲ್ಲಿ ಅವಕಾಗಳು ಒದಗಿಬರುವುದನ್ನು ಪ್ರಸ್ತುತ ಕಾಲಘಟ್ಟದಲ್ಲಿ ಕಾಣಬಹುದಾಗಿದೆ. ಅಲ್ಲದೆ ಇಂದು ಹೆಚ್ಚಿನ ಕಲಾವಿದರು ಶೈಕ್ಷಣಿಕವಾಗಿ ಮುಂದುವರಿದ ಕಲಾವಿದರಾಗುತ್ತಿರುವುದರಿಂದ ಮೇಳಗಳಲ್ಲಿ ಜಾತಿಯ ವಿಚಾರಗಳು ದೂರವಾಗಿ ಎಲ್ಲರೂ ಅವಿಭಕ್ತಕುಟುಂಬದ ರೀತಿಯಲ್ಲಿ ಯಕ್ಷಗಾನ ರಂಗದಲ್ಲಿ, ಚೌಕಿಯಲ್ಲಿ, ಬಿಡಾರದಲ್ಲಿ ಎಲ್ಲಾ ಜಾತಿಯ ಕಲಾವಿದರು ಒಟ್ಟಾಗಿದ್ದುಕೊಂಡು ಮುನ್ನಡೆಯುತ್ತಿರುವುದನ್ನು ಕಾಣಬಹುದಾಗಿದೆ. ಆದರೂ ಯಕ್ಷಗಾನಗಳಲ್ಲಿ ಜಾತಿಯ ವಿಚಾರಗಳು ಬಹಿರಂಗವಾಗಿ ಕಾಣದಿದ್ದರೂ

ಆಂತರಿಕವಾಗಿ ಕೆಲವೊಮ್ಮೆ ಜಾತಿಯ ವಿಚಾರಗಳು, ಪಾತ್ರ ಹಂಚಿಕೆ, ಅವಕಾಶಗಳ ಬಗೆಗೆ ಬೇಧಭಾವದ ಅಂಶಗಳು ಗೌಣವಾಗಿಯೇ ಉಳಿದುಕೊಂಡಿರುವುದನ್ನು ಗಮನಿಸಿಬಹುದಾಗಿದೆ.

- **ಕಲಾವಿದರ ರಜೆ ಹಾಗೂ ಪಾತ್ರಗಳ ಹೊಂದಾಣಿಕೆ**

ಯಕ್ಷಗಾನ ಕಲಾವಿದರಿಗೆ ತಮ್ಮ ಆರು ತಿಂಗಳ ಮೇಳದ ತಿರುಗಾಟದ ಸಂದರ್ಭದಲ್ಲಿ ಆಯಾ ಮೇಳಗಳು ತಮ್ಮ ಕಲಾವಿದರಿಗೆ ಅಗತ್ಯ ಹಾಗೂ ಅನುಕೂಲಕ್ಕೆ ತಕ್ಕಂತೆ ರಜೆಯ ವ್ಯವಸ್ಥೆಯನ್ನು ನಿಗಧಿ ಮಾಡಿರುತ್ತವೆ. ಸಾಮಾನ್ಯವಾಗಿ ಮಾಹಿತಿದಾರ ಕಲಾವಿದರ ಪ್ರಕಾರ ಪ್ರತಿಶತ 91.67ರಷ್ಟು ಕಲಾವಿದರು 8-14 ರಷ್ಟು ರಜೆಗಳು ಸಾಮಾನ್ಯವಾಗಿ ಸಿಗುತ್ತವೆ ಎಂದು ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ಕಲಾವಿದರೇ ಹೆಚ್ಚಾಗಿ ಮೇಳದ ಉಳಿದ ಕಲಾವಿದರೊಂದಿಗೆ ಆಯಾ ಪಾತ್ರವನ್ನು ನಿರ್ವಹಿಸಿಲು ಹೊಂದಾಣಿಕೆ ಮಾಡಿಕೊಂಡು ಯಕ್ಷಗಾನಕ್ಕೆ ಯಾವುದೇ ರೀತಿಯ ತೊಂದರೆಯಾಗದಂತೆ ನೋಡಿಕೊಳ್ಳುತ್ತಾರೆ. ಒಂದು ವೇಳೆ ನಿಗಧಿಗಿಂತ ಹೆಚ್ಚು ರಜೆ ಪಡೆಯುವಾಗ ಮೇಳದ ಯಜಮಾನರು ಅಥವಾ ವ್ಯವಸ್ಥಾಪಕರಿಂದ ತೊಂದರೆಯನ್ನು ಎದುರಿಸಬೇಕಾದ ಪರಿಸ್ಥಿತಿ ಎದುರಾಗುತ್ತದೆ.

- **ಶಿಬಿರದಲ್ಲಿ ಉಳಿದುಕೊಳ್ಳುವ ಮತ್ತು ಮನೆಗೆ ಹೋಗಿ ಬರುವ ಕಲಾವಿದರು**

ಹಿಂದೆ ಯಕ್ಷಗಾನದ ಆರು ತಿಂಗಳ ಅವಧಿಯಲ್ಲಿ ಕಲಾವಿದರು ಕ್ಯಾಂಪಿನಲ್ಲೇ ಉಳಿದುಕೊಳ್ಳುವವರಾಗಿದ್ದರು ಮತ್ತು ಅಪರೂಪಕ್ಕೊಮ್ಮೆ ಮನೆಗೆ ಹೋಗಿ ಬರುತ್ತಿದ್ದರು. ಆದರೆ ಹಿಂದೆ ಅವಿಭಕ್ತ ಕುಟುಂಬವಿತ್ತು. ಮನೆಯ ಜವಬ್ಧಾರಿಯನ್ನು ನೋಡಿಕೊಳ್ಳಲು ಬೇರೆ ಜನರೂ ಇದ್ದರು. ಸಂಚಾರ ಸಂಪರ್ಕ ವ್ಯವಸ್ಥೆಯೂ ಕಡಿಮೆ ಇತ್ತು. ಆದರೆ ಈಗ ಅವಿಭಕ್ತ ಕುಟುಂಬಗಳು ಮರೆಯಾಗಿ ವಿಭಕ್ತ ಕುಟುಂಬಗಳೇ ಇವೆ. ಈ ಹಿನ್ನೆಲೆಯೊಂದಿಗೆ ಪ್ರಸ್ತುತ ಕಾಲದಲ್ಲಿ ಕಲಾವಿದರು ಮನೆಗೆ ಹೋಗಿ ಬರುವ ವಿಚಾರದಲ್ಲಿ ಅಭಿಪ್ರಾಯವನ್ನು ತಿಳಿದಾಗ ಪ್ರತಿಶತ 52.22 ರಷ್ಟು ಕಲಾವಿದರು ದಿನಾ ಮನೆಗೆ ಹೋಗಿ ಬರುವವರಾಗಿದ್ದಾರೆ. ಪ್ರತಿಶತ 15.56 ರಷ್ಟು ಕಲಾವಿದರು ಎರಡು ಮೂರು ದಿನಕೊಮ್ಮೆ ಹೋಗಿ ಬರುತ್ತಾರೆ. ಪ್ರತಿಶತ 27.78 ರಷ್ಟು ಕಲಾವಿದರು ವಾರಕ್ಕೊಮ್ಮೆ ಹೋಗಿ ಬಂದರೆ, ಪ್ರತಿಶತ 4.44 ರಷ್ಟು ಕಲಾವಿದರು ತಿಂಗಳಿಗೊಮ್ಮೆ ಹೋಗಿ ಬರುವ ಕಲಾವಿದರಾಗಿದ್ದಾರೆ. ದಿನಾ ಮನೆಗೆ ಹೋಗಿ ಬರುವ ಕಲಾವಿದರೇ ಇಲ್ಲಿ ಅಧಿಕವಾಗಿದ್ದಾರೆ.

ಹೆಚ್ಚುತ್ತಿರುವ ವಿಭಕ್ತ ಕುಟುಂಬ, ಅಧಿಕಗೊಂಡಿರುವ ಸಾರಿಗೆ ವ್ಯವಸ್ಥೆಗಳು ಮತ್ತು ಹೆಚ್ಚಿನ ಕಲಾವಿದರು ದ್ವಿಚಕ್ರದಂತಹ ವಾಹನಗಳನ್ನೂ ಹೊಂದಿದ್ದಾರೆ. ಆದ್ದರಿಂದ ಮನೆಗೆ ಹೋಗಿ ಬರುವವರ ಸಂಖ್ಯೆ ಹೆಚ್ಚಾಗಿದೆ ಎಂದು ಹೇಳಬಹುದು. ಅಲ್ಲದೆ ಕೆಲವು ಕಲಾವಿದರು ದೂರ-ದೂರದ ಕಡೆಗಳಲ್ಲಿ ಯಕ್ಷಗಾನಗಳಿದ್ದರೆ ಅಥವಾ ಸಾರಿಗೆ ವ್ಯವಸ್ಥೆಗಳು ಸರಿಯಾಗಿ ಸಿಗದೇ ಇರುವ ಪರಿಣಾಮ ಮತ್ತು ವೇತನ ಸಾಲದೆ ಖರ್ಚು ಅಧಿಕಗೊಳ್ಳುವ ಪರಿಣಾಮದಿಂದಲೂ ದಿನಾ ಹೋಗದೆ ಎರಡು ಮೂರು ದಿನಗಳಿಗೊಮ್ಮೆ ಮನೆಗೆ ತೆರಳುತ್ತಾರೆ. ಇದಲ್ಲದೆ ವಾಹನ ವ್ಯವಸ್ಥೆ ಇಲ್ಲದ, ದೂರದ ಊರಿನಿಂದ, ಹಳ್ಳಿಗಳಿಂದ ಬರುವ ಕಲಾವಿದರು ಹೆಚ್ಚಾಗಿ ವಾರಕ್ಕೊಮ್ಮೆ, ಎರಡು ವಾರಕ್ಕೊಮ್ಮೆ ಅಥವಾ ತಿಂಗಳಿಗೊಮ್ಮೆ ಹೋಗಿಬರುವುದನ್ನು ಪಸ್ತುತ ಕಾಲಘಟ್ಟದಲ್ಲಿ ಕಾಣಬಹುದು.

- **ಕೌಟುಂಬಿಕ ಕಾರ್ಯಕ್ರಮ, ಕುಟುಂಬದ ಜವಬ್ಧಾರಿ ನಿಭಾಯಿಸುವ ಬಗೆಗೆ**

ಉಳಿದೆಲ್ಲ ವೃತ್ತಿಗೆಲ್ಲ ಹೋಲಿಸಿದರೆ ಯಕ್ಷಗಾನವನ್ನು ವೃತ್ತಿಯಾಗಿ ಸ್ವೀಕರಿಸಿ ಬದುಕು ಸಾಗಿಸುತ್ತಿರುವ ಕಲಾವಿದರ ಬದುಕಿಗೆ ತುಂಬಾ ವ್ಯತ್ಯಾಸವಿದೆ. ರಾತ್ರಿಯ ವೇಳೆ ದುಡಿಯುವ, ಹಗಲಲ್ಲಿ ನಿದ್ರೆ, ವಿಶ್ರಾಂತಿ ಪಡೆಯುವ ದುಡಿಮೆಯಿದು. ಈ ನಡುವೆ ಕುಟುಂಬದ ಜವಾಬ್ಧಾರಿ, ಕೌಟುಂಬಿಕ ಕಾರ್ಯಕ್ರಮಗಳು ಮತ್ತು ಇತರ ಕಾರ್ಯಕ್ರಮಗಳಲ್ಲಿ ಬಾಗವಹಿಸುವುದು ಸವಾಲಿನ ಕೆಲಸವೂ ಹೌದು. ಪ್ರಸ್ತುತ ಕಾಲದಲ್ಲಿ ಕಲಾವಿದರಿಗೆ ಕೌಟುಂಬಿಕ ಕಾರ್ಯಕ್ರಮಗಳಿಗೆ ಭಾಗವಹಿಸಲು ಹೆಚ್ಚಾಗಿ

ಅವಕಾಶಗಳು ಲಭಿಸುತ್ತಿವೆಯಾರೂ ಬಹಳಷ್ಟು ಕಲಾವಿದರಿಗೆ ತೊಂದರೆಯೂ ಆಗುತ್ತಿದೆ. ಇಂದು ಹೆಚ್ಚಿನ ಕಲಾವಿದರು ದಿನಾ ಮನೆಗೆ ಹೋಗಿ ಬರುವ ಕಲಾವಿದರಾಗಿರುವುದರಿಂದ ಕುಟುಂಬದ ಜವಬ್ಧಾರಿಯನ್ನು ನಿಭಾಯಿಸುವಲ್ಲಿ ಹೆಚ್ಚಿನವರು ಸಮರ್ಥರಾಗಿದ್ದಾರೆ ಹಾಗು ಇತರ ಕೌಟುಂಬಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದಕ್ಕೂ ಹೆಚ್ಚಿನ ಅವಕಾಶಗಳು ಅವರಿಗೆ ಸಿಗುತ್ತದೆ. ಆದರೆ ಯಕ್ಷಗಾನ ಕ್ಯಾಂಪ್‌ನಲ್ಲೇ ಉಳಿದುಕೊಂಡು ವಾರಕ್ಕೊಮ್ಮೆ, ತಿಂಗಳಿಗೊಮ್ಮೆ ಮನೆಗೆ ಬರುವ ಕಲಾವಿದರು ಕುಟುಂಬ ನಿರ್ವಹಣೆ ಹಾಗೂ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ವಿಷಯದಲ್ಲಿ ಕಷ್ಟಮಯ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾರೆ. ಅಲ್ಲದೆ ಕ್ಯಾಂಪ್‌ನಲ್ಲೇ ಉಳಿದುಕೊಂಡು ಅಪರೂಪಕ್ಕೊಮ್ಮೆ ಮನೆಗೆ ಹೋಗಿ ಬರುವ ಕಲಾವಿದರು ತನ್ನ ಕುಟುಂಬದ ಸದಸ್ಯರು ಅಥವಾ ಪತ್ನಿ, ಮಕ್ಕಳೊಂದಿಗೆ ಬೆರೆಯುವುದಕ್ಕೂ ಅವಕಾಶಗಳು ಕಡಿಮೆಯಿರುತ್ತದೆ.

- **ವೃತ್ತಿ ಕಲಾವಿದರಿಗೆ ನಿದ್ದೆಗೆ ಸಿಗುವ ಅವಧಿ**

ಮನುಷ್ಯನ ಆರೋಗ್ಯದಲ್ಲಿ ನಿದ್ದೆಯೂ ಪ್ರಮುಖ ಪಾತ್ರವಹಿಸುತ್ತದೆ. ಮೇಳದ ಯಕ್ಷಗಾನವು ರಾತ್ರಿಯ ವೇಳೆಯೇ ಇರುವುದರಿಂದ ಕಲಾವಿದರು ಈ ವೇಳೆಯಲ್ಲಿ ಆಯಾ ಪ್ರಸಂಗಗಳಲ್ಲಿ ವಿಭಿನ್ನ ಪಾತ್ರಗಳ ಮೂಲಕ ಸಕ್ರಿಯವಾಗಿ ತೊಡಗಿಸಿಕೊಂಡಿರುತ್ತಾರೆ.

ಮಾಹಿತಿದಾರರಲ್ಲಿ ಹೆಚ್ಚಿನವರು ಅಂದರೆ ಪ್ರತಿಶತ 59.44ರಷ್ಟು ಕಲಾವಿದರು ದಿನಕ್ಕೆ ಸಾಮಾನ್ಯವಾಗಿ 3-4 ಗಂಟೆ ನಿದ್ದೆ ಮಾಡಲು ಅವಕಾಶ ಸಿಗುವ ಬಗ್ಗೆ ಹೇಳಿದ್ದಾರೆ. ಅತ್ಯಂತ ಕಡಿಮೆ ಎಂದರೆ ಪ್ರತಿಶತ 13.33ರಷ್ಟು ಕಲಾವಿದರು ದಿನಕ್ಕೆ 1-2 ಗಂಟೆ ನಿದ್ದೆ ಮಾಡುವವರೂ ಕೂಡಾ ಅಧ್ಯಯನದಲ್ಲಿ ಕಂಡು ಬಂದಿದ್ದಾರೆ. ಇತ್ತೀಚೆಗೆ ಹೆಚ್ಚಿನ ಕಲಾವಿದರು ಯಕ್ಷಗಾನದಲ್ಲಿ ತಮ್ಮ ಪಾತ್ರ ಮುಗಿಸಿ ಮನೆಗೆ ಬಂದು ಮಲಗುವುದರಿಂದ ಅಥವಾ ಚೌಕಿಯಲ್ಲೇ ಮಲಗಲು ಅವಕಾಶ ಸಿಗುವುದರಿಂದ ಹೆಚ್ಚಿನ ಕಲಾವಿದರಿಗೆ ವಿಶ್ರಾಂತಿಗೆ ಅವಕಾಶ ಸಿಗುತ್ತಿವೆ ಎಂದು ಹೇಳಬಹುದು. ಕೆಲವೊಂದು ಮೇಳಗಳಲ್ಲಿ ಕಾಲಮಿತಿ ಯಕ್ಷಗಾನವೂ ಆರಂಭಗೊಂಡಿರುವುರಿಂದ ಕಲಾವಿದರಿಗೆ ನಿದ್ದೆಯ ಅವಕಾಶ ಸಿಗುತ್ತಿದೆ. ಆದರೆ ಇಡೀ ರಾತ್ರಿ ಯಕ್ಷಗಾನದಲ್ಲಿ ದುಡಿದು ಹಗಲು ಹೊತ್ತು ಬೇರೆ ಉದ್ಯೋಗಗಳನ್ನು ಮಾಡುತ್ತಿರುವ ಕಲಾವಿದರು ವಿಶ್ರಾಂತಿ, ನಿದ್ದೆಕೊರತೆಯ ಸಮಸ್ಯೆಯನ್ನು ಎದುರಿಸುವುದನ್ನು ಕಾಣಬಹುದು. ಇದು ಕಲಾವಿದರ ಆರೋಗ್ಯದ ಮೇಲೂ ಪರಿಣಾಮ ಬೀರುತ್ತವೆ ಎಂದು ಹೇಳಬಹುದಾಗಿದೆ.

- **ನಿದ್ದೆಗೆಡುವುದರಿಂದ ಆರೋಗ್ಯದ ಮೇಲಾಗುವ ತೊಂದರೆಗಳು**

ನಿದ್ದೆಗೆಡುವುದರಿಂದ ಆರೋಗ್ಯದ ಮೇಲಾಗುವ ಪರಿಣಾಮದ ಬಗ್ಗೆ ಮಾಹಿತಿದಾರ ಕಲಾವಿದರ ಚರ್ಚಿಸಿದಾಗ ಪ್ರತಿಶತ 49.44 ರಷ್ಟು ಕಲಾವಿದರು ನಿದ್ದೆಗೆಡುವುದರಿಂದ ಕಲಾವಿದರ ಆರೋಗ್ಯದಲ್ಲಿ ಎದುರಾಗಿರುವ ತೊಂದರೆ ಹಾಗೂ ಪರಿಣಾಮಗಳ ಬಗೆಗೆ ಹೇಳಿದ್ದಾರೆ. ನಿದ್ದೆಗೆಡುವುದರಿಂದ ಪ್ರಮುಖವಾಗಿ ಅಧಿಕ ರಕ್ತದೊತ್ತಡ, ನಿಶಕ್ತಿ, ಮಾನಸಿಕ ತೊಂದರೆ ಅಥವಾ ಕಿರಿಕಿರಿ, ತಲೆನೋವು, ತಲೆಸುತ್ತು ಬರುವುದು, ವಾಂತಿ, ಪಿತ್ತ, ದೈಹಿಕ ಆಯಾಸ, ಸ್ವರದಲ್ಲಿ ತೊಂದರೆ ಹೀಗೆ ಹಲವು ತೊಂದರೆಗಳು ಕಲಾವಿದರಿಗೆ ಎದುರಾಗುತ್ತದೆ. ಕೆಲವು ಸಂದರ್ಭದಲ್ಲಿ ರಾತ್ರಿಯ ವೇಳೆ ಹಾಗೂ ಹಗಲಿನ ವೇಳೆಯೂ ವಿಶ್ರಾಂತಿ ಇಲ್ಲದೆ ದುಡಿಯುವ ಪರಿಣಾಮ ಆರೋಗ್ಯದಲ್ಲಿ ಹಲವು ವೈಪರಿತ್ಯಗಳು ಆಗುವ ಬಗ್ಗೆಯೂ ಕಲಾವಿದರು ತಮ್ಮ ಅಳಲನ್ನು ವ್ಯಕ್ತಪಡಿಸುತ್ತಾರೆ.

- **ಯಕ್ಷಗಾನ ವೃತ್ತಿ ಕಲಾವಿದರಿಗೆ ಇರುವ ವ್ಯಸನಗಳು**

ಯಕ್ಷಗಾನ ಕಲಾವಿದರಿಗೆ ಹಿಂದೆ ಸಮಾಜದಲ್ಲಿ ಮನ್ನಣೆ ಸಿಗುತ್ತಿರಲಿಲ್ಲ. ಇದಕ್ಕೆ ಪ್ರಮುಖ ಕಾರಣ ಕಲಾವಿದರು ಆರು ತಿಂಗಳ ಕಾಲ ಮನೆ ಬಿಟ್ಟು ಮೇಳದಲ್ಲಿ ಕ್ಯಾಂಪಿನಲ್ಲೇ ಉಳಿದುಕೊಂಡಿರಬೇಕಿತ್ತು. ಈ

ಸಂದರ್ಭದಲ್ಲಿ ಕಲಾವಿದರಿಗೆ ಹಲವಾರು ದುಶ್ಚಟಗಳು, ವ್ಯಸನಗಳು ಅಂಟಿಕೊಳ್ಳುತ್ತಿದ್ದವು. ಪ್ರಮುಖವಾಗಿ ಮದ್ಯಪಾನ, ಬೀಡಿ, ಸಿಗರೇಟು, ತಂಬಾಕು ಸೇವನೆ, ಗುಟ್ಕಾ, ತಂಬಾಕು ಸಹಿತ ಎಲೆಅಡಿಕೆ ಸೇವನೆ ಮೊದಲಾದ ವ್ಯಸನಗಳಿಗೆ ಕಲಾವಿದರು ಅಂಟಿಕೊಳ್ಳುತ್ತಿದ್ದರು. ಇದರಿಂದಾಗಿ ಯಕ್ಷಗಾನ ಕಲಾವಿದರೆಂದರೆ ದುಶ್ಚಟಗಳ ದಾಸರು ಎಂಬ ಒಂದು ರೀತಿಯ ತಾತ್ಸಾರ ಭಾವನೆಯೂ ಸಮಾಜದಲ್ಲಿತ್ತು. ಪ್ರಸ್ತುತ ಕಾಲಘಟ್ಟದಲ್ಲಿ ಕಲಾವಿದರ ಇಂತಹ ವ್ಯಸನಗಳ ಬಗ್ಗೆ ತಿಳಿದಾಗ ಪ್ರತಿಶತ 22.02ರಷ್ಟು ಜನ ಇಂತಹ ಹವ್ಯಾಸಗಳು ಇದೆ ಎಂದು ಹೇಳಿದರೆ, ಪ್ರತಿಶತ 52.07ರಷ್ಟು ಮಾಹಿತಿದಾರರು ಮದ್ಯಪಾನ ಅಥವಾ ಇಂತಹ ಯಾವುದೇ ಹವ್ಯಾಸಗಳು ಇಲ್ಲ ಎಂದು ಹೇಳಿದ್ದಾರೆ. ಆದರೆ ಪ್ರತಿಶತ 25.00ರಷ್ಟು ಜನರು ಮದ್ಯಪಾನ ಅಥವಾ ಎಲೆಅಡಿಕೆಯಂತಹ ಬೇರೆ ಹವ್ಯಾಸಗಳು ಕೆಲವೊಮ್ಮೆ ಇರುತ್ತದೆ ಎಂದು ಹೇಳಿದ್ದಾರೆ.

ಮಾಹಿತಿದಾರ ಕಲಾವಿದರಲ್ಲಿ ವ್ಯಸನ ಹೊಂದಿರುವ ಒಟ್ಟು ಕಲಾವಿದರಲ್ಲಿ ಪ್ರತಿಶತ 49.40ರಷ್ಟು ಕಲಾವಿದರು ಮದ್ಯಪಾನವನ್ನು ಮಾಡುವ ಬಗ್ಗೆ ತಿಳಿಸಿದ್ದರೆ, ಪ್ರತಿಶತ 12.94ರಷ್ಟು ಜನರು ಬೀಡಿ, ಸಿಗರೇಟ್ ನಂತಹ ದೂಮಪಾನ ಮಾಡುವ ಬಗ್ಗೆ ತಿಳಿಸಿದ್ದಾರೆ. ಹಾಗೆಯೇ 21.11ರಷ್ಟು ಕಲಾವಿದರು ವೀಳ್ಯದೆಳೆ ಅಡಿಕೆ ತಿನ್ನುವ ಹವ್ಯಾಸವನ್ನು ಒಳಗೊಂಡಿರುವ ಬಗ್ಗೆ ಮಾಹಿತಿ ನೀಡಿದ್ದಾರೆ. ಪ್ರತಿಶತ 10.50 ರಷ್ಟು ಕಲಾವಿದರು ಪಾನ್‌ಪರಾಗ್‌ನಂತಹ ಗುಟ್ಕಾ ಅಭ್ಯಾಸಗಳ ಬಗ್ಗೆ ತಿಳಿಸಿದ್ದಾರೆ. ಪ್ರತಿಶತ 5.80ರಷ್ಟು ಕಲಾವಿದರು ಮದ್ಯಪಾನ ಮತ್ತು ದೂಮಪಾನ ಮಾಡುವ ಬಗ್ಗೆ ಮಾಹಿತಿ ನೀಡಿದ್ದಾರೆ.

ಪ್ರಮುಖವಾಗಿ ಇಲ್ಲಿ ಮದ್ಯಪಾನ ಮತ್ತು ಎಲೆಅಡಿಕೆ ತಿನ್ನುವ ಕಲಾವಿದರೇ ಹೆಚ್ಚಾಗಿ ಕಂಡು ಬಂದಿದ್ದಾರೆ. ಅಲ್ಲದೆ ಕೆಲವು ಕಲಾವಿದರು ಮಾದಕ ವ್ಯಸನದ ಹವ್ಯಾಸವನ್ನು ಒಳಗೊಂಡಿದ್ದರೂ ಈ ಬಗ್ಗೆ ಮಾಹಿತಿ ನೀಡಲು ನಿರಾಕರಿಸುತ್ತಾರೆ. ಆದರೆ ಇತ್ತೀಚೆಗೆ ಕೆಲವೊಂದು ಮೇಳಗಳಲ್ಲಿ ಅಂದರೆ ಕ್ಯಾಂಪ್‌ಗಳಲ್ಲಿ ಯಕ್ಷಗಾನ ಪ್ರದರ್ಶನದ ಸಂದರ್ಭದಲ್ಲಿ ಇಂತಹ ಮಾದಕ ವ್ಯಸನಗಳಿಗೆ ವ್ಯವಸ್ಥಾಪಕರು ಅಡ್ಡಿಪಡಿಸುತ್ತಾರೆ. ಆದರೆ ಎಲೆ ಅಡಿಕೆ ತಿನ್ನುವಂತಹ ಹವ್ಯಾಸವನ್ನು ಹೆಚ್ಚಿನ ಕಲಾವಿದರು ಅಭ್ಯಾಸ ಮಾಡಿಕೊಂಡಿರುತ್ತಾರೆ. ಇಂದಿನ ಕಾಲದಲ್ಲಿಯೂ ಯಕ್ಷಗಾನ ವೃತ್ತಿ ಕಲಾವಿದರಲ್ಲಿ ಹಲವರು ಮದ್ಯಪಾನದಂತಹ ದುಶ್ಚಟಗಳಿಗೆ ಅಂಟಿಕೊಂಡಿರುವುದನ್ನು ಗಮನಿಸಬಹುದಾಗಿದೆ.

ಹಲವು ವರ್ಷಗಳ ಹಿಂದಿನ ಕಾಲದ ಯಕ್ಷಗಾನ ಕಲಾವಿದರ ಸಾಮಾಜಿಕ ಸ್ಥಿತಿಗತಿ ಹಾಗೂ ಪ್ರಸ್ತುತ ಕಾಲಘಟ್ಟದ ಕಲಾವಿದರ ಸ್ಥಿತಿಗತಿಯ ಬಗ್ಗೆ ಅಧ್ಯಯನ ನಡೆಸಿದಾಗ, ಕಲಾವಿದರ ಕೌಟುಂಬಿಕ ವ್ಯವಸ್ಥೆಯ ಬದಲಾವಣೆಗಳು, ವಿದ್ಯಾರ್ಹತೆಯ ಮಟ್ಟದಲ್ಲಿ ಸುಧಾರಣೆಗಳು ಆಗಿರುವುದು ಕಂಡುಬರುತ್ತದೆ. ಕಲಾವಿದರ ಜಾತಿ ಹಾಗೂ ಜಾತಿಯ ಸೂಕ್ಷ್ಮ ವಿಚಾರಗಳನ್ನು ಚರ್ಚಿಸಲಾಗಿದೆ. ಕಲಾವಿದನಾಗಲು ಪ್ರೇರಣೆ, ಮೇಳಕ್ಕೆ ಸೇರುವಾಗ ಎದುರಾಗುವ ಅಡ್ಡಿ ಆತಂಕಗಳು, ಕಲಾವಿದರ ಮೇಳ ಪಲ್ಲಟಗಳು, ಕಲಾವಿದರಿಗೆ ಸಿಗುವ ಸಾಮಾಜಿಕ ಮನ್ನಣೆ, ರಜಾ ವ್ಯವಸ್ಥೆಗಳು, ಕೌಟುಂಬಿಕ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಳ್ಳುವಿಕೆ, ಕಲಾವಿದರಿಗೆ ವಿಶ್ರಾಂತಿಯ ಅವಕಾಶ, ಆರೋಗ್ಯದ ವಿಚಾರಗಳನ್ನು ಗಮನಿಸಿದಾಗ ಇಂದಿನ ಪ್ರಸ್ತುತ ಕಾಲದಲ್ಲಿ ಯಕ್ಷಗಾನ ಕಲಾವಿದರ ಸಾಮಾಜಿಕ ಬದುಕಿನ ಚಿತ್ರಣವನ್ನು ಅರ್ಥೈಸಿಕೊಳ್ಳಲು ಸಹಕಾರಿಯಾಗುತ್ತದೆ. ಯಕ್ಷಗಾನ ಕಲಾವಿದರ ಸಾಮಾಜಿಕ ಸ್ಥಿತಿಗತಿಯ ಬಗೆ ಅವಲೋಕನ ನಡೆಸಿ ಈ ಬಗ್ಗೆ ವ್ಯಾಪಕ ಮಾಹಿತಿಗಳನ್ನು ಸಂಗ್ರಹಿಸಿ ವಿಶ್ಲೇಷಣೆ ಮಾಡಿದಾಗ ಯಕ್ಷಗಾನ ಮತ್ತು ಯಕ್ಷಗಾನ ಕಲಾವಿದರ ಸಾಮಾಜಿಕತೆಯ (Sociology of Yakshagana) ಬಗೆಗೆ ಸ್ಪಷ್ಟ ಚಿತ್ರಣವು ಈ ಅಧ್ಯಾಯದಲ್ಲಿ ದೊರೆತಂತಾಗಿದೆ.

ಆರ್ಥಿಕ ಸ್ಥಿತಿಗತಿ:

ಶ್ರೀಮಂತ ಕಲೆಯಾಗಿ ಗುರುತಿಸಲ್ಪಟ್ಟಿರುವ ಯಕ್ಷಗಾನದಲ್ಲಿ ಹಿಂದಿನ ಕಾಲದ ಕಷ್ಟದ ದಿನಗಳಿಗೆ ಹೋಲಿಸಿದರೆ ಯಕ್ಷಗಾನ ಮತ್ತು ಕಲಾವಿದರ ಆರ್ಥಿಕ ಸ್ಥಿತಿಗತಿಯಲ್ಲಿ ಬದಲಾವಣೆಗಳಾಗಿವೆ. ಕಲೆಯ ಮೇಲಿನ ಪ್ರೀತಿ, ದುಡಿಯುವ ಹುಮ್ಮಸ್ಸು, ಆಸಕ್ತಿ ಇದ್ದ ಕಲಾವಿದರಿಗೆ ಸಂಪಾದನೆಗೆ ಬಹಳಷ್ಟು ಅವಕಾಶಗಳು ಸಿಗುತ್ತಿವೆ. ಆದರೂ ಇಂದಿನ ವೃತ್ತಿ ಕಲಾವಿದರ ವೃತ್ತಿ ಜೀವನದ ಪಯಣದಲ್ಲಿ ಹಲವಾರು ಸಂಗತಿಗಳು, ಸಮಸ್ಯೆಗಳು ಹೊರಪ್ರಪಂಚಕ್ಕೆ ಕಾಣುತ್ತಿಲ್ಲ. ಯಕ್ಷಗಾನದ ವೃತ್ತಿಕಲಾವಿದರ ಆರ್ಥಿಕ ಸ್ಥಿತಿಗತಿಯ ಬಗ್ಗೆ ಈ ಅಧ್ಯಾಯದಲ್ಲಿ ಚರ್ಚಿಸಲಾಗಿದ್ದು, ಪ್ರಮುಖವಾಗಿ ಕಲಾವಿದರ ವೇತನ, ಮಾನದಂಡಗಳು, ಉಳಿದ ಆರು ತಿಂಗಳಲ್ಲಿ ಮಾಡುವ ವೃತ್ತಿ, ಇತರ ಸಂಪಾದನೆಯ ಮೂಲ, ಕಲಾವಿದರಲ್ಲಿ ಉಳಿತಾಯ, ವಿಮಾ ಸೌಲಭ್ಯ, ಸರ್ಕಾರ ಮತ್ತು ಸರ್ಕಾರೇತರ ಸಂಘಟನೆಗಳಿಂದ ಸಿಗುವ ಆರ್ಥಿಕ ಪ್ರೋತ್ಸಾಹಗಳು ಮೊದಲಾದವುಗಳ ಬಗ್ಗೆ ವಿವರಿಸಲಾಗಿದೆ.

- **ಯಕ್ಷಗಾನ ವೃತ್ತಿ ಕಲಾವಿದರ ವೇತನ**

ಕಲಾವಿದರ ಅಭಿವೃದ್ಧಿಯಲ್ಲಿ ಅವರ ವೇತನ, ಸಂಪಾದನೆಯ ಪಾತ್ರವೂ ಪ್ರಮುಖವಾಗಿರುತ್ತದೆ. ಉಳಿದ ವೃತ್ತಿಗಳಿಗೆ ಹೋಲಿಸಿದರೆ ಯಕ್ಷಗಾನ ಕಲಾವಿದರ ವೃತ್ತಿ ಹಾಗೂ ಸಂಪಾದನೆಯಲ್ಲಿ ವ್ಯತ್ಯಾಸಗಳಿವೆ. ಯಕ್ಷಗಾನ ವೃತ್ತಿ ಕಲಾವಿದರಿಗೆ ಮೇಳದ ಪ್ರದರ್ಶನಗಳು ಇದ್ದ ದಿನ ಮಾತ್ರ ಸಂಭಾವನೆ ಇರುತ್ತದೆ. ಯಕ್ಷಗಾನದ ನಡೆದು ಬಂದ ಹಾದಿಯ ಬಗ್ಗೆ ಪರಿಶೀಲಿಸಿದಾಗ ಹಿಂದಿನ ಕಲಾವಿದರು ವೇತನಕ್ಕಿಂತ ಒಪ್ಪೊತ್ತಿನ ಊಟಕ್ಕೂ ಸಂಕಷ್ಟ ಎದುರಿಸಿದ್ದರು. ಆದರೆ ಪ್ರಸ್ತುತ ಪರಿಸ್ಥಿತಿ ಬದಲಾವಣೆಯಾಗಿದೆ. ಪ್ರಸ್ತುತ ಕಾಲಘಟ್ಟದ ಕಲಾವಿದರ ಆರ್ಥಿಕ ಸ್ಥಿತಿಗತಿಯ ಬಗೆಗೆ ತಿಳಿದುಕೊಳ್ಳಬೇಕಾದರೆ ಯಕ್ಷಗಾನದಲ್ಲಿ ದುಡ್ಡಿಯುತ್ತಿರುವ ವೃತ್ತಿಕಲಾವಿದರ ವೇತನ, ಸಂಪಾದನೆಯ ಬಗೆಗೂ ಅವಲೋಕನ ಮಾಡಬೇಕಾಗುತ್ತದೆ. ಈ ನಿಟ್ಟಿನಲ್ಲಿ ಯಕ್ಷಗಾನ ಕಲಾವಿದರು ಆರು ತಿಂಗಳ ಕಾಲ ನಡೆಯುವ ಯಕ್ಷಗಾನದ ಅವಧಿಯಲ್ಲಿ ಅವರ ದಿನದ ವೇತನದ ಬಗ್ಗೆ ತಿಳಿದಾಗ ಪ್ರತಿಶತ 2.22ರಷ್ಟು ಕಲಾವಿದರು ಯಕ್ಷಗಾನದಿಂದ ದಿನಕ್ಕೆ 200 ರಿಂದ 500 ವರೆಗೆ ವೇತನ ಸಿಗುತ್ತದೆ ಎಂದಿದ್ದು, ಪ್ರತಿಶತ 48.33ರಷ್ಟು ಕಲಾವಿದರು 600 ರಿಂದ 900 ವರೆಗೆ ಸಿಗುತ್ತದೆ ಎಂದರೆ, ಪ್ರತಿಶತ 41.67ರಷ್ಟು ಕಲಾವಿದರು 1000 ದಿಂದ 1300 ರವರೆಗೆ ವೇತನವು ಸಿಗುತ್ತದೆ ಎಂದು ಮಾಹಿತಿ ನೀಡಿದ್ದಾರೆ. ಹಾಗೆಯೇ 7.78ರಷ್ಟು ಕಲಾವಿದರು 1300ಕ್ಕಿಂತಲೂ ಹೆಚ್ಚು ವೇತನವನ್ನು ಪಡೆಯುವವರು ಕಂಡು ಬಂದಿದ್ದಾರೆ.

ಯಕ್ಷಗಾನ ಕ್ಷೇತ್ರವು ಇಂದು ಎಷ್ಟೋ ಜನರಿಗೆ ಉದ್ಯೋಗವನ್ನು ನೀಡಿದೆ. ಯಕ್ಷಗಾನದಿಂದಲೇ ಕಲಾವಿದರು ತಮ್ಮ ಕುಟುಂಬದ ನಿರ್ವಹಣೆಯನ್ನು ಮಾಡುತ್ತಿದ್ದಾರೆ. ಹಲವು ದಶಕಗಳ ಹಿಂದಿನ ಪರಿಸ್ಥಿತಿಗೆ ಹೋಲಿಸಿದರೆ ಯಕ್ಷಗಾನ ಕಲಾವಿದರ ವೇತನದ ಪ್ರಮಾಣ ಏರಿಕೆ ಕಂಡಿರುವುದನ್ನು ಗುರುತಿಸಬಹುದು. ಅವಕಾಶಗಳು ಕೂಡಾ ಹೆಚ್ಚುತ್ತಿವೆ. ಕೆಲವು ಯುವ ಕಲಾವಿದರು ಮೇಳದ ಪ್ರದರ್ಶನದೊಂದಿಗೆ ಇತರ ಹೊರಗಿನ ಪ್ರದರ್ಶನಗಳನ್ನೂ ಒಪ್ಪಿಕೊಂಡು ಹೆಚ್ಚಿನ ಗಳಿಕೆ ಮಾಡುತ್ತಾರೆ. ಆದರೆ ಕೆಲವು ಕಲಾವಿದರು ಮೇಳದ ಸಂಪಾದನೆಯನ್ನೇ ನಂಬಿರುತ್ತಾರೆ. ಪ್ರತಿಶತ 48.33ರಷ್ಟು ಕಲಾವಿದರು 600 ರಿಂದ 900ರಷ್ಟು ವೇತನವನ್ನು ಹಾಗೂ ಪ್ರತಿಶತ 41.67ರಷ್ಟು ಜನರು 1000 ದಿಂದ 1300ರಷ್ಟು ವೇತನ ಪಡೆಯುವವರು ಹೆಚ್ಚಿನ ಸಂಖ್ಯೆಯಲ್ಲಿ ಕಂಡು ಬಂದಿದ್ದಾರೆ. ಆದರೆ ಈ ವೇತನ ಆರು ತಿಂಗಳಿಗೆ ಮಾತ್ರ ಸೀಮಿತವಾಗಿರುತ್ತದೆ. ಅಲ್ಲದೆ ಕಟೀಲು, ಧರ್ಮಸ್ಥಳದಂತಹ ಮೇಳಗಳಿಗೆ ಆರು ತಿಂಗಳು ಪೂರ್ತಿ ಯಕ್ಷಗಾನವಿರುತ್ತದೆ. ಆದರೆ ಇತರ ಮೇಳಗಳಿಗೆ ಆರು ತಿಂಗಳಲ್ಲಿ ಪ್ರತಿ ರಾತ್ರಿ ಯಕ್ಷಗಾನ ಪ್ರದರ್ಶನಗಳು ಸಿಗುತ್ತವೆ ಎಂದು ಹೇಳಲು ಸಾಧ್ಯವಿಲ್ಲ. ಈ ಸಂದರ್ಭದಲ್ಲಿ ಯಕ್ಷಗಾನ

ಕಲಾವಿದರು ವೇತನವಿಲ್ಲದೆ ಯಾತನೆ ಅನುಭವಿಸಬೇಕಾದ ಪರಿಸ್ಥಿತಿ ಎದುರಾಗುತ್ತದೆ. ಅಲ್ಲದೆ ಈ ಆರು ತಿಂಗಳಲ್ಲಿ ದುಡಿದ ವೇತನದಲ್ಲೆ ಅವರು ಇಡೀ ವರ್ಷದ ಜೀವನವನ್ನು ನಡೆಸಬೇಕಾಗುತ್ತದೆ. ಇಲ್ಲಿ ಹಿಂದಿನ ಕಲಾವಿದರಿಗಿಂತ ಯಕ್ಷಗಾನದ ಕಲಾವಿದರ ಸರಾಸರಿ ವೇತನದಲ್ಲಿ ಹೆಚ್ಚಳ ಕಂಡು ಬರುತ್ತಿವೆಯಾದರೂ ಇಂದಿನ ಆಧುನಿಕತೆಯಲ್ಲಿ ಜನರ ಖರ್ಚುವೆಚ್ಚಗಳೂ ದುಪ್ಪಟ್ಟುಗೊಂಡಿವೆ. ಇತರ ಉದ್ಯೋಗ, ಸಂಪದಾನೆಗೆ ಹೋಲಿಸಿದರೆ ಯಕ್ಷಗಾನ ವೃತ್ತಿ ಕಲಾವಿದರ ಸಂಪಾದನೆ ಬಹಳ ಕಡಿಮೆಯೇ ಆಗಿದೆ ಎಂಬುದನ್ನು ನಾವು ಮನಗಾಣಬಹುದಾಗಿದೆ.

- **ವೇತನ ದೊರೆಯುವ ಅವಧಿ**

ವೇತನ ಪಡೆಯುವಲ್ಲಿ ಕೆಲವು ಮೇಳಗಳು ತಮ್ಮ ಕಲಾವಿದರಿಗೆ ದಿನಾ ವೇತನವನ್ನು ನೀಡಿದರೆ, ಕೆಲವು ಮೇಳಗಳು ವಾರಕ್ಕೊಮ್ಮೆ, ತಿಂಗಳಿಗೊಮ್ಮೆ, ಆರು ತಿಂಗಳಿಗೊಮ್ಮೆ ನೀಡುತ್ತವೆ. ಉಳಿದ ಸಂದರ್ಭದಲ್ಲಿ ಅವರ ಖರ್ಚಿಗೆ ಹಣ ನೀಡಿ ಬಟವಾಡೆ ಸಂದರ್ಭದಲ್ಲಿ ಈ ಹಣವನ್ನು ಸರಿದೂಗಿಸುತ್ತಾರೆ. ಮಾಹಿತಿದಾರ ಕಲಾವಿದರಿಗೆ ಯಕ್ಷಗಾನ ಮೇಳಗಳಿಂದ ವೇತನ ದೊರೆಯುವ ಅವಧಿಯ ಬಗ್ಗೆ ಕೇಳಿದಾಗ ಪ್ರತಿಶತ 46.11ರಷ್ಟು ಕಲಾವಿದರು ಆ ದಿನದ ಯಕ್ಷಗಾನ ಮುಗಿಸಿ ಅದೇ ದಿನ ವೇತನವು ಕೂಡಾ ದೊರೆಯುತ್ತದೆ ಎಂದಿದ್ದಾರೆ. ಪ್ರತಿಶತ 7.22ರಷ್ಟು ಕಲಾವಿದರು ವಾರಕ್ಕೊಮ್ಮೆ ವೇತನ ದೊರೆಯುವ ಬಗ್ಗೆ ಮಾಹಿತಿ ನೀಡಿದ್ದು, ಪ್ರತಿಶತ 5.56ರಷ್ಟು ಕಲಾವಿದರು ತಿಂಗಳಿಗೊಮ್ಮೆ ವೇತನ ಸಿಗುತ್ತದೆ ಎಂದು ಹೇಳಿದರೆ, ಪ್ರತಿಶತ 39.44ರಷ್ಟು ಕಲಾವಿದರು ಆರು ತಿಂಗಳಿಗೊಮ್ಮೆ ವೇತನ ಸಿಗುತ್ತದೆ ಎಂದು ಹೇಳಿದ್ದಾರೆ. 0.56ರಷ್ಟು ಕಲಾವಿದರು ನಮಗೆ ಬೇಕಾದ ದಿನದಂದು ವೇತನ ಸಿಗುತ್ತದೆ ಎಂದು ಹೇಳಿದ್ದರೆ, ಪ್ರತಿಶತ 0.56ರಷ್ಟು ಕಲಾವಿದರು ಎರಡು ದಿನಕ್ಕೊಮ್ಮೆ, ಪ್ರತಿಶತ 0.56ರಷ್ಟು ಕಲಾವಿದರು ಮೂರು ದಿನಕ್ಕೊಮ್ಮೆ ವೇತನವನು ಪಡೆದುಕೊಳ್ಳುತ್ತೇವೆ ಎಂದು ಮಾಹಿತಿ ನೀಡಿದ್ದಾರೆ. ಈಗಿನ ಕಾಲದಲ್ಲಿ ಹೆಚ್ಚಿನ ಮೇಳಗಳು ತಮ್ಮ ಕಲಾವಿದರಿಗೆ ಆಟ ಇರುವ ದಿನದಂದೇ ವೇತನ ನೀಡುವುದು ಹೆಚ್ಚಾಗಿ ಕಂಡುಬರುತ್ತಿವೆ. ಇದರಿಂದ ಯಕ್ಷಗಾನ ಕಲಾವಿದರಿಗೂ ಅನುಕೂಲಗಳಾಗಿರುವುದು ಕಂಡು ಬಂದಿದೆ.

- **ವೇತನ ನಿರ್ಧಾರವಾಗುವ ಮಾನದಂಡ**

ಹೆಚ್ಚಿನ ಮೇಳಗಳಲ್ಲಿ ಕಲಾವಿದರ ಅನುಭವ ಮತ್ತು ಸಾಮರ್ಥ್ಯಕ್ಕೆ ಅನುಸಾರವಾಗಿ ವೇತನವನ್ನು ನಿರ್ಧರಿಸಲಾಗುತ್ತದೆ ಹಾಗೆಯೇ ಪ್ರತಿಯೊಂದು ಮೇಳಗಳಲ್ಲಿ ಆರಂಭದಲ್ಲಿ ಸೇರುವ ಕಲಾವಿದರಿಗೆ ಒಂದು ನಿಗಧಿತ ವೇತನ ನೀಡಲಾಗುತ್ತದೆ. ಬಳಿಕ ಅವರ ಅನುಭವ, ಸಾಮರ್ಥ್ಯ ಹೆಚ್ಚಾದಂತೆ ವೇತನದಲ್ಲಿ ಕೂಡ ಹೆಚ್ಚಳವಾಗುವುದನ್ನು ನಾವು ಕಾಣಬಹುದು. ಕಲಾವಿದರಿಗೆ ವೇತನವನ್ನು ನಿರ್ಧರಿಸುವುದಕ್ಕೆ ಸಂಬಂಧಪಟ್ಟಂತೆ ಮಾಹಿತಿ ತಿಳಿದಾಗ ಪ್ರತಿಶತ 3.33ರಷ್ಟು ಮಂದಿ ವಯಸ್ಸಿನ ಆಧಾರಲ್ಲಿಯೂ ವೇತನವನ್ನು ನಿರ್ಧರಿಸಲಾಗುತ್ತದೆ ಎಂದಿದ್ದಾರೆ. ಪ್ರತಿಶತ 78.89ರಷ್ಟು ಜನರು ಅನುಭವ, ಸಾಮರ್ಥ್ಯಕ್ಕೆ ಅನುಸಾರವಾಗಿ ಮೇಳಗಳಲ್ಲಿ ಕಲಾವಿದರಿಗೆ ವೇತನ ನಿರ್ಧರಿಸಲಾಗುತ್ತದೆ ಎಂದು ಹೇಳಿದ್ದಾರೆ. ಹಾಗೆಯೇ ಪ್ರತಿಶತ 7.22ರಷ್ಟು ಕಲಾವಿದರು ಕಲಾವಿದರ ವೇಷಗಳನ್ನು ಆಧರಿಸಿ ವೇತನವನ್ನು ನಿರ್ಧಾರ ಮಾಡಲಾಗುತ್ತದೆ, ಪ್ರತಿಶತದ 8.33ರಷ್ಟು ಜನರು ಎಲ್ಲಾ ವೇಷಗಳನ್ನು ನಿರ್ವಹಿಸುವ ಅಂದರೆ ಆಲ್ ರೌಂಡರ್ ಪಾತ್ರದಾರಿಗೆ ವೇತನದಲ್ಲಿ ಹೆಚ್ಚಿನ ಅವಕಾಶವಿರುತ್ತದೆ ಎಂದು ಹೇಳಿದ್ದಾರೆ. ಪ್ರತಿಶತ 1.11ರಷ್ಟು ಕಲಾವಿದರು ಪಾತ್ರಕ್ಕೆ ಅನುಗುಣವಾಗಿ ವೇತನ ನೀಡಲಾಗುತ್ತದೆ ಎಂದು ಹೇಳಿದರೆ, 0.56ರಷ್ಟು ಕಲಾವಿದರು ವಯಸ್ಸು ಮತ್ತು ಅನುಭವದಿಂದ ವೇತನ ನೀಡಲಾಗುತ್ತದೆ ಎಂದು ಹೇಳಿದ್ದಾರೆ. ಪ್ರತಿಶತ 0.56ರಷ್ಟು ಕಲಾವಿದರು ಅನುಭವ ಮತ್ತು ವೇಷ ಇದಕ್ಕೆ ಅನುಸಾರವಾಗಿ ವೇತನವನ್ನು ನಿರ್ಧರಿಸಲಾಗುತ್ತದೆ ಎಂದು ಹೇಳಿದ್ದಾರೆ. ಪ್ರಮುಖವಾಗಿ ವೇತನ ನಿರ್ಧಾರವಾಗುವ

ಮಾನದಂಡದ ಬಗ್ಗೆ ಅಧ್ಯಯನದಲ್ಲಿ ಹೆಚ್ಚಿನ ಕಲಾವಿದರು ಅಂದರೆ ಪ್ರತಿಶತ 78.89ರಷ್ಟು ಕಲಾವಿದರು ಅನುಭವ, ಸಾಮರ್ಥ್ಯದ ಆದಾರದಲ್ಲಿ ವೇತನವನ್ನು ನಿರ್ಧರಿಸಲಾಗುತ್ತದೆ ಎಂದು ಹೇಳಿದ್ದಾರೆ.

ವೇತನ ನಿರ್ಧರಿಸುವಲ್ಲಿ ಲಾಭಿ ನಡೆಯುತ್ತದೆ ಎಂಬ ಆರೋಪಗಳು ಯಕ್ಷಗಾನ ವಲಯದಲ್ಲಿ ಕೇಳಿ ಬರುತ್ತಿದ್ದು, ಈ ಬಗ್ಗೆ ಮಾಹಿತಿದಾರರಲ್ಲಿ ಕೇಳಿದಾಗ ಪ್ರತಿಶತ 90.00ರಷ್ಟು ಕಲಾವಿದರು ಯಾವುದೇ ಲಾಭಿ ನಡೆಯುವುದಿಲ್ಲ ಎಂದು ಹೇಳಿದ್ದು, ಪ್ರತಿಶತ 10.00ರಷ್ಟು ಕಲಾವಿದರು ಹೌದು ಲಾಭಿ ನಡೆಯುತ್ತದೆ ಎಂದು ಹೇಳಿದ್ದು, ಪರಿಚಿತರಿಗೆ, ಪ್ರಸಿದ್ದಿ ಪಡೆದ ಕಲಾವಿದರಿಗೆ ಹೆಚ್ಚು ವೇತನ ನೀಡುತ್ತಾರೆ ಎಂದಿದ್ದಾರೆ. ಕೆಲವೊಮ್ಮೆ ಕೆಲವು ಮೇಳಗಳಲ್ಲಿ ಇಂತಹ ಸಣ್ಣ ಪ್ರಮಾಣದ ಲಾಭಿಯ ವಿಚಾರಗಳು ನಡೆಯುತ್ತಿವೆ ಎಂಬುವುದನ್ನು ಕೆಲವು ಕಲಾವಿದರು ಒಪ್ಪಿಕೊಂಡಿರುವುದನ್ನು ಅಧ್ಯಯನದಲ್ಲಿ ಗಮನಿಸಲಾಗಿದೆ.

- **ಕಲಾವಿದರಿಗೆ ವೇತನದೊಂದಿಗೆ ಪ್ರೋತ್ಸಾಹ ಧನ ಸಿಗುವ ಬಗ್ಗೆ**

ಯಕ್ಷಗಾನ ಕಲಾವಿದರಿಗೆ ಕೆಲವು ಯಕ್ಷಗಾನ ಪ್ರದರ್ಶನಗಳಲ್ಲಿ ವೇತನದೊಂದಿಗೆ ಪ್ರೋತ್ಸಾಹಧನವೂ(ಕವರ್) ಸಿಗುತ್ತವೆ. ಇದು ಯಕ್ಷಗಾನ ಆಡಿಸುವವರು ಅಥವಾ ಅಭಿಮಾನಿಗಳು ವೀಳ್ಯದ ಹಣ ಅಲ್ಲದೆ ಹೆಚ್ಚುವರಿಯಾಗಿ ಕೊಡುವ ಧನವಾಗಿದೆ. ಆದರೆ ಇದು ಹೆಚ್ಚಾಗಿ ಹರಕೆ ಮೇಳಗಳಿಗೆ ಮಾತ್ರ ಲಭ್ಯವಾಗುತ್ತದೆ. ಇತರ ಮೇಳಗಳಿಗೆ ಸಿಗುತ್ತಿವೆಯಾದರೂ ಬಹಳ ಕಡಿಮೆ ಎನ್ನಬಹುದು. ಪ್ರೋತ್ಸಾಹ ಧನ ಪಡೆಯುವಲ್ಲಿಯೂ ವ್ಯತ್ಯಾಸಗಳಿದ್ದು, ರಂಗದಲ್ಲಿ ಹೆಚ್ಚು ದುಡಿಯುವ, ಪ್ರಸಿದ್ಧಿ ಪಡೆದಿರುವ ಕಲಾವಿದರು ಹೆಚ್ಚಿನ ಪ್ರೋತ್ಸಾಹಧನ ಪಡೆಯುತ್ತಾರೆ. ಕೆಲವು ಮೇಳಗಳಲ್ಲಿ ಪ್ರೋತ್ಸಾಹ ಧನವನ್ನು ಒಟ್ಟಿಗೆ ಪಡೆದು ಕಲಾವಿದರಿಗೆ ಸಮಾನವಾಗಿ ಹಂಚುವ ಕ್ರಮವೂ ಇವೆ. ಕಲಾವಿದರಿಗೆ ವೇತನದ ಜೊತೆಗೆ ಕೆಲವೊಮ್ಮೆ ಸಿಗುವ ಪ್ರೋತ್ಸಾಹ ಧನವೂ ತಮ್ಮ ಅಗತ್ಯತೆಗಳ ಖರ್ಚಿಗೆ ಸಹಕಾರಿಯಾಗುತ್ತದೆ.

- **ಯಕ್ಷಗಾನ ವೃತ್ತಿಯಿಂದ ಕಲಾವಿದರಿಗಿರುವ ಆರ್ಥಿಕ ತೃಪ್ತಿ**

ಯಕ್ಷಗಾನ ಕಲಾಕ್ಷೇತ್ರವು ಬಹಳಷ್ಟು ಜನರಿಗೆ ಉದ್ಯೋಗಾವಕಾಶಗಳನ್ನು ಸೃಷ್ಟಿ ಮಾಡುತ್ತಿರುವ ಒಂದು ಬೃಹತ್ ರಂಗಪ್ರಕಾರವಾಗಿ ಗುರುತಿಸಿದೆ. ಒಂದು ಮೇಳದಲ್ಲಿ ಸುಮಾರು 40 ರಿಂದ 60 ರ ವರೆಗೂ ದುಡಿಯುತ್ತಾರೆ. ದುಡಿಮೆ ಮಾಡುವ ಕ್ಷೇತ್ರದಲ್ಲಿ ಇರುವ ಸಾಮಾಜಿಕ ವಾತಾವರಣದೊಂದಿಗೆ ಅಲ್ಲಿ ಕಲಾವಿದರಿಗೆ ದೊರೆಯುವ ಸಂಭಾವನೆ ಅಥವಾ ಆರ್ಥಿಕತೆ ಕೂಡಾ ಯಕ್ಷಗಾನ ಬೆಳವಣಿಗೆಯ ಮೇಲೆ ಪರಿಣಾಮ ಬೀರುತ್ತದೆ. ಯಕ್ಷಗಾನ ಕಲಾವಿದರಿಗೆ ಯಕ್ಷಗಾನ ವೃತ್ತಿಯಿಂದ ಸಿಗುವ ಆರ್ಥಿಕ ತೃಪ್ತಿಯ ಬಗ್ಗೆ ಮಾಹಿತಿದಾರರಲ್ಲಿ ತಿಳಿದಾಗ ಪ್ರತಿಶತ 49.44 ರಷ್ಟು ಕಲಾವಿದರು ಈ ವೃತ್ತಿಯಿಂದ ಆರ್ಥಿಕವಾಗಿ ತೃಪ್ತಿ ಇದೆ ಎಂದಿದ್ದಾರೆ. ಪ್ರತಿಶತ 2.22 ರಷ್ಟು ಕಲಾವಿದರು ತೃಪ್ತಿ ಇಲ್ಲ ಎಂದಿದ್ದಾರೆ. ಹಾಗೆಯೇ ಪ್ರತಿಶತ 48.33 ರಷ್ಟು ಕಲಾವಿದರು ಪೂರ್ಣ ಆರ್ಥಿಕ ತೃಪ್ತಿ ಇಲ್ಲ ಎಂದಿದ್ದಾರೆ. ಇಲ್ಲಿ ಪ್ರಮುಖವಾಗಿ ಗಮನಿಸುವುದಾದರೆ ಇಲ್ಲಿ ಬಹಳಷ್ಟು ಮಂದಿ ಆರ್ಥಿಕ ತೃಪ್ತಿ ಇದೆ ಎನ್ನುವ ಬಗ್ಗೆ ಒಪ್ಪಿಕೊಂಡಿದ್ದರೂ ಬಹಳಷ್ಟು ಕಲಾವಿದರು ಪೂರ್ಣ ತೃಪ್ತಿ ಇಲ್ಲ ಎಂದಿದ್ದಾರೆ. ಯಕ್ಷಗಾನವನ್ನು ಕೇವಲ ಆರ್ಥಿಕ ಸಂಪಾದನೆಯ ಉದ್ದೇಶವನ್ನಿಟ್ಟುಕೊಂಡು ಕಲಿಯುವುದು ಕಡಿಮೆ. ಆದರೆ ಬಳಿಕ ಇದನ್ನೇ ಬದುಕನ್ನಾಗಿಸಿದ ಬಳಿಕ ಆರ್ಥಿಕ ವಿಷಯವೂ ಕಲಾವಿದರ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಕೆಲವು ಕಲಾವಿದರು ಆರ್ಥಿಕತೆಯ ವಿಷಯದಲ್ಲಿ ಪೂರ್ಣ ತೃಪ್ತಿಯನ್ನು ಹೊಂದಿರಲ್ಲದಿರಲು ಯಕ್ಷಗಾನದಲ್ಲಿ ಕಡಿಮೆ ಸಂಭಾವನೆ, ಆರು ತಿಂಗಳು ಮಾತ್ರ ಸಂಭಾವನೆ, ಶ್ರಮಕ್ಕೆ ತಕ್ಕುದಾದ ಸಂಭಾವನೆ ಇಲ್ಲ, ಸಮಯಕ್ಕೆ ಸರಿಯಾಗಿ ಸಂಭಾವಣೆ ಸಿಗುವುದಿಲ್ಲ ಎಂಬ ಕಾರಣಗಳನ್ನು ಕಲಾವಿದರು ನೀಡುತ್ತಾರೆ. ಆರು ತಿಂಗಳ ಯಕ್ಷಗಾನದ ಬಳಿಕ ಕಲಾವಿದರು ಕೆಲವು ಮನೆಯಲ್ಲಿ ಕೃಷಿಯ ಕೆಲಸ,

ಇತರ ಕೆಲಸಗಳಲ್ಲಿ ನಿರತರಾದರೆ ಇನ್ನು ಕೆಲವರು ಮಳೆಗಾಲದ ಪ್ರದರ್ಶನ, ತರಬೇತಿ ಮೊದಲಾದವುಗಳಲ್ಲಿ ತೊಡಗಿಸಿಕೊಳ್ಳುತ್ತಾರೆ. ಆದರೆ ಕೆಲವು ಕಲಾವಿದರಿಗೆ ಅತ್ತ ಕೆಲಸವೂ ಇಲ್ಲ, ಹಾಗೂ ಬೇರೆ ಕೆಲಸಗಳಿಗೆ ಹೊಂದಾಣಿಕೆಯಾಗುವುದೂ ಕಷ್ಟವಾಗುತ್ತದೆ. ಇದರಿಂದ ಹೆಚ್ಚಿನ ಕಲಾವಿದರು ಕಲೆಯ ಮೇಲೆಯ ಪ್ರೀತಿ ಹೊಂದಿದ್ದಾರೆಯೇ ಹೊರತು ಅವರಲ್ಲಿ ಈ ಕಲೆಯಿಂದ ಸಿಗುವ ಆರ್ಥಿಕತೆಯ ತೃಪ್ತಿಯ ಭಾವ ಕಾಣುತ್ತಿಲ್ಲ.

ಯಾವುದೇ ಮೇಳದಲ್ಲಿಯೂ ಕಲಾವಿದರಿಗೆ ಪ್ರಯಾಣ ವೆಚ್ಚವೆಂದು ನೀಡುತ್ತಿಲ್ಲ. ಕೆಲವೊಂದು ಮೇಳಗಳಲ್ಲಿ ಮೇಳದ ಹಿರಿಯ ಕಲಾವಿದರಿಗೆ ವ್ಯವಸ್ಥಾಪಕರು ತಮ್ಮ ಕೈಯಿಂದ ಅಥವಾ ತಮ್ಮ ಸಂಪಾದನೆಯ ಹಣದಿಂದಲೇ ಪ್ರಯಾಣಭತ್ಯೆಯನ್ನು ನೀಡಬಹುದಷ್ಟೇ ವಿನಃ ಹೆಚ್ಚಾಗಿ ಯಾವುದೇ ಮೇಳಗಳಲ್ಲಿ ಪ್ರಯಾಣ ಭತ್ಯೆಯನ್ನು ನೀಡುತ್ತಿಲ್ಲ. ಹೆಚ್ಚಾಗಿ ದಿನಾ ಮನೆಗೆ ಹೋಗಿ ಬರುವ ಕಲಾವಿದರು ತಮ್ಮ ಸ್ವಂತ ವಾಹನಗಳಲ್ಲಿ, ಇತರ ವಾಹನಗಳಲ್ಲಿ ಸ್ವಂತ ಖರ್ಚು ಮೂಲಕವೇ ಹೋಗಿ ಬರುತ್ತಾರೆ ಎಂಬುವುದನ್ನು ಅಧ್ಯಯನದ ಮೂಲಕ ಕಂಡುಕೊಳ್ಳಲಾಗಿದೆ.

- **ಸ್ವಂತವಾಹನಗಳನ್ನು ಒಳಗೊಂಡಿರುವ ಕಲಾವಿದರು**

ಹಿಂದಿನ ಕಾಲದಲ್ಲಿ ಹೆಚ್ಚಿನ ಕಲಾವಿದರು ಕ್ಯಾಂಪ್‌ನಲ್ಲೇ ಉಳಿದುಕೊಂಡು ಅಪರೂಪಕ್ಕೊಮ್ಮೆ ಮನೆಗೆ ಹೋಗುತ್ತಿದ್ದರು. ಅಂದಿನ ಕಾಲದ ಸಾರಿಗೆ ಸಂಚಾರ ವ್ಯವಸ್ಥೆಯೂ ಹಾಗೆ ಇತ್ತು. ಇದರಿಂದ ಕಲಾವಿದರೂ ಅನೇಕ ತೊಂದರೆಗಳನ್ನು ಎದುರಿಸುತ್ತಿದ್ದರು. ಪ್ರಸ್ತುತ ಕಾಲದಲಿ ಕೆಲವು ಯಕ್ಷಗಾನ ಕಲಾವಿದರು ತಮ್ಮ ಸ್ವಂತ ವಾಹನಗಳನ್ನು ಹೊಂದಿರುತ್ತಾರೆ. ಇದರ ಮೂಲಕವೇ ಯಕ್ಷಗಾನ ಸ್ಥಳಕ್ಕೆ ತೆರಳುತ್ತಾರೆ. ಮಾಹಿತಿದಾರರ ಪೈಕಿ ಪ್ರತಿಶತ 41.67 ರಷ್ಟು ಕಲಾವಿದರು ಸ್ವಂತ ವಾಹನದಲ್ಲಿ ಯಕ್ಷಗಾನ ಸ್ಥಳಕ್ಕೆ ಹೋಗಿ ಬರುವ ಬಗ್ಗೆ ಮಾಹಿತಿ ನೀಡಿದ್ದಾರೆ.

ಸ್ವಂತ ವಾಹನ ಹೊಂದಿರುವವರಲ್ಲಿ ಪ್ರತಿಶತ ೯೨.೦೦ ರಷ್ಟು ಕಲಾವಿದರು ದ್ವಿಚಕ್ರವಾಹನಗಳನ್ನು ಹೊಂದಿದ್ದರೆ, ಪ್ರತಿಶತ ೮.೦೦ ರಷ್ಟು ಕಲಾವಿದರು ಕಾರಿನ ಮೂಲಕ ತೆರಳುತ್ತಾರೆ. ಕಲಾವಿದರು ಒಂದು ಊರಿನಿಂದ ಇನ್ನೊಂದೂರಿಗೆ ಯಕ್ಷಗಾನಕ್ಕೆ ಹೋಗುವಾಗ ಸ್ವಂತ ವಾಹನಗಳನ್ನು ಬಳಸಿಕೊಂಡು ಹೋಗುವವರ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಿದೆ. ಕ್ಯಾಂಪಿನಲ್ಲಿ ಉಳಿದುಕೊಳ್ಳುತ್ತಿರುವ ಕಲಾವಿದರ ಸಂಖ್ಯೆ ಕಡಿಮೆಯಾಗುತ್ತದೆ. ಸ್ವಂತ ವಾಹನಗಳಲ್ಲಿ ತೆರಳುವ ಕಲಾವಿದರು ತಮ್ಮ ಮನೆ ಸಮೀಪ ಇರುವ ಸಹಕಲಾವಿದರನ್ನು ಕೂಡಾ ಒಟ್ಟಿಗೆ ಕರೆದುಕೊಂಡು ಹೋಗುತ್ತಾರೆ. ಇದರಿಂದ ರಾತ್ರಿಯ ವೇಳೆ ಸಂಚಾರಕ್ಕೂ, ಖರ್ಚು ವೆಚ್ಚದಲ್ಲೂ ಅವರು ಅನುಕೂಲತೆಯನ್ನು ಕಂಡಿದ್ದಾರೆ. ಸ್ವಂತ ವಾಹನವನ್ನು ಹೊಂದಿರುವವರಿಗೆ ದಿನಾ ಮನೆಗೆ ಹೋಗಿ ಬರುವುದಕ್ಕೆ ಹಾಗೂ ಕುಟುಂಬದೊಂದಿಗೆ ಬೆರೆಯಲು ಅನುಕೂಲವಾಗಿದೆ.

ಯಕ್ಷಗಾನ ಮೇಳಗಳು ವಾತಾವಾರಣದ ಅನುಕೂಲತೆಗೆ ತಕ್ಕಂತೆ ಹಾಗೂ ಪರಂಪರೆಯಿಂದ ಬಂದಿರುವ ಕ್ರಮದಂತೆ ಮಳೆಗಾಲವನ್ನು ಹೊರತುಪಡಿಸಿ ವರ್ಷದಲ್ಲಿ ಆರು ತಿಂಗಳು ಮಾತ್ರ ಪ್ರದರ್ಶನ ನೀಡುತ್ತವೆ. ನಂತರ ಮಳೆಗಾಲ ಮುಗಿದ ಬಳಿಕವೇ ಮೇಳಕ್ಕೆ ಸಂಬಂಧಿಸಿದ ದೇವಸ್ಥಾನಗಳಲ್ಲಿ ಆಯಾ ಮೇಳದ ಕಲಾವಿದರು ಗೆಜ್ಜೆಕಟ್ಟುವುದರೊಂದಿಗೆ ಮತ್ತೆ ತಿರುಗಾಟವನ್ನು ಆರಂಭಿಸುತ್ತಾರೆ. ಯಕ್ಷಗಾನವಿಲ್ಲದ ಆರು ತಿಂಗಳಲ್ಲಿ ಯಕ್ಷಗಾನ ಕಲಾವಿದರು ಬೇರೆ ಪರ್ಯಾಯ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕಾಗುತ್ತದೆ. ಯಕ್ಷಗಾನವನ್ನೇ ವೃತ್ತಿಯಾಗಿಸಿದ ಕಲಾವಿದರಿಗೆ ಈ ಆರು ತಿಂಗಳು ಸವಾಲಿನ ಸಮಯವಾಗಿದ್ದು, ಸಾಮಾನ್ಯವಾಗಿ ಮೇಳಗಳಲ್ಲಿ ರಜಾಸಂಬಳ ಎಂದು ನೀಡುವ ಕ್ರಮ ಇರುವುದಿಲ್ಲ. ಆದರೆ ಕೆಲವೊಂದು ಮೇಳಗಳು ಕಲಾವಿದರ ಅನುಭವ ಮತ್ತು ಸೀಟಿನ ಆಧಾರದ ಮೇಲೆ

ರಜೆಯ ಸಂಬಳವನ್ನು ಕೊಡುವ ಕ್ರಮ ಇದೆ. ತೆಂಕುತಿಟ್ಟಿನ ಮೇಳಗಳಲ್ಲಿ ಕಟೀಲಿನ ಆರು ಮೇಳಗಳ ಕಲಾವಿದರು ಈ ಸೌಲಭ್ಯವನ್ನು ಪಡೆಯುತ್ತಿದ್ದು ಉಳಿದವರು ಯಾರೂ ಈ ಸೌಲಭ್ಯವನ್ನು ಪಡೆಯುತ್ತಿಲ್ಲ ಎಂಬುದು ಅಧ್ಯಯನದಲ್ಲಿ ಕಂಡು ಬಂದಿದೆ.

- **ಯಕ್ಷಗಾನವಿಲ್ಲದ ಆರು ತಿಂಗಳಲ್ಲಿ ಕಲಾವಿದರ ವೃತ್ತಿ**

ಮೇಳದ ತಿರುಗಾಟವಿಲ್ಲದ ಉಳಿದ ಆರು ತಿಂಗಳಲ್ಲಿ ಈಗಿನ ಕಾಲದ ಕಲಾವಿದರು ತೊಡಗಿಸಿಕೊಳ್ಳುವ ಚಟುವಟಿಕೆಗಳ ಬಗ್ಗೆ ಗಮನ ಹರಿಸುವುದಾದರೆ ಪ್ರಮುಖವಾಗಿ ಕೃಷಿ ಕಾರ್ಯ, ಕೂಲಿ ಕೆಲಸ, ಮಳೆಗಾಲದ ಪ್ರದರ್ಶನದಲ್ಲಿ ಭಾಗವಹಿಸುವಿಕೆ, ಹಿಮ್ಮೇಳ ರಿಪೇರಿ, ಶಿಕ್ಷಕ ವೃತ್ತಿ, ಆಟೋಚಾಲಕ ವೃತ್ತಿ, ವೇಷಭೂಷಣ ರಿಪೇರಿ, ಚಿಕ್ಕಮೇಳ, ಫೋಟೋಗ್ರಾಫರ್, ಬಸ್ ನಿರ್ವಾಹಕನಾಗಿ ಕೆಲಸ, ಮೆಸ್ಕಾಂನಲ್ಲಿ ಕೆಲಸ, ಮಣಿಸಾಮಾನು ರಿಪೇರಿ, ಮಕ್ಕಳಿಗೆ ಯಕ್ಷಗಾನ ತರಬೇತಿ, ಚಿತ್ರ ಬಿಡಿಸುವುದು, ಕಾಲೇಜಿನಲ್ಲಿ ಸಿಬ್ಬಂದಿಯಾಗಿ ಕೆಲಸ, ಬೀಡಿ ಕಟ್ಟುವುದು ಹೀಗೆ ಬೇರೆ ಬೇರೆ ಚಟುವಟಿಕೆ, ಕಾಯಕದಲ್ಲಿ ಮಾಹಿತಿದಾರ ಕಲಾವಿದರು ತೊಡಗಿಸಿಕೊಳ್ಳುತ್ತಾರೆ. ಇವುಗಳಲ್ಲಿ ಹೆಚ್ಚಿನ ಕಲಾವಿದರು ಮಳೆಗಾಲದ ಪ್ರದರ್ಶನ, ಕೃಷಿ, ಕೂಲಿ ಕೆಲಸಗಳಲ್ಲಿಯೇ ತೊಡಗಿಸಿಕೊಂಡಿರುವುದನ್ನು ಗಮನಿಸಬಹುದಾಗಿದೆ.

ಯಕ್ಷಗಾನವನ್ನೇ ಬದುಕನ್ನಾಗಿಸಿದ ಯಕ್ಷಗಾನ ಕಲಾವಿದರು ಯಕ್ಷಗಾನದ ತಿರುಗಾಟ ಇಲ್ಲದ ಆರು ತಿಂಗಳಲ್ಲಿ ತಮ್ಮ ಹಾಗೂ ಕುಟುಂಬದ ಜೀವನ ನಿರ್ವಹಣೆಗಾಗಿ ಪರ್ಯಾಯ ಉದ್ಯೋಗವನ್ನು ಅವಲಂಬಿಸಲೇ ಬೇಕಾಗುವುದು ಅನಿವಾರ್ಯವಾಗುತ್ತದೆ. ಯಾಕೆಂದರೆ ಕೆಲವೊಂದು ಮೇಳದಲ್ಲಿ ಅಲ್ಪ ಸ್ವಲ್ಪ ರಜಾ ಸಂಬಳ ಅಥವಾ ಪ್ರೋತ್ಸಾಹಧನ ಎಂದು ಕೊಟ್ಟರು ಕೂಡಾ ಅದು ಅವರಿಗೆ ಸಾಕಾಗುವುದಿಲ್ಲ. ಅಲ್ಲದೆ ಉಳಿದ ಮೇಳಗಳ ಕಲಾವಿದರಿಗೆ ಅದೂ ಸಿಗುವುದಿಲ್ಲ. ಅದರಲ್ಲೂ ಈ ಆರು ತಿಂಗಳ ಅವಧಿಯಲ್ಲಿ ಆರ್ಥಿಕವಾಗಿ ಹಿಂದುಳಿದಿರುವ ಕಲಾವಿದರು ಆರ್ಥಿಕತೆಯ ವಿಚಾರದಲ್ಲಿ ಬಹಳಷ್ಟು ತೊಂದರೆಯನ್ನು ಎದುರಿಸುತ್ತಾರೆ. ಇತ್ತೀಚೆಗೆ ಆರು ತಿಂಗಳ ಮಳೆಗಾಲದ ಅವಧಿಯಲ್ಲಿಯೂ ಒಳಾಂಗಣಗಳಲ್ಲಿ ಯಕ್ಷಗಾನ ಪ್ರದರ್ಶನಗಳು ಸಂಘ ಸಂಸ್ಥೆಗಳ ಮೂಲಕ ಹಾಗೂ ಅತಿಥಿ ಕಲಾವಿದರ ಕೂಡುವಿಕೆಯ ಮೂಲಕ ನಡೆಯುತ್ತಿರುತ್ತವೆ. ಇದರಿಂದಾಗಿ ಕೆಲವು ಕಲಾವಿದರಿಗೆ ಈ ಅವಧಿಯಲ್ಲಿ ಸಂಪಾದನೆಗೊಂದು ದಾರಿಯಾಗುತ್ತದೆ. ಇನ್ನು ಕೆಲವರು ಚಿಕ್ಕಮೇಳಗಲ್ಲಿ, ಯಕ್ಷಗಾನ ತರಬೇತಿ ನೀಡುವುದರಲ್ಲಿಯೂ, ವೇಷಭೂಷಣ, ಮಣಿಸಾಮಾನು ರಿಪೇರಿ ಮೊದಲಾದವುಗಳಲ್ಲಿ ಸಂಪಾದನೆಗೊಂದು ದಾರಿ ಹುಡುಕಿಕೊಳ್ಳುತ್ತಾರೆ. ಶೈಕ್ಷಣಿಕವಾಗಿ ಉತ್ತಮವಾಗಿರುವ ಕೆಲವು ಕಲಾವಿದರು ಕಂಪೆನಿ ಅಥವಾ ಇತರ ಸಂಸ್ಥೆಗಳಲ್ಲಿ ತೊಡಗಿಸಿಕೊಂಡರೆ, ಶಿಕ್ಷಣ ಕಡಿಮೆ ಇರುವ ಕಲಾವಿದರು ಕೃಷಿ ಕೆಲಸ, ಕೂಲಿ ಕೆಲಸಗಳಲ್ಲಿಯೂ ತೊಡಗಿಸಿಕೊಂಡಿರುವುದನ್ನು ನಾವು ಗಮನಿಸಬಹುದಾಗಿದೆ. ಅಲ್ಲದೆ ಬೇರೆ ಉದ್ಯೋಗವಿಲ್ಲದೆ ಬೀಡಿ ಕಟ್ಟಿ ಜೀವನ ನಿರ್ಹಹಿಸುತ್ತಿರುವ ಕಲಾವಿದರನ್ನು ಕೂಡಾ ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ.

- **ರಾತ್ರಿ ಯಕ್ಷಗಾನದಲ್ಲಿ ದುಡಿದು ಹಗಲು ಬೇರೆ ಉದ್ಯೋಗದಲ್ಲಿ ತೊಡಗಿಸಿಕೊಂಡವರು**

ಇತ್ತೀಚೆಗೆ ಯಕ್ಷಗಾನ ಕ್ಷೇತ್ರದಲ್ಲಿ ವೃತ್ತಿಪರವಾಗಿ ದುಡಿಯುವ ಕಲಾವಿದರಿಗೆ ಹಗಲಿನ ವೇಳೆಯಲ್ಲಿ ಇತರ ವೃತ್ತಿಯಲ್ಲಿ ತೊಡಗಿಸಿಕೊಳ್ಳುವ ಅವಕಾಶಗಳು ಹೆಚ್ಚುತ್ತಿವೆ. ಹಿಂದೆ ಕಲಾವಿದರು ಹಲವಾರು ಕಾರಣಗಳಿಂದ ಕ್ಯಾಂಪಿನಲ್ಲೇ ಉಳಿದುಕೊಳ್ಳಬೇಕಿತ್ತು. ಆದರೆ ಇತ್ತೀಚೆಗೆ ಕಲಾವಿದರಿಗೆ ತಮ್ಮ ಪಾತ್ರಗಳನ್ನು ಮುಗಿಸಿ ತಮ್ಮ ಮನೆಗೆ ಬಂದು ವಿಶ್ರಾಂತಿ ಪಡೆಯಲು ಅವಕಾಶಗಳು ಹೆಚ್ಚು ಸಿಗುತ್ತಿವೆ. ಇದರ ಪರಿಣಾಮ ಇಂದು ಕೆಲವು ಕಲಾವಿದರು ರಾತ್ರಿ ಯಕ್ಷಗಾನದಲ್ಲಿ ದುಡಿದು ಹಗಲು ಬೇರೆ ವೃತ್ತಿಯಲ್ಲಿ ತೊಡಗಿಸಿಕೊಳ್ಳುತ್ತಿದ್ದಾರೆ. ಮಾಹಿತಿದಾರ ಕಲಾವಿದರ ಪೈಕಿ 81.11 ರಷ್ಟು ಕಲಾವಿದರು

ಹಗಲಿನ ವೇಳೆ ದುಡಿಯದೇ ಕೇವಲ ಯಕ್ಷಗಾನದಲ್ಲಿ ದುಡಿಯುವವರಾಗಿದ್ದರೆ, ಪ್ರತಿಶತ 18.89 ರಷ್ಟು ಕಲಾವಿದರು ರಾತ್ರಿ ಯಕ್ಷಗಾನದಲ್ಲಿ ದುಡಿದು ಹಗಲಿನ ವೇಳೆಯಲ್ಲಿ ಬೇರೆ ಬೇರೆ ಕಾಯಕಗಳಲ್ಲಿ ತೊಡಗಿಸಿಕೊಂಡ ಕಲಾವಿದರಾಗಿದ್ದಾರೆ. ಹಗಲಿನ ವೇಳೆ ದುಡಿಯುವ ಕಲಾವಿದರ ವೃತ್ತಿಯನ್ನು ಗಮನಿಸಿದಾಗ ವಿದ್ಯಾರ್ಥಿಗಳಿಗೆ ಯಕ್ಷಗಾನ ತರಬೇತಿ, ಹಿಮ್ಮೇಳ-ಭಾಗವತಿಕೆ ತರಬೇತಿ, ಆಟೋ ಚಾಲನೆ, ಮೆಸ್ಕಾಂ, ವಾರಪತ್ರಿಕೆಯಲ್ಲಿ ಕೆಲಸ, ಅಂಗಡಿ, ಪೂಜೆ ಕೆಲಸ, ಶಿಕ್ಷಕ ವೃತ್ತಿ, ರಂಗಸ್ಥಳದ ಕೆಲಸ, ಬಸ್ ನಿರ್ವಾಹಕ, ವೇಷಭೂಷಣ ತಯಾರಿ ಕೆಲಸ, ಮೇಕಪ್, ಪ್ರಸಾದನ ಕಾರ್ಯ, ಫೋಟೋಗ್ರಾಫಿಕ್, ಅಕೌಂಟೆಂಟ್ ಕೆಲಸ, ಬೀಡಿ ಕಟ್ಟುವುದು-ಹೀಗೆ ಬೇರೆ ಬೇರೆ ವೃತ್ತಿಗಳಲ್ಲಿ ತೊಡಗಿಸಿಕೊಂಡಿರುವುದನ್ನು ಕಾಣಬಹುದು. ಇಲ್ಲಿ ಪ್ರಮುಖ ಕಾರಣವನ್ನು ಗುರುತಿಸುವುದಾದರೆ ಯಕ್ಷಗಾನದಲ್ಲಿ ಸಿಗುವ ಆರ್ಥಿಕ ಸಂಪಾದನೆ ಕಲಾವಿದರಿಗೆ ತಮ್ಮ ಕುಟುಂಬದ ಜವಾಬ್ಧಾರಿಯನ್ನು ನಿಭಾಯಿಸಲು ಸಾಕಾಗದ ಕಾರಣ ಹಾಗೂ ಯಕ್ಷಗಾನವನ್ನೂ ಕಲೆಯ ಅಭಿಮಾನದಿಂದ ಬಿಡಲು ಮನಸ್ಸಾಗದೆ ಹಗಲಿನಲ್ಲಿ ಬೇರೆ ವೃತ್ತಿಯಲ್ಲಿ ತೊಡಗಿಸಿಕೊಳ್ಳುತ್ತಿರುವುದನ್ನು ಗಮನಿಸಬಹುದು. ಇಲ್ಲಿ ಕುಟುಂಬವನ್ನು ಸಲಹುದಕ್ಕಾಗಿ ಯಕ್ಷಗಾದಿಂದ ಸಂಪಾದನೆ ಸಾಕಾಗದೆ ಬೇರೆ ಉದ್ಯೋಗವನ್ನೂ ಮಾಡಲಾಗದೆ ಬೀಡಿ ಕಟ್ಟಿ ಬದುಕು ಸಾಗಿಸುತ್ತಿರುವ ಕಲಾವಿದರನ್ನು ಗಮನಿಸಿದರೆ ಇಂದಿನ ಕಾಲದಲ್ಲೂ ಕಲಾವಿದರ ಆರ್ಥಿಕ ಪರಿಸ್ಥಿತಿಯ ಬಗ್ಗೆ ನಮಗೆ ಮನದಟ್ಟಾಗುತ್ತದೆ. ಅಲ್ಲದೆ ಇಲ್ಲಿ ಅಧಿಕ ಸಂಪಾದನೆಗಾಗಿಯೂ ಬೇರೆ ವೃತ್ತಿಯಲ್ಲಿ ತೊಡಗಿಸಿಕೊಂಡವರಿದ್ದಾರೆ. ಹೆಚ್ಚಾಗಿ ದಿನಾ ಯಕ್ಷಗಾನ ಮುಗಿಸಿ ವಾಪಸ್ಸು ಬರುವ, ಸ್ವಂತ ವಾಹನವನ್ನು ಹೊಂದಿರುವ ಕಲಾವಿದರು ಹಗಲು ಬೇರೆ ವೃತ್ತಿಯಲ್ಲಿ ತೊಡಗಿಸಿಕೊಳ್ಳಲು ಸಹಾಯವಾಗುತ್ತದೆ. ಆದರೆ ಕಲಾವಿದರ ಸಂಖ್ಯೆಗೆ ಹೋಲಿಸಿದರೆ ಬಹಳ ಕಡಿಮೆ ಕಲಾವಿದರು ಯಕ್ಷಗಾನದಲ್ಲಿದ್ದೂ ಹಗಲಿನಲ್ಲಿ ಬೇರೆ ವೃತ್ತಿ ಮಾಡುವವರಾಗಿದ್ದಾರೆ. ರಾತ್ರಿ ಯಕ್ಷಗಾನದಲ್ಲಿ ದುಡಿದು ಅಧಿಕವಾಗಿ ಆಯಾಸಗೊಳ್ಳುವುದರಿಂದ ವಿಶ್ರಾಂತಿಯಿಲ್ಲದೆ ಹಗಲಿನಲ್ಲಿ ಬೇರೆ ವೃತ್ತಿಯಲ್ಲಿ ತೊಡಗಿಸಿಕೊಳ್ಳುವುದು ಕಲಾವಿದರಿಗೆ ಒಂದು ಸವಾಲಿನ ಸಂಗತಿಯೂ ಹೌದು ಮತ್ತು ಕೆಲವೊಮ್ಮೆ ವಿಶ್ರಾಂತಿಯಿಲ್ಲದೆ ಆರೋಗ್ಯದ ಮೇಲೂ ಪರಿಣಾಮ ಬೀರುತ್ತದೆ ಎಂದು ಹೇಳಬಹುದು.

- **ಕಲಾವಿದರ ಉಳಿತಾಯ**

ಜೀವನದ ಉದ್ದೇಶ ಈಡೇರಿಕೆಗೆ, ಕುಟುಂಬದ ಅಭಿವೃದ್ಧಿಗೆ ಸಂಪಾದನೆ ಹಾಗೂ ಉಳಿತಾಯವು ಪ್ರಮುಖವಾದ ಅಸ್ತ್ರವಾಗುತ್ತದೆ. ಇತ್ತೀಚೆಗೆ ಯಕ್ಷಗಾನ ಕಲಾವಿದರು ಹೆಚ್ಚಾಗಿ ವಿಭಕ್ತ ಕುಟುಂಬದಲ್ಲೇ ವಾಸಿಸುತ್ತಿರುವುದರಿಂದ ತಮ್ಮ ಕುಟುಂಬದ ಜವಬ್ಧಾರಿಯೂ ಹೆಚ್ಚಿರುತ್ತದೆ. ತಮ್ಮ ಕುಟುಂಬದ ಉತ್ತಮ ಭವಿಷ್ಯಕ್ಕಾಗಿ ಉಳಿತಾಯ ಮಾಡುವುದು ಕೂಡಾ ಅನಿವಾರ್ಯವಾಗುತ್ತದೆ. ಮಾಹಿತಿದಾರ ಕಲಾವಿದರ ಪೈಕಿ 86.11 ರಷ್ಟು ಕಲಾವಿದರು ಉಳಿತಾಯ ಮಾಡುವ ಪ್ರವೃತ್ತಿಯನ್ನು ಬೆಳೆಸಿಕೊಂಡವರಾಗಿದ್ದಾರೆ. ಹಾಗೆಯೇ ಪ್ರತಿಶತ 13.89 ರಷ್ಟು ಜನರು ತಮ್ಮ ಸಂಪಾದನೆಯಲ್ಲಿ ಉಳಿತಾಯವನ್ನು ಮಾಡದಿರುವ ಬಗ್ಗೆ ಮಾಡಲು ಸಾಧ್ಯವಾಗದೇ ಇರುವ ಬಗ್ಗೆ ಮಾಹಿತಿ ನೀಡಿದ್ದಾರೆ. ಉಳಿತಾಯ ಮಾಡದಿರುವ ಬಗ್ಗೆ ಮಾಹಿತಿ ಪರಿಶೀಲಿಸಿದಾಗ ಹೆಚ್ಚಿನವವರು ವೇತನ ಕಡಿಮೆ ಹಾಗೂ ಸಂಪಾದನೆಯು ತಿಂಗಳ ಖರ್ಚಿಗೆ ಸರಿಯಾಗುತ್ತದೆ ಎಂಬ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದು, ಇದರಿಂದ ಇಂದಿನ ಕಾಲದಲ್ಲೂ ಕೆಲವು ಕಲಾವಿದರು ಎದುರಿಸುತ್ತಿರುವ ಆರ್ಥಿಕಭವಣೆಯನ್ನು ಅರ್ಥಮಾಡಿಕೊಳ್ಳಬಹುದಾಗಿದೆ.

ಕಲಾವಿದರು ಉಳಿತಾಯ ಮಾಡುವ ರೀತಿಯನ್ನು ಗಮನಿಸಿದರೆ ಹೆಚ್ಚಿನವರು ಅಂದರೆ ಪ್ರತಿಶತ 87.10ರಷ್ಟು ಕಲಾವಿದರು ಬ್ಯಾಂಕ್ ಖಾತೆಗಳಲ್ಲಿ ಉಳಿತಾಯವನ್ನು ಮಾಡುವವರಾಗಿದ್ದಾರೆ. ಇನ್ನು ಕೆಲವರು ಅಂಚೆ ಖಾತೆ, ಫಂಡ್, ಮನೆಯಲ್ಲಿಯೇ, ಬ್ಯಾಂಕ್ ಮತ್ತು ಅಂಚೆ ಖಾತೆಗಳಲ್ಲಿ, ಅಂಚೆ ಖಾತೆ ಮತ್ತು ಫಂಡ್‌ಗಳ ಮೂಲಕ ಉಳಿತಾಯ ಮಾಡುತ್ತಿದ್ದಾರೆ.

- **ಕಲಾವಿದರು ವಿಮಾ ಸೌಲಭ್ಯವನ್ನು ಹೊಂದಿರುವ ಕುರಿತು**

ಯಕ್ಷಗಾನ ಕಲಾವಿದರು ಕೆಲವರು ತಮ್ಮ ಭದ್ರತೆಗಾಗಿ ವಿಮಾ ಸೌಲಭ್ಯವನ್ನು ಹೊಂದಿದ್ದಾರೆ. ಮಾಹಿತಿದಾರರಲ್ಲಿ ಪ್ರತಿಶತ 63.89 ರಷ್ಟು ಕಲಾವಿದರು ವಿಮಾ ಸೌಲಭ್ಯವನ್ನು ಹೊಂದಿದವರಾಗಿದ್ದರೆ, ಪ್ರತಿಶತ 36.11ರಷ್ಟು ಕಲಾವಿದರು ವಿಮೆಯನ್ನು ಹೊಂದಿರುವುದಿಲ್ಲ. ವಿಮೆಯನ್ನು ಹೊಂದಿರುವವರಲ್ಲಿ ಹೆಚ್ಚಿನವರು ಪ್ರತಿಶತ 55.65ರಷ್ಟು ಜನ ಎಲ್‌ಐಸಿಯಲ್ಲಿ ವಿಮೆಯನ್ನು ಹೊಂದಿದ್ದರೆ, ಇನ್ನುಳಿದವ ಕೆಲವು ಕಲಾವಿದರು ಅಂಚೆವಿಮೆ, ಅಪಘಾತವಿಮೆ, ಅಟಲ್ ಯೋಜನೆ, ಮೊದಲಾದ ವಿಮೆಗಳಲ್ಲಿ ತೊಡಗಿಸಿಕೊಂಡಿರುವುದು ಕಂಡು ಬರುತ್ತದೆ. ಅಲ್ಲದೆ ಇತ್ತೀಚೆಗೆ ಯಕ್ಷಗಾನ ಸಂಘಟನೆಗಳಾದ ಉಡುಪಿಯ ಯಕ್ಷಗಾನ ಕಲಾರಂಗ, ಯಕ್ಷಧ್ರುವ ಪಟ್ಲ ಫೌಂಡೇಶನ್ ಅವರು ಹೆಚ್ಚಿನ ಯಕ್ಷಗಾನ ಕಲಾವಿದರಿಗೆ ಅಪಘಾತವಿಮೆಯಂತಹ ಹಲವಾರು ವಿಮಾಸೌಲಭ್ಯಗಳನ್ನು ಒದಗಿಸಿಕೊಡುವಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದು ಇದರಿಂದ ವೃತ್ತಿ ಕಲಾವಿದರಿಗೆ ತಮ್ಮ ಬದುಕಿನ ಭದ್ರತೆಗೆ ಸ್ವಲ್ಪ ಅನುಕೂಲವಾಗಿದೆ.

ಯಕ್ಷಗಾನ ಕಲಾವಿದರಿಗೆ ಪಿಎಫ್ ವ್ಯವಸ್ಥೆ ಜಾರಿಯಾಗಬೇಕು ಎಂಬ ಕೂಗು ಬಹಳ ವರ್ಷಗಳಂದ ಕೆಲವು ಮೇಳದ ಕಲಾವಿದರಿಂದ ಕೇಳಿ ಬರುತ್ತಿವೆಯಾದರೂ ತೆಂಕುತಿಟ್ಟಿನಲ್ಲಿ ಧರ್ಮಸ್ಥಳ ಮೇಳವನ್ನು ಹೊರತುಪಡಿಸಿದರೆ ಬೇರೆ ಯಾವ ಮೇಳದಲ್ಲಿ ಫಾವಿಂಡಂಟ್ ಫಂಡ್ ವ್ಯವಸ್ಥೆ ಇಲ್ಲ. ಇತ್ತೀಚೆಗೆ ಬಂದಿರುವ ಕೆಲವು ಮೇಳಗಳು ತಮ್ಮ ಕಲಾವಿದರಿಗೆ ಪಿಎಫ್ ವ್ಯವಸ್ಥೆಯನ್ನು ಕೊಡುವ ಚಿಂತನೆಯಲ್ಲಿವೆ.

- **ಕಲಾವಿದರಿಗಿರುವ ಮಾಶಾಸನ ಬಗೆಗೆ ತಿಳುವಳಿಕೆ**

ಯಕ್ಷಗಾನ ಕಲಾವಿದರಿಗೆ ತಮ್ಮ ನಿವೃತ್ತಿಯ ವಯಸ್ಸಿನ ಬಳಿಕ ಸರ್ಕಾರದ ಮಾಶಾಸನ ವ್ಯವಸ್ಥೆ ಇರುವ ಬಗ್ಗೆ ಮಾಹಿತಿದಾರ ಕಲಾವಿದರಿಗಿರುವ ಮಾಹಿತಿಯ ಬಗ್ಗೆ ತಿಳಿದಾಗ ಪ್ರತಿಶತ 23.33 ರಷ್ಟು ಕಲಾವಿದರು ಮಾಶಾಸನ ವ್ಯವಸ್ಥೆ ಇದೆ ಎಂದು ಹೇಳಿದ್ದರೆ, ಪ್ರತಿಶತ 31.67 ರಷ್ಟು ಕಲಾವಿದರು ಸರ್ಕಾರದ ಮಾಶಸನ ವ್ಯವಸ್ಥೆ ಇಲ್ಲ ಎಂದು ಹೇಳಿದ್ದಾರೆ. ಹಾಗೆಯೇ ಪ್ರತಿಶತ 45.00 ರಷ್ಟು ಕಲಾವಿದರು ಸರ್ಕಾರ ಮಾಶಾಸನ ವ್ಯವಸ್ಥೆಯ ಬಗ್ಗೆ ನಮಗೆ ತಿಳಿದಿಲ್ಲ ಎಂದು ಹೇಳಿದ್ದಾರೆ. ಕಲಾವಿದರಿಗೆ ನಿವೃತ್ತಿಯಾದ ಬಳಿಕ ಸರ್ಕಾರಿದಿಂದ ಮಾಶಾಸನ ವ್ಯವಸ್ಥೆ ಇದ್ದರು ಕೂಡಾ ಅದು ಅಷ್ಟು ಸುಲಭವಾಗಿ ಕಲಾವಿದರಿಗೆ ಎಟಕುತ್ತಿಲ್ಲ. ಅದಕ್ಕಿರುವ ಹಲವು ನಿಯಾಮಾವಳಿಗಳು, ರೂಪುರೇಷೆಗಳು ಕೂಡಾ ಇದಕ್ಕೆ ಕಾರಣವಿರಬಹುದಾಗಿದೆ. ಸರ್ಕಾರದಿಂದ ಕಲಾವಿದರಿಗೆ ನಿವೃತ್ತಿಯ ವಯಸ್ಸಿನ ಬಳಿಕ ಸಿಗುವಂತಹ ಮಾಶಾಸನ ಬಗ್ಗೆ ಸರಿಯಾದ ಮಾಹಿತಿ ನೀಡುವ ವ್ಯವಸ್ಥೆಯೇ ಇಲ್ಲದಿರುವುದರಿಂದ ಹೆಚ್ಚಿನ ಕಲಾವಿದರಿಗೆ ಈ ಬಗ್ಗೆ ಮಾಹಿತಿಯ ಕೊರತೆ ಇದೆ ಎಂಬುದನ್ನು ತಿಳಿಯಬಹುದಾಗಿದೆ. ಅಲ್ಲದೆ ಹೆಚ್ಚಿನ ಹಿರಿಯ ಕಲಾವಿದರಿಗೆ ಶಿಕ್ಷಣವು ಕೂಡಾ ಕಡಿಮೆ ಇರುವುದರಿಂದ ಈ ಬಗ್ಗೆ ಅರಿತುಕೊಳ್ಳಲು ಸಮಸ್ಯೆಯಾಗಿದೆ. ಕೆಲವೇ ಕೆಲವು ನಿವೃತ್ತಿಯ ಕಲಾವಿದರು ಇತರರ ಸಹಾಯದೊಂದಿಗೆ ಇಂತಹ ಸೌಲಭ್ಯಗಳನ್ನು ಪಡೆಯುತ್ತಿದ್ದಾರೆ. ಸರ್ಕಾರದ ವತಿಯಿಂದ ಮತ್ತು ಯಕ್ಷಗಾನ ಸಂಘ ಸಂಸ್ಥೆಗಳ ಮುಖಾಂತರ ಹಿರಿಯ ಯಕ್ಷಗಾನ ಕಲಾವಿದರಿಗೆ ಸರ್ಕಾರದ ಸೌಲಭ್ಯಗಳನ್ನು ದೊರಕಿಸಿಕೊಡುವ ಕಾರ್ಯಗಳಾದರೆ ಇಂತಹ ಯೋಜನೆಗಳ ಸದುಪಯೋಗವಾಗಲು ಸಾಧ್ಯವಾಗುತ್ತದೆ ಎಂದು ಹೇಳಬಹುದು.

- **ಕಲಾವಿದರಿಗೆ ನೆರವಾಗುವ ಸಂಘ ಸಂಸ್ಥೆಗಳ ಕುರಿತು ಮಾಹಿತಿ**

ಯಕ್ಷಗಾನ ಕಲಾವಿದರ ಅಭಿವೃದ್ಧಿಗೆ ಸಹಾಯ ಮಾಡುವ ಯಾವುದಾದ'ರೂ ಸಂಘಸಂಸ್ಥೆಗಳ ಬಗ್ಗೆ ಮಾಹಿತಿದಾರರಲ್ಲಿ ತಿಳಿದಾಗ ಪ್ರತಿಶತ 96.67 ರಷ್ಟು ಕಲಾವಿದರು ಈ ಕಲಾವಿದರಿಗ ಸಹಾಯ ಮಾಡುವ ಸಂಘ ಸಂಸ್ಥೆಗಳ ಬಗ್ಗೆ ತಿಳಿದಿದೆ ಎಂದಿದ್ದಾರೆ. ಪ್ರಮುಖವಾಗಿ ಕಲಾವಿದರು ಹೆಚ್ಚಾಗಿ

ಗುರುತಿಸಿರುವ ಸಂಘ ಸಂಸ್ಥೆಗಳೆಂದರೆ ಉಡುಪಿಯ ಕಲಾರಂಗ ಮತ್ತು ಯಕ್ಷಧ್ರುವ ಪಟ್ಲ ಫೌಂಡೇಶನ್ ನಂತಹ ಸಂಸ್ಥೆಗಳು. ಹೆಚ್ಚಿನವರು ಇದರ ಸದಸ್ಯರೂ ಆಗಿದ್ದಾರೆ. ಇನ್ನುಳಿದಂತೆ ಕೆಲವರು ಯಕ್ಷಗಾನ ಅಕಾಡೆಮಿ, ಇತರ ಸಂಘಸಂಸ್ಥೆಗಳ ಬಗ್ಗೆ ತಿಳಿಸಿದ್ದಾರೆ. ಕಲಾವಿದರ ಶ್ರೇಯೋಭಿವೃದ್ಧಿಗಾಗಿ ಆರ್ಥಿಕವಾಗಿ ಪ್ರೋತ್ಸಾಹ ನೀಡುವ ಹಾಗೂ ಬಡಕಲಾವಿದರಿಗೆ ಅವರ ಕುಟುಂಬಕ್ಕೆ ಆಶಾಕಿರಣವಾಗಿ ಕೆಲವೊಂದು ಸಂಘ ಸಂಸ್ಥೆಗಳು ಸಮಾಜದಲ್ಲಿ ಕಾರ್ಯಾಚರಿಸುತ್ತಿವೆ. ಉಡುಪಿಯ ಕಲಾರಂಗ, ಪಟ್ಲ ಫೌಂಡೇಶನ್ ನಂತಹ ಸಂಸ್ಥೆಗಳು ಆರ್ಥಿಕವಾಗಿ ಹಿಂದುಳಿದಿರುವ ಕಲಾವಿದರಿಗೆ ಪ್ರೋತ್ಸಾವನ್ನು ನೀಡುತ್ತಿವೆ. ಅಶಕ್ತ ಕಲಾವಿದರ ಕುಟುಂಬಕ್ಕೆ ಸಹಾಯ ಧನವನ್ನು ನೀಡಿ ಪ್ರೋತ್ಸಾಹಿಸುತ್ತಿವೆ. ಅಲ್ಲದೆ ಬಡ ಕಲಾವಿದರಿಗೆ ಮನೆ ಕಟ್ಟಿಕೊಡುವ ಕಾರ್ಯವೂ ನಡೆಯುತ್ತಿವೆ. ಅಲ್ಲದೆ ಕಲಾವಿದರ ಮಕ್ಕಳಿಗೆ ವಾರ್ಷಿಕವಾಗಿ ಸ್ಕಾಲರ್ ಶಿಪ್ ನೀಡುವ ವ್ಯವಸ್ಥೆಯು, ವಿಮಾ ಸೌಲಭ್ಯ ಮೊದಲಾದ ಸೌಲಭ್ಯಗಳು ಪ್ರಮುಖವಾಗಿ ಈ ಎರಡು ಸಂಘಸಂಸ್ಥೆಗಳಿಂದ ನಡೆಯುತ್ತಿರುವುದರಿಂದ ಯಕ್ಷಗಾನ ಕಲಾವಿದರಿಗೆ ಆರ್ಥಿಕವಾಗಿ ನೆರವಾಗುತ್ತಿವೆ. ಹಾಗೆಯೇ ಕಲಾವಿದರ ಶ್ರೇಯೋಭಿವೃದ್ಧಿಗಾಗಿ ಸರ್ಕಾರ ಮಾಡಬೇಕಾದ ಕಾರ್ಯವನ್ನು ಇಂತಹ ಸಂಸ್ಥೆಗಳು ನಡೆಸುತ್ತಿರುವ ಪರಿಣಾಮ ಕಲಾವಿದರ ಆರ್ಥಿಕ ಭದ್ರತೆಗೆ ಸ್ವಲ್ಪವಾದರೂ ನೆರವಾಗಿದೆ. ಇದನ್ನು ಯಕ್ಷಗಾನದಲ್ಲಿ ಸೇವೆ ಸಲ್ಲಿಸುತ್ತಿರುವ ಯಕ್ಷಗಾನ ಕಲಾವಿದರೂ ಒಪ್ಪಿಕೊಂಡಿರುವುದು ಅಧ್ಯಯನದಲ್ಲಿ ಕಂಡು ಬರುತ್ತದೆ.

ಯಕ್ಷಗಾನ ಕಲಾವಿದರ ಆರ್ಥಿಕ ಸ್ಥಿತಿಗತಿಯ ಬಗ್ಗೆ ಈ ಅಧ್ಯಾಯದಲ್ಲಿ ವಿಸ್ತೃತವಾಗಿ ಚರ್ಚಿಸಲಾಗಿದೆ. ಪ್ರಸ್ತುತ ಕಾಲಘಟ್ಟದಲ್ಲಿ ಯಕ್ಷಗಾನ ಹಾಗೂ ಯಕ್ಷಗಾನ ಕಲಾವಿದರ ಬಗ್ಗೆ ಸ್ಥಿತಿಗತಿಯ ಬಗ್ಗೆ ತಿಳಿದುಕೊಳ್ಳಬೇಕಾದರೆ ಕಲಾವಿದರ ಆರ್ಥಿಕ ಸ್ಥಿತಿಗತಿ, ಅವರಿಗೆ ಲಭಿಸುತ್ತಿರುವ ಸೌಲಭ್ಯಗಳು, ಅವಕಾಶಗಳು ಮೊದಲಾದವುಗಳ ಬಗ್ಗೆಯೂ ಗಮನಹರಿಸಬೇಕಾಗುತ್ತದೆ. ಸಾಮಾನ್ಯವಾಗಿ ಯಕ್ಷಗಾನ ಕಲಾವಿದರಿಗೆ ಸಾಮಾನ್ಯವಾಗಿ ಆರು ತಿಂಗಳು ಮಾತ್ರ ಯಕ್ಷಗಾನವಿರುತ್ತದೆ. ಉಳಿದ ಆರು ತಿಂಗಳಲ್ಲಿ ಪ್ರಸಿದ್ಧ ಕಲಾವಿದರಿಗೆ ಮಾತ್ರ ಅವಕಾಶಗಳು ಸಿಗುತ್ತವೆ. ಮುಖ್ಯವಾಗಿ ಕಲಾವಿದರ ವೇತನದ ಬಗ್ಗೆ ತಿಳಿದುಕೊಂಡಾಗ ಹಿಂದಿನ ಕಲಾವಿದರಿಂದ ಪ್ರಸ್ತುತ ಕಾಲಘಟ್ಟದ ಕಲಾವಿದರು ಉತ್ತಮ ವೇತನವನ್ನು ಪಡೆಯುತ್ತಾರೆ. ಆದರೆ ವೇತನದಲ್ಲಿ ಸಮಾನತೆಯು ಇರುವುದಿಲ್ಲ. ಅದಕ್ಕೇ ಆದ ವಿವಿಧ ಮಾನದಂಡಗಳು ಇರುವುದನ್ನು ಇಲ್ಲಿ ಗಮನಿಸಲಾಗಿದೆ. ಅಲ್ಲದೆ ಹೆಚ್ಚಿನ ಕಲಾವಿದರು ಉಳಿದ ಆರು ತಿಂಗಳಲ್ಲಿ ಮಣಿಸಾಮಾನು ರಿಪೇರಿ, ಕೂಲಿ, ವಾಹನ ಚಾಲಕ, ಕೃಷಿ, ಬೀಡಿ ಕಟ್ಟುವುದು ಮೊದಲಾದ ವೃತ್ತಿಗಳಲ್ಲಿ ತೊಡಗಿಸಿಕೊಂಡಿರುತ್ತಾರೆ. ಅಲ್ಲದೆ ಇತ್ತೀಚೆಗೆ ಸಂಪಾದನೆ ಸಾಕಾಗದೆ ಯಕ್ಷಗಾನ ಕಲಾವಿದರು ಹಗಲಿನ ವೇಳೆಯೂ ಬೇರೆ ವೃತ್ತಿಯಲ್ಲಿ ತೊಡಗಿಸಿಕೊಳ್ಳುತ್ತಿರುವುದನು ಅಧ್ಯಯನದಲ್ಲಿ ಗಮನಿಸಲಾಗಿದೆ. ಹಗಲಿನಲ್ಲಿ ಕೂಲಿ ಕೆಲಸ ಮಾಡುವ, ರಿಕ್ಷಾ ಡ್ರೈವರ್ ಆಗಿ ಕಾರ್ಯನಿರ್ವಹಿಸುವ, ಬೀಡಿ ಕಟ್ಟುವ ಕಲಾವಿದರು ರಾತ್ರಿ ವೇಳೆಯಲ್ಲಿ ರಂಗಸ್ಥಳದಲ್ಲಿ ರಾಜನಾಗಿ, ದೇವೇಂದ್ರನಾಗಿ ಮೆರೆಯುವುದನ್ನು ನೋಡಲು ಯಕ್ಷಗಾನದಲ್ಲಿ ಸಾಧ್ಯವಾಗುತ್ತದೆ. ಅಂದರೆ ಯಕ್ಷಗಾನ ವೃತ್ತಿಯಲ್ಲಿ ಅವರಿಗೆ ಆರ್ಥಿಕತೆ ತೃಪ್ತಿಯ ಭಾವ ಕಡಿಮೆಯಿದ್ದರೂ ಕಲಾಪ್ರೀತಿಯಿಂದ ದುಡಿಯುವ ಕಲಾವಿದ ವರ್ಗವೇ ಇಲ್ಲಿ ಅಧಿಕವಾಗಿ ಕಾಣಸಿಗುತ್ತಾರೆ. ಉಳಿದಂತೆ ಈ ಅಧ್ಯಾಯದಲ್ಲಿ ಕಲಾವಿದರ ಉಳಿತಾಯ, ವಿವಿಧ ಸೌಲಭ್ಯಗಳು, ವಿವಿಧ ಸಂಘ ಸಂಸ್ಥೆಗಳ ಪ್ರೋತ್ಸಾಹ ಬಗ್ಗೆ ಇಲ್ಲಿ ಚರ್ಚಿಸಲಾಗಿದೆ.

ಯಕ್ಷಗಾನ ಕಲಾವಿದರಿಗೆ ಸಂಬಂಧಿಸಿದ ಈ ಅಧ್ಯಾಯದಲ್ಲಿರುವ ಆರ್ಥಿಕ ಮಾಹಿತಿಗಳು ಅಪೂರ್ವವಾಗಿವೆ ಎನ್ನಬಹುದು. ಈವರೆಗೆ ಕಲಾವಿದರ ಆರ್ಥಿಕ ಬದುಕಿನ ಸಮೀಕ್ಷೆಯನ್ನು ವ್ಯಾಪಕವಾಗಿ ಮತ್ತು ಸೂಕ್ಷ್ಮವಾಗಿ ನಡೆಸಲಾಗಿದೆ. ವಾಸ್ತವಿಕವಾಗಿ ಆರ್ಥಿಕತೆಯ ಕುರಿತಾದ ಈ ಅಂಕಿ ಅಂಶಗಳು ಕಲಾವಿದರ ಸಾಮಾಜಿಕ ಬದುಕಿನ ಕುರಿತಂತೆ ಸ್ಪಷ್ಟ ಚಿತ್ರಣವನ್ನು ನೀಡುತ್ತವೆ.

ಯಕ್ಷಗಾನ ಸ್ಥಿತ್ಯಂತರ

ಆಧುನೀಕರಣ, ನಗರೀಕರಣ ಮೊದಲಾದ ಪರಿಣಾಮವಾಗಿ ಸಮಾಜದಲ್ಲಿ ಹಲವಾರು ರೀತಿಯ ಪರಿವರ್ತನೆ, ಬದಲಾವಣೆಗಳು ನಡೆಯುತ್ತಿರುವುದನ್ನು ಕಾಣಬಹುದು. ಹಾಗೆಯೇ ಯಕ್ಷಗಾನ ಕಲೆಯು ತನ್ನ ಮೂಲ ಸಂಪ್ರಾದಾಯವನ್ನು ಉಳಿಸಿಕೊಂಡು ಹಲವಾರು ರೀತಿಯ ಬದಲಾವಣೆಗಳಿಗೆ ತೆರೆದುಕೊಂಡಿರುವುದನ್ನು ಕಾಣಬಹುದು. ಇಂತಹ ಬದಲಾವಣೆಗಳು ಯಕ್ಷಗಾನ ಕಲಾವಿದರ ಬದುಕಿನಲ್ಲಿಯೂ ಹಲವಾರು ಪರಿವರ್ತನೆ, ವೈಪರಿತ್ಯಗಳಿಗೂ ಕಾರಣವಾಗುತ್ತಿವೆ. ಇಂತಹ ಪರಿವರ್ತನೆ, ಬದಲಾವಣೆಗಳಿಗೆ ಕಾರಣವಾಗುವ ಹಲವು ಸಾಮಾಜಿಕ ಅಂಶಗಳ (Social change) ಬಗ್ಗೆ ಈ ಅಧ್ಯಾಯದಲ್ಲಿ ವಿಶ್ಲೇಷಣೆ ನಡೆಸಲಾಗಿದೆ. ಪ್ರಸ್ತುತ ಅಧ್ಯಾಯದಲ್ಲಿ ಕಾಲಮಿತಿ ಯಕ್ಷಗಾನ-ಪರವಿರೋಧಗಳು, ಇಂದಿನ ಯಕ್ಷಗಾನದಲ್ಲಿ ಪರಂಪರೆ, ಸಂಪ್ರದಾಯದ ರಕ್ಷಣೆ ಜೊತೆಗೆ ಯಕ್ಷಗಾನಕ್ಕೆ ಪ್ರೇಕ್ಷಕರ ಒಲವು, ಸಂಘ ಸಂಸ್ಥೆಗಳ ಪ್ರಭಾವ, ಪ್ರೋತ್ಸಾಹ ಹಾಗೂ ಯಕ್ಷಗಾನದ ಬೆಳವಣಿಗೆಯಲ್ಲಿ ಯಕ್ಷಗಾನ ಕಲಾವಿದನ ಪಾತ್ರ, ಸವಾಲುಗಳು- ಮೊದಲಾದ ವಿಷಯಗಳ ಬಗೆಗೆ ಚರ್ಚಿಸಲಾಗಿದೆ.

- **ಯಕ್ಷಗಾನಕ್ಕೆ ಪ್ರೇಕ್ಷಕರು ಕಡಿಮೆಯಾಗುತ್ತಿದ್ದಾರೆಯೇ ಎಂಬುದರ ಕುರಿತು**

ಇಂದು ಹಲವಾರು ಕಾರಣಗಳಿಂದ ಯಕ್ಷಗಾನಕ್ಕೆ ಪ್ರೇಕ್ಷಕರು ಕಡಿಮೆಯಾಗುತ್ತಿದೆ ಎಂಬ ಮಾತುಗಳು ಕೇಳಿ ಬರುತ್ತಿದ್ದರೂ ಈ ಬಗ್ಗೆ ಮಾಹಿತಿದಾರರ ಅಭಿಪ್ರಾಯವನ್ನು ಪರಿಶೀಲಿಸಿದಾಗ ಪ್ರತಿಶತ 62.78 ರಷ್ಟು ಕಲಾವಿದರು ಯಕ್ಷಗಾನಕ್ಕೆ ಪ್ರೇಕ್ಷಕರು ಕಡಿಮೆಯಾಗಿಲ್ಲ ಎಂದು ಅಭಿಪ್ರಾಯ ಪಟ್ಟಿದ್ದಾರೆ. ಹಾಗೆಯೇ ಪ್ರತಿಶತ 34.44 ರಷ್ಟು ಕಲಾವಿದರು ಯಕ್ಷಗಾನಕ್ಕೆ ಪ್ರೇಕ್ಷಕರು ಕಡಿಮೆಯಾಗಿದ್ದಾರೆ ಎಂದು ತಿಳಿಸಿದ್ದಾರೆ. ಇಲ್ಲಿ ಪ್ರಮುಖವಾಗಿ ಹೆಚ್ಚಿನವರ ಅಭಿಪ್ರಾಯದಂತೆ ಇಂದಿನ ಕಾಲದಲ್ಲಿ ಯಕ್ಷಗಾನಕ್ಕೆ ಪ್ರೇಕ್ಷಕರ ಕೊರತೆ ಎದುರಾಗಿಲ್ಲ ಎಂದು ಹೇಳಬಹುದಾಗಿದೆ. ಆದರೆ ಪ್ರೇಕ್ಷಕರಲ್ಲಿ ಕೆಲವೊಂದು ಬದಲಾವಣೆಗಳಾಗಿರುವುದನ್ನು ಕಾಣಬಹುದು. ಇಂದು ಜನರ ಕೆಲಸ ಒತ್ತಡಗಳು, ವಿಭಕ್ತ ಕುಟುಂಬಗಳು ಮೊದಲಾದ ಕಾರಣಗಳಿಂದ ಇಡೀರಾತ್ರಿ ಯಕ್ಷಗಾನವನ್ನು ನೋಡುವವರ ಸಂಖ್ಯೆಯಲ್ಲಿ ವ್ಯತ್ಯಾಸಗಳಾಗಿವೆ.

- **ಯಕ್ಷಗಾನದಲ್ಲಿ ಸಾಂಪ್ರದಾಯಿಕತೆ/ಪರಂಪರೆ ಮರೆಯಾಗುತ್ತಿರುವ ಕುರಿತು**

ಯಕ್ಷಗಾನ ವೃತ್ತಿಕಲಾವಿದರಲ್ಲಿಯೇ ಯಕ್ಷಗಾನ ಸಾಂಪ್ರದಾಯಿಕತೆ, ಹಳೆಯ ಪರಂಪರೆಯ ಮರೆಯಾಗುತ್ತಿರುವುದರ ಬಗೆಗೆ ತಿಳಿದಾಗ ಹೆಚ್ಚಿನ ಕಲಾವಿದರು ಬಹುತೇಕ ಅಲ್ಲದಿದ್ದರೂ ಕೆಲವು ಅಂಶಗಳು ಕಡಿಮೆಯಾಗಿದೆ ಎಂದಿದ್ದಾರೆ. ಇಂದಿನ ಆಧುನಿಕತೆಯ ಸೊಗಡಿನಲ್ಲೂ ಯಕ್ಷಗಾನವು ತನ್ನ ಪರಂಪರೆ ಮತ್ತು ಸಾಂಪ್ರದಾಯಿಕ ಅಂಶಗಳಿಂದಾಗಿ. ಆದರೆ ಕಾಲಕ್ಕೆ ತಕ್ಕಂತೆ ಇತ್ತೀಚೆಗೆ ಕೆಲವು ವೇಷಭೂಷಣಗಳಲ್ಲಿ ಸ್ವಲ್ಪ ಬದಲಾವಣೆಯಾಗಿರುವುದನ್ನು ನಾವು ಗಮನಿಸಬಹುದಾಗಿದೆ. ಅಲ್ಲದೆ ಯಕ್ಷಗಾನ ರಂಗ ಸಂಪ್ರದಾಯದಲ್ಲೂ ಪೂರ್ವರಂಗ ಕುಣಿತ ಸೇರಿದಂತೆ ಹಲವು ಅಂಶಗಳು ಮರೆಯಾಗಿವೆ. ಕಟೀಲು ಸೇರಿದಂತೆ ಕೆಲವೊಂದು ಮೇಳಗಳು ರಾತ್ರಿಯಿಡೀ ಪ್ರದರ್ಶನ ನೀಡಿದರೆ ಕೆಲವು ಇತರ ಮೇಳಗಳು ಕಾಲಮಿತಿ ಪ್ರದರ್ಶನಗಳನ್ನು ನೀಡುತ್ತಿವೆ. ಹೀಗೆ ಯಕ್ಷಗಾನ ಕಲೆಯಲ್ಲಿ ಸಾಂಪ್ರದಾಯಿಕತೆಯ ಅಂಶಗಳು ಆಧುನಿಕತೆಗೆ ತಕ್ಕಂತೆ ಮತ್ತು ಜನರ ಅಭಿರುಚಿಗೆ ತಕ್ಕಂತೆ ಸ್ವಲ್ಪ ಬದಲಾವಣೆಯಾಗಿದೆ ಎಂಬುದನ್ನು ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ.

- **ಟೆಂಟ್ ಮೇಳಗಳ ದುಸ್ಥಿತಿಗೆ ಕಾರಣ**

ಯಕ್ಷಗಾನವು ರಂಗು ಕಳೆದುಕೊಂಡಿದ್ದ ಕಾಲದಲ್ಲಿ ಟೆಂಟ್ ಯಕ್ಷಗಾನವು ಆರಂಭಗೊಂಡು ಯಕ್ಷಗಾನ ಕೇತ್ರದಲ್ಲಿ ಸಂಚಲನವನ್ನು ಮೂಡಿಸಿತ್ತು. ಆದರೆ ಇತ್ತೀಚೆಗೆ ಟೆಂಟ್ ಮೇಳವು ಕಡಿಮೆಯಾಗಿ ತೆಂಕಿನಲ್ಲೇ ಒಂದೇ ಒಂದು ಟೆಂಟ್ ಮೇಳಗಳಿಲ್ಲ. ಈ ಟೆಂಟ್ ಮೇಳಗಳ ದುಸ್ಥಿತಿಗೆ ಕಾರಣಗಳನ್ನು

ಶೋಧಿಸುತ್ತಾ ಹೋದರೆ ಪ್ರಮುಖವಾಗಿ ಮಾಹಿತಿದಾರರ ಅಭಿಪ್ರಾಯದಂತೆ ಪ್ರತಿಶತ 62.78ರಷ್ಟು ಮಾಹಿತಿದಾರರು ಟೆಂಟ್ ಮೇಳಗಳ ಯಕ್ಷಗಾನಗಳಿಗೆ ಕಲೆಕ್ಷನ್ ಹಣ ಕಡಿಮೆಯಾಗುತ್ತಾ ಬಂದಿರುವುದೇ ಕಾರಣ ಎಂದು ಹೇಳಿದರೆ, ಪ್ರತಿಶತ 2.22ರಷ್ಟು ಕಲಾವಿದರು ಆ ಕಾಲದಲ್ಲಿ ನಾಟಕ,ಸಿನಿಮಾ, ಟಿ.ವಿ ಸೇರಿದಂತೆ ಆಧುನಿಕ ಮಾಧ್ಯಮಗಳ ಪ್ರಭಾವದಿಂದ, ಪ್ರತಿಶತ 21.11ರಷ್ಟು ಮಾಹಿತಿದಾರರು ಯಕ್ಷಗಾನ ಕ್ಷೇತ್ರದಲ್ಲಿ ಹರಕೆ ಮೇಳಗಳ ಪ್ರಭಾವದಿಂದ, ಪ್ರತಿಶತ 2.22ರಷ್ಟು ಮಾಹಿತಿದಾರರು ಕಲಾವಿದರ ಕೊರತೆ, ಪ್ರತಿಶತ 8.89ರಷ್ಟು ಕಲಾವಿದರು ಟೆಂಟ್ ಮೇಳಗಳ ದುಬಾರಿ ವೆಚ್ಚ, ಪ್ರತಿಶತ 0.56ರಷ್ಟು ಕಲಾವಿದರು ಹವ್ಯಾಸಿ ತಂಡಗಳು ಹೆಚ್ಚಿದ ಪ್ರಭಾವದಿಂದ, ಪ್ರತಿಶತ 1.11ರಷ್ಟು ಮಾಹಿತಿದರರು ಜನರ ಸಮಯದ ಒತ್ತಡದಿಂದಾಗಿ ಆಟ ನೋಡುವವರ ಸಂಖ್ಯೆ ಕಡಿಮೆಯಾದ ಕಾರಣದಿಂದ ಎಂದು ಕಾರಣ ನೀಡಿದ್ದಾರೆ. ಪ್ರಮುಖವಾಗಿ ಗಮನಿಸುವುದಾದರೆ ಯಕ್ಷಗಾನದ ಟೆಂಟ್ ಮೇಳಗಳ ದುಸ್ಥಿತಿಗೆ ಕಲೆಕ್ಷನ್(ಧನಸಂಗ್ರಹ) ಕಡಿಮೆಯಾಗಿರುವುದೇ ಪ್ರಮುಖ ಕಾರಣ ಎಂದು ಹೆಚ್ಚಿನ ಮಾಹಿತಿದಾರರು ಗುರುತಿಸಿರುವುದು ಅಧ್ಯಯನದಲ್ಲಿ ಕಂಡುಬಂದಿದೆ. ಆಧುನಿಕ ಕಾಲಘಟ್ಟದಲ್ಲಿ ಬೇರೆ ಬೇರೆ ಕಾರಣಗಳಿಂದ ಟೆಂಟ್ ಮೇಳಗಳಿಗೆ ಕಲೆಕ್ಷನ್ (ಧನಸಂಗ್ರಹ) ಕಡಿಮೆಯಾಗಿರುವುದೇ ದುಸ್ಥಿತಿಗೆ ಕಾರಣವಾಗಿದೆ ಎಂದು ತಿಳಿದುಬರುತ್ತದೆ. ಇಲ್ಲಿ ಪ್ರಮುಖವಾಗಿ ಗಮನಿಸುವುದಾದರೆ ಯಕ್ಷಗಾನವು ಸೋತಿದ್ದ ಕಾಲದಲ್ಲಿ ಟೆಂಟ್ ಮೇಳವು ಆರಂಭವಾಗಿ ಕಲಾವಿದರ ಬಾಳಿನಲ್ಲಿಯೂ ಆಶಾಕಿರಣ ಮೂಡಿಸಿತ್ತು. ಆದರೆ ಆದರೆ ಇದೀಗ ಮತ್ತೆ ಕಾಲ ಬದಲಾಗಿ ಟೆಂಟ್ ಮೇಳಗಳು ಅಳಿವಿನತ್ತ ಹೆಜ್ಜೆ ಹಾಕಿದ್ದು ಯಕ್ಷಗಾನ ಕ್ಷೇತ್ರದಲ್ಲಿ ಹೊಸ ಹೊಸ ಬೆಳವಣಿಗೆಗಳು ನಡೆಯುತ್ತಿರುವುದನ್ನು ಕಾಣಬಹುದು.

- **ಕಾಲಮಿತಿ ಪ್ರದರ್ಶನದ ಅಗತ್ಯತೆ ಕುರಿತು**

ಬೇರೆ ಬೇರೆ ಕಾರಣಗಳಿಂದ ಇಂದು ಯಕ್ಷಗಾನದ ಪ್ರದರ್ಶನದ ಅವಧಿಯ ವಿಷಯದಲ್ಲಿ ಬದಲಾವಣೆಗಳಾಗುತ್ತಿವೆ. ಬೆಳಗಿನ ವರೆಗೆ ನಡೆಯುವ ಯಕ್ಷಗಾನ ಇಂದು ಕೆಲವು ಮೇಳಗಳಲ್ಲಿ ಕಾಲಮಿತಿಯಲ್ಲಿ ಪ್ರದರ್ಶನವಾಗುತ್ತಿವೆ. ಕಾಲಮಿತಿಯ ಯಕ್ಷಗಾನವು ಇಂದಿನ ಕಾಲಕ್ಕೆ ಅನುಕೂಲತೆಗಳನ್ನು ಒದಗಿಸಿಕೊಡುತ್ತದೆ. ಆದರೂ ಇದರಿಂದ ಹಲವಾರು ಅನಾನುಕೂಲತೆಗಳೂ ಗೋಚರಿಸುತ್ತವೆ. ಮಾಹಿತಿದಾರರ ಪೈಕಿ ಪ್ರತಿಶತ 45.00 ರಷ್ಟು ಕಲಾವಿದರು ಕಾಲಮಿತಿಯ ಅಗತ್ಯವಿದೆ ಎಂದಿದ್ದರೆ, ಪ್ರತಿಶತ 50.56 ರಷ್ಟು ಕಲಾವಿದರು ಪ್ರಸ್ತುತ ಕಾಲದಲ್ಲಿ ಕಾಲಮಿತಿಯ ಅಗತ್ಯವಿಲ್ಲವೆಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಒಟ್ಟಿನಲ್ಲಿ ಪರಂಪರೆ ಮತು ಸಂಪ್ರದಾಯದ ರೀತಿಯಲ್ಲಿ ಯಕ್ಷಗಾನವನ್ನು ಆಸ್ವಾಧಿಸುವವರು ಕಾಲಮಿತಿ ವಿರೋಧಿಸುತ್ತಾರೆ. ಹಾಗೆಯೇ ಇಂದಿನ ಯುವ ಕಲಾವಿದರು, ಯುವ ಪ್ರೇಕ್ಷಕರು ಕಾಲಮಿತಿ ಯಕ್ಷಗಾನಕ್ಕೇ ಹೆಚ್ಚಿನ ಒಲವು ತೋರಿಸುತ್ತಿರುವುದನ್ನು ಗಮನಿಸಬಹುದಾಗಿದೆ.

- **ಆಧುನಿಕತೆ ಮತ್ತು ಯಕ್ಷಗಾನ**

ಯಕ್ಷಗಾನವು ಪರಂಪರೆಯಿಂದ ಬಂದ ಕಲೆಯಾಗಿದೆ. ಆದರೆ ಇಂದಿನ ಸಿನಿಮಾ, ಟಿವಿ, ಮೊಬೈಲ್ ಸೇರಿದಂತೆ ಆಧುನಿಕ ತಂತ್ರಜ್ಞಾನದ ನಡುವೆ ಯಕ್ಷಗಾನವನ್ನು ಮತ್ತಷ್ಟು ಬೆಳೆಸುವ ಶ್ರೀಮಂತಗೊಳಿಸುವ ಬಗೆಗೆ ಪ್ರತಿಶತ 90.00 ಕಲಾವಿದ ಮಾಹಿತಿದಾರರು ಯಕ್ಷಗಾನವನ್ನು ಇನ್ನಷ್ಟು ಶ್ರೀಮಂತಗೊಳಿಸಲು ಸಾಧ್ಯವಿದೆ ಎಂದಿದ್ದಾರೆ. ಪ್ರಮುಖವಾಗಿ ಯಕ್ಷಗಾನಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡುವುದರಿಂದ, ಶಾಲಾ ಕಾಲೇಜುಗಳಲ್ಲಿ ತರಬೇತಿ, ಕೋರ್ಸ್, ಸಂಘ ಸಂಸ್ಥೆಗಳಿಂದ ಸರ್ಕಾರದಿಂದ ಯಕ್ಷಗಾನಕ್ಕೆ, ಕಲಾವಿದರಿಗೆ ಪ್ರೋತ್ಸಾಹ, ಸೌಲಭ್ಯಗಳು ವಿಸ್ತರಿಸಿದರೆ ಖಂಡಿತವಾಗಿಯೂ ಯಕ್ಷಗಾನವನ್ನು ಮತ್ತಷ್ಟು ಶ್ರೀಮಂತಗೊಳಿಸಲು ಸಾಧ್ಯವಿದೆ ಎಂಬ ಅಭಿಪ್ರಾಯಗಳು ಯಕ್ಷಗಾನ ಕಲೆಯನ್ನು ಮುನ್ನಡೆಸುತ್ತಿರುವ ಕಲಾವಿದರರ ವಲಯದಿಂದ ಕೇಳಿಬರುತ್ತದೆ.

- **ಯಕ್ಷಗಾನಕ್ಕೆ ಸಂಘ ಸಂಸ್ಥೆಗಳ ಪ್ರೋತ್ಸಾಹ**

ಯಕ್ಷಗಾನದ ಬೆಳವಣಿಗೆಯಲ್ಲಿ ಸಂಘ ಸಂಸ್ಥೆಗಳ ಪಾತ್ರವು ಬಹಳ ಪ್ರಮುಖವಾಗಿ ಕಾಣುತ್ತದೆ. ಒಂದು ಸಂದರ್ಭದಲ್ಲಿ ತೀರ ಶೋಚನೀಯವಾಗಿದ್ದ ಯಕ್ಷಗಾನ ಕಲೆಯು ಇಂದು ಸಮಾಜದ ವಿವಿಧ ಸಂಘ ಸಂಸ್ಥೆಗಳ ಪ್ರಭಾವದಿಂದಾಗಿ ಬೆಳೆದುನಿಂತು ಮುನ್ನಡೆಯುತ್ತಿವೆ. ಪ್ರಮುಖವಾಗಿ ಅಧ್ಯಯನದಲ್ಲಿ ಗಮನಿಸಿದ ಹಾಗೆ ಸಂಘ ಸಂಸ್ಥೆಗಳು ಕಲಾವಿದರನ್ನು ಗುರುತಿಸಿ ಗೌರವಿಸುವ ಕೆಲಸ ಮಾಡುತ್ತಿವೆ, ಯಕ್ಷಗಾನ ಪ್ರದರ್ಶನಕ್ಕೆ ಅವಕಾಶ ಪ್ರೋತ್ಸಾಹ, ಬಡ, ಅಸೌಖ್ಯ ಕಲಾವಿದರಿಗೆ ಸಹಾಯ ಹೀಗೆ ಬೇರೆ ಬೇರೆ ರೀತಿಯಲ್ಲಿ ಸಂಘ ಸಂಸ್ಥೆಗಳು ಯಕ್ಷಗಾನಕ್ಕೆ ಪ್ರೋತ್ಸಾಹಕ ಶಕ್ತಿಯಾಗಿ ನಿಂತಿದೆ ಎಂದು ಹೇಳಬಹುದಾಗಿದೆ.

ಇತ್ತೀಚಿನ ಕಾಲಘಟ್ಟದಲ್ಲಿ ಯಕ್ಷಗಾನ ಕ್ಷೇತ್ರದಲ್ಲಿ ಹವ್ಯಾಸಿ, ಮಹಿಳಾ, ಮಕ್ಕಳ ತಂಡಗಳು ಹೆಚ್ಚುತ್ತಿದ್ದು, ವೃತ್ತಿ ಮೇಳಗಳೊಂದಿಗೆ ಇಂತಹ ಹವ್ಯಾಸಿ ತಂಡಗಳಿಂದ ಪ್ರದರ್ಶನಗಳು ನೂರಾರು ಕಡೆಗಳಲ್ಲಿ ನಡೆಯುತ್ತಿರುತ್ತವೆ. ಇಂತಹ ಹವ್ಯಾಸಿ ತಂಡಗಳು ಹೆಚ್ಚುವುದಕ್ಕೆ ಪ್ರಮುಖವಾಗಿ ಸಂಘಸಂಸ್ಥೆಗಳ ಪ್ರೋತ್ಸಾಹ, ಯಕ್ಷಗಾನಕ್ಕೆ ಹೆಚ್ಚುತ್ತಿರುವ ಬೇಡಿಕೆಗಳು, ಆಧುನಿಕ ಮಾಧ್ಯಮಗಳು ಹಾಗೂ ಹೆಚ್ಚಿನ ಪ್ರಚಾರಗಳು, ಯಕ್ಷಗಾನಕ್ಕೆ ಬಯಲಾಟ ಅಕಾಡೆಮಿಯಂತಹ ಸರ್ಕಾರದ ಸಂಸ್ಥೆಗಳ ಪ್ರೋತ್ಸಾಹದ ಕಾರಣಗಳಿಂದ ಸಾಧ್ಯವಾಗಿದೆ ಎಂಬುವುದನ್ನು ಈ ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ.

- **ಕಮ್ಮಟ, ಉಪನ್ಯಾಸ, ಸಂಶೋಧನೆಗಳು ಯಕ್ಷಗಾನ ಬೆಳವಣಿಗೆಗೆ ಪೂರಕವಾಗಿದೆಯೇ ಕುರಿತು**

ಯಕ್ಷಗಾನವು ಇಂದು ಅಕಾಡೆಮಿಕ್ ವಲಯದಲ್ಲಿಯೂ ಗುರುತಿಸಲ್ಪಟ್ಟಿರುವ ಕಲೆಯಾಗಿದೆ. ಹಲವಾರು ಶಾಲಾ ಕಾಲೇಜುಗಳ ಮುಖಾಂತರ ತರಬೇತಿ ಚಟುವಟಿಕೆಗಳು ನಡೆಯುತ್ತಿವೆ. ಯಕ್ಷಗಾನ ಅಧ್ಯಯನ, ಸಂಶೋಧನೆಗೆ ಸಂಬಂಧಿಸಿದಂತೆ ವಿಶ್ವವಿದ್ಯಾಲಯಗಳು, ಯಕ್ಷಗಾನ ಅಧ್ಯಯನ ಕೇಂದ್ರಗಳು, ಯಕ್ಷಗಾನ ಬಯಲಾಟ ಅಕಾಡೆಮಿ ಸೇರಿದಂತೆ ಹಲಾವರು ಸಂಸ್ಥೆಗಳ ಮೂಲಕ ಅಧ್ಯಯನ, ಕಮ್ಮಟ, ಉಪನ್ಯಾಸ, ಸಂಶೋಧನೆಗೆ ಹೆಚ್ಚು ಒತ್ತು ನೀಡಿ ಕಾರ್ಯೋನ್ಮುಖವಾಗಿದೆ. ಆದರೆ ಸಂಶೋಧನೆ, ಉಪನ್ಯಾಸ, ಕಮ್ಮಟ ಅಧ್ಯಯನಗಳು ಯಕ್ಷಗಾನ ಬೆಳವಣಿಗೆಗೆ ಪರಿಣಾಮಕಾರಿಯಾಗಿದೆಯೇ ಎಂಬುದರ ಬಗೆಗೆ ಯಕ್ಷಗಾನ ಕಲಾವಿದರು ಈ ಬಗ್ಗೆ ಪ್ರತಿಶತ 34.44 ರಷ್ಟು ಕಲಾವಿದರು ಯಕ್ಷಗಾನದ ಬೆಳವಣಿಗೆಯಲ್ಲಿ ಉಪನ್ಯಾಸ, ಅಧ್ಯಯನಗಳು ಪರಿಣಾಮ ಬೀರುತ್ತವೆ ಎಂದು ಹೇಳಿದ್ದರೆ ಪ್ರತಿಶತ 9.44 ರಷ್ಟು ಜನರು ಪರಿಣಾಮ ಬೀರುವುದಿಲ್ಲ ಎಂದಿದ್ದಾರೆ. ಹಾಗೆಯೇ 55.00 ರಷ್ಟು ಕಲಾವಿದರು ಶೈಕ್ಷಣಿಕವಲಯ ಮಟ್ಟದಲ್ಲಿ ಪ್ರಚಾರ ಪಡೆದು ಯಕ್ಷಗಾನದ ಬೆಳವಣಿಗೆಯಲ್ಲಿ ಸ್ವಲ್ಪ ಮಟ್ಟಿನ ಪರಿಣಾಮ ಬೀರಬಹುದು ಎಂದಿದ್ದಾರೆ. ಇದಕ್ಕೆ ಕಾರಣಗಳನ್ನು ಗಮನಿಸಿದಾಗ ಯಕ್ಷಗಾನದ ವಿಷಯದಲ್ಲಿ ಉಪನ್ಯಾಸ, ಅಧ್ಯಯನಗಳು ಅದು ಕಾರ್ಯರೂಪಕ್ಕೆ ಬರುತ್ತಿಲ್ಲ, ಇದರಿಂದ ಕಲಾವಿದರಿಗ ಪ್ರಯೋಜನವಾಗುತ್ತಿಲ್ಲ ಎಂದು ಅಭಿಪ್ರಾಯಪಡುತ್ತಾರೆ. ಆದರೆ ಯಕ್ಷಗಾನವು ಶೈಕ್ಷಣಿಕವಾಗಿಯೂ ಮುನ್ನಡೆದರೆ ಯಕ್ಷಗಾನಕ್ಕೆ ನೇರವಾಗಿ ಅಲ್ಲದಿದ್ದರೂ ಪರೋಕ್ಷವಾಗಿ ಯಕ್ಷಗಾನದ ಬೆಳವಣಿಗೆಯಲ್ಲಿ ಬಹಳಷ್ಟು ಪ್ರಯೋಜನಕಾರಿಯಾಗಲಿದೆ. ಬಯಲು ವಿಶ್ವವಿದ್ಯಾಲಯ ಎಂದೇ ಗುರುತಿಸಲ್ಪಡುವ ಯಕ್ಷಗಾನವು ಅಕಾಡೆಮಿಕ್ ಶಿಸ್ತುವಿನ ಮೂಲಕ ಬೆಳೆದರೆ ಯಕ್ಷಗಾನವನ್ನು ರಾಷ್ಟ್ರಮಟ್ಟದಲ್ಲಿ ಅಥವಾ ಅಂತರಾಷ್ಟ್ರೀಯ ಮಟ್ಟದಲ್ಲಿ ಬೆಳೆದು, ಈ ಕಲೆಗೆ ಮನ್ನಣೆ ಒದಗಿಸಿಕೊಡುವಲ್ಲಿ ಇದು ಖಂಡಿತಾ ಪರಿಣಾಮವನ್ನು ಬೀರುತ್ತವೆ.

- **ಕಲಾವಿದರ ಮಕ್ಕಳು ಯಕ್ಷಗಾನದ ಹವ್ಯಾಸಿ/ವೃತ್ತಿಕಲಾವಿದನಾಗುವ ಬಗೆಗೆ**

ಯಕ್ಷಗಾನ ಕಲಾವಿದ ಎನ್ನುವ ಬಗ್ಗೆ ಸಮಾಜದಲ್ಲಿ ದೊಡ್ಡ ಮಟ್ಟದ ಮನ್ನಣೆ, ಮೌಲ್ಯವು ದೊರಕಿಲ್ಲ. ಆದ್ದರಿಂದ ತಮಗೆ ಎದುರಾಗಿರುವ ಕಷ್ಟದ ದಿನಗಳು ತಮ್ಮ ಮಕ್ಕಳಿಗೆ ಬರುವುದು ಬೇಡ ಎಂಬುದೇ

ಹೆಚ್ಚಿನ ಕಲಾವಿದರ ಅಭಿಪ್ರಾಯವಾಗಿದೆ. ಆದರೂ ಯಕ್ಷಗಾನ ಕಲೆಯ ಬಗ್ಗೆ ತಿಳಿದುಕೊಂಡಿರಬೇಕು, ಕಲೆ ಮುಂದುವರಿಯಬೇಕು ಎಂಬ ಹಿನ್ನೆಲೆಯಲ್ಲಿ ತಮ್ಮ ಮಕ್ಕಳು ಹವ್ಯಾಸಿಯಾಗಿ ಮುಂದುವರಿಯುವುದೇ ಉತ್ತಮ ಎಂಬ ಅಭಿಪ್ರಾಯಗಳು ಯಕ್ಷಗಾನ ಕಲಾವಿದರಿಂದಲೇ ಕೇಳಿ ಬಂದಿರುವುದನ್ನು ಅಧ್ಯಯನದಲ್ಲಿ ಗಮನಿಸಬಹುದಾಗಿದೆಯಕ್ಷಗಾನವು ಇಂದು ಶ್ರೀಮಂತಕಲೆಯಾಗಿ ಅಲ್ಲದೆ ಪ್ರದರ್ಶನವು ಕೂಡಾ ವಿಜ್ರಂಭಣೆಯಿಂದ ನಡೆಯುವುದನ್ನು ನೋಡಿದರೆ ಕಲಾವಿದರು ಕೂಡಾ ಉತ್ತಮ ಸ್ಥಿತಿಯಲ್ಲಿದ್ದಾರೆ ಎಂದು ಊಹಿಸುವುದು ತಪ್ಪಾಗುತ್ತದೆ. ಹಿಂದಿಗಿಂತ ಇಂದು ಕಲಾವಿದರ ಸ್ಥಿತಿಗತಿ, ಮೇಳದ ಪಯಣದಲ್ಲಿ ಅವರು ಪಡುತ್ತಿದ್ದ ಸಂಕಷ್ಟಗಳು ಕಡಿಮೆಯಾಗಿದೆ. ಆದರೂ ಕೂಡಾ ವೃತ್ತಿಪರ ಯಕ್ಷಗಾನ ಕಲಾವಿದರೂ ಇಂದಿಗೂ ಆರ್ಥಿಕವಾಗಿ, ಸಾಮಾಜಿಕವಾಗಿ ಸಂಕಷ್ಟದಲ್ಲಿರುವುದನ್ನು ಗಮನಿಸಬಹುದಾಗಿದೆ.

ಯಕ್ಷಗಾನದಲ್ಲಿ ಬದಲಾವಣೆಗಳು ಮತ್ತು ಸ್ಥಿತ್ಯಂತರಗಳು ಕಾಣಿಸಿಕೊಳ್ಳಲು ಸಾಮಾಜಿಕ ಅಂಶಗಳು ಕೂಡಾ ಕಾರಣವಾಗುತ್ತವೆ. ಕಲಾವಿದರ ಕೌಟುಂಬಿಕ ಸ್ವರೂಪದಲ್ಲಿ ಆಗಿರುವ ಬದಲಾವಣೆಗಳು, ಆಧುನಿಕ ಶಿಕ್ಷಣ ಮತ್ತು ಉದ್ಯೋಗಾವಕಾಶಗಳು, ಮೇಳಗಳಲ್ಲಿ ಹೂಡಲಾಗಿರುವ ಬಂಡವಾಳ, ಪ್ರೇಕ್ಷಕರಲ್ಲಿ ಬದಲಾದ ಅಭಿರುಚಿ, ಸಂಘಟನೆಗಳ ಪ್ರೋತ್ಸಾಹ– ಮೊದಲಾದ ಸಾಮಾಜಿಕ ಕಾರಣಗಳಿಂದಾಗಿ ಯಕ್ಷಗಾನದ ಸ್ವರೂಪ ಮತ್ತು ಕಲಾವಿದರ ಬದುಕಿನಲ್ಲಿ ಬದಲಾವಣೆಗಳು ಸಂಭವಿಸಿವೆ. ಯಕ್ಷಗಾನ, ಯಕ್ಷಗಾನ ವೃತ್ತಿ ಕಲಾವಿದರು ಮತ್ತು ಸಮಾಜ ಇವುಗಳ ನಡುವೆ ನೇರ ಮತ್ತು ನಿಕಟ ಸಂಬಂಧವಿರುವುದು ಸ್ಪಷ್ಟ.

ಉಪಸಂಹಾರ

ಯಕ್ಷಗಾನವು ಇಂದು ಶ್ರೇಷ್ಠ ಕಲೆಯಾಗಿ ಗುರುತಿಸಿಕೊಂಡು ಕಾಲಕ್ಕೆ ತಕ್ಕಂತಹ ಕೆಲವು ಬದಲಾವಣೆ, ಸಂಪ್ರದಾಯದ ಬದ್ಧತೆಯೊಂದಿಗೆ ಹಲವು ಏರುಪೇರುಗಳನ್ನು ದಾಟಿ ಬಂದು ಶ್ರೇಷ್ಠತೆಯ ಸ್ಥಾನಕ್ಕೆ ಬೆಳೆದುನಿಂತಿದೆ. ಮೇಳಗಳ ಸಂಖ್ಯೆಯೂ ಇಂದು ಹೆಚ್ಚಾಗಿದೆ, ಸಾವಿರಾರು ಕಲಾವಿದರು ಕಲಾಸೇವಕರಾಗಿ ದುಡಿದು ಬದುಕು ಸಾಗಿಸುತ್ತಿದ್ದಾರೆ. ಕಲಾವಿದರ ಕಲಾಪ್ರೇಮ, ಪರಿಶ್ರಮದಿಂದಾಗಿ ಯಕ್ಷಗಾನ ಕಲೆಯು ಶ್ರೀಮಂತವಾಗಿ ಬೆಳೆದಿದ್ದರೂ ಕಲೆಯನ್ನೇ ಜೀವಾಳವನ್ನಾಗಿಸಿಕೊಂಡ ಕಲಾವಿದನ ಬದುಕು ಹಸನುಗೊಂಡಿಲ್ಲ. ಯಕ್ಷಗಾನ ಕಲಾವಿದರ ಸಾಮಾಜಿಕ ಸ್ಥಿತಿಗತಿಯನ್ನು ಗಮನಿಸಿದಾಗ ಹಿಂದಿನ ಕಾಲಘಟ್ಟದ ಕಲಾವಿದರ ಶೋಚನೀಯ ಬದುಕಿಗಿಂತ ಅಭಿವೃದ್ಧಿ ಕಂಡಿದೆಯಾದರೂ ಪ್ರಸ್ತುತ ಕಾಲಘಟ್ಟದಲ್ಲಿಯೂ ಯಕ್ಷಗಾನ ವೃತ್ತಿ ಕಲಾವಿದರಿಗೆ ಸಿಗುವ ಸಾಮಾಜಿಕ ಮೌಲ್ಯಗಳು, ಅವರ ಆರ್ಥಿಕ ಸ್ಥಾನಮಾನ, ಮಾನ್ಯತೆ ಕಡಿಮೆಯೇ ಇದೆ ಎಂಬುದನ್ನು ಅಧ್ಯಯನದಲ್ಲಿ ಗಮನಿಸಲಾಗಿದೆ.

ಪ್ರಸ್ತುತ ಕಾಲದಲ್ಲಿ ಸಮಾಜದಲ್ಲಿ ಅವಿಭಕ್ತ ಕುಟುಂಬಗಳು ಮರೆಯಾಗುತ್ತಿರುವಂತೆಯೇ ಯಕ್ಷಗಾನ ಕಲಾವಿದರ ಕುಟುಂಬವೂ ವಿಭಕ್ತ ಕುಟುಂಬಗಳಾಗಿ ಪರಿವರ್ತನೆಯಾಗಿದ್ದು, ಕಲಾವಿದರಿಗೆ ಕೌಟುಂಬಿಕ ಜವಬ್ಧಾರಿಯು ಹೆಚ್ಚಾಗಿರುವುದು ಕಂಡು ಬರುತ್ತದೆ. ಯಕ್ಷಗಾನವನ್ನು ಕಲಿತು ಯಕ್ಷಗಾನ ಕಲಾವಿದನಾಗಿ ವೃತ್ತಿಗಿಳಿಯುವ ಸಮಯದಲ್ಲಿ ಯಕ್ಷಗಾನದಲ್ಲಿ ಸಂಪಾದನೆಯ ಕೊರತೆ, ರಾತ್ರಿಯ ವೇಳೆಯ ಕಠಿಣ ಕೆಲಸ ಮೊದಲಾದ ಕಾರಣಗಳಿಂದ ಹೆಚ್ಚಿನ ಕಲಾವಿದರ ಕುಟುಂಬಸ್ಥರು, ಪರಿಚಿತರು ಇಂದು ಕೂಡಾ ಅಡ್ಡಿಪಡಿಸುವುದನ್ನು ಕಾಣಬಹುದು ಹಾಗೂ ಕೌಟುಂಬಿಕವಾಗಿ ಕಲಾವಿದರ ಮೌಲ್ಯವು ಸುಧಾರಣೆಯಾಗಿಲ್ಲ ಎಂಬುದನ್ನು ಅಧ್ಯಯನದಲ್ಲಿ ಗಮನಿಸಲಾಗಿದೆ. ಹಿಂದೆ ಕಲಾವಿದರಲ್ಲಿ ಅನಕ್ಷರಸ್ಥರೇ ಹೆಚ್ಚಿನವರಿದ್ದರು. ಆದರೆ ಇಂದು ಯಕ್ಷಗಾನ ಕಲಾವಿದರಲ್ಲಿ ಹೆಚ್ಚಿನವರು ಅಕ್ಷರಸ್ಥರೇ ಆಗಿದ್ದು ಬದಲಾವಣೆಯನ್ನು ಕಾಣಬಹುದು. ಯಕ್ಷಗಾನ ರಂಗದಲ್ಲಿ ದುಡಿಯುವವರಲ್ಲಿ ಹೆಚ್ಚಿನವರು ಪ್ರಾಥಮಿಕ

ಮತ್ತು ಪ್ರೌಢಶಾಲಾ ಶಿಕ್ಷಣವನ್ನು ಪಡೆದವರೇ ಹೆಚ್ಚಾಗಿ ಕಂಡು ಬರುತ್ತಿದ್ದಾರೆ. ಪ್ರಸ್ತುತ ಕಾಲದಲ್ಲಿ ಪದವಿ, ಸ್ನಾತಕೋತ್ತರ ಪದವಿ ಪಡೆದವರು ಕೂಡಾ ಯಕ್ಷಗಾನದತ್ತ ಆಕರ್ಷಿತರಾಗಿ ಹವ್ಯಾಸಿ ಕಲಾವಿದರು ಮಾತ್ರವಲ್ಲ ವೃತ್ತಿಕಲಾವಿದರಾಗಿಯೂ ತೊಡಗಿಸಿಕೊಳ್ಳುತ್ತಿರುವುದು ಅಧ್ಯಯನದಲ್ಲಿ ಕಂಡು ಬಂದಿದೆ.

ಹಿಂದೆ ಯಕ್ಷಗಾನದಲ್ಲಿ ಎಲ್ಲಾ ಜಾತಿಯ ಕಲಾವಿದರಿಗೂ ಅವಕಾಶವಿರಲಿಲ್ಲ. ಹಿಂದುಳಿದ ವರ್ಗದ ಕಲಾವಿದರೇ ಅಧಿಕವಿದ್ದರು. ಕೆಳವರ್ಗದ ಕಲಾವಿದರಿಗೆ ಅವಕಾಶಗಳು ಕಡಿಮೆಯಿದ್ದವು. ಅಲ್ಲದೆ ಯಕ್ಷಗಾನಕ್ಕೆ ಸಾಮಾಜಿಕ ಮೌಲ್ಯಗಳು ಕಡಿಮೆಯಿದ್ದ ಕಾಲದಲ್ಲಿ ಮೇಲ್ಜಾತಿಯ ಅಂದರೆ ಬ್ರಾಹ್ಮಣ ಕಲಾವಿದರಿಗೆ ಯಕ್ಷಗಾನ ನಿಷೇದವಾಗಿತ್ತು. ಆದರೆ ಪ್ರಸ್ತುತ ಕಾಲದಲ್ಲಿ ಯಕ್ಷಗಾನ ಪ್ರದರ್ಶನದಲ್ಲಿ ಎಲ್ಲಾ ಜಾತಿಯ ಕಲಾವಿದರೂ ಯಕ್ಷಗಾನದಲ್ಲಿ ತೊಡಗಿಸಿಕೊಂಡಿರುವುದನ್ನು ಕಾಣಬಹುದು. ಅಲ್ಲದೆ ಅನ್ಯ ಧರ್ಮದ ಕೆಲವು ಕಲಾವಿದರೂ ಇಂದು ಕಲಾವಿದರಾಗಿ ದುಡಿಯುತ್ತಿರುವ ಉದಾಹರಣೆಯನ್ನು ಕಾಣಬಹುದಾಗಿದೆ. ಆದರೂ ಯಕ್ಷಗಾನಗಳಲ್ಲಿ ಜಾತಿಯ ವಿಚಾರಗಳು ಬಹಿರಂಗವಾಗಿ ಕಾಣದಿದ್ದರೂ ಆಂತರಿಕವಾಗಿ ಕೆಲವೊಮ್ಮೆ ಪಾತ್ರ ಹಂಚಿಕೆ, ಅವಕಾಶಗಳ ಬಗೆಗೆ ಬೇಧಭಾವದ ಅಂಶಗಳು ಗೌಣವಾಗಿಯೇ ಉಳಿದುಕೊಂಡಿರುವುದನ್ನು ಗಮನಿಸಿಬಹುದಾಗಿದೆ. ಹೆಚ್ಚಿನ ಕಲಾವಿದರು ಒಂದು ಮೇಳದಿಂದ ಮತ್ತೊಂದು ಮೇಳಕ್ಕೆ ಪಲ್ಲಟವಾಗುತ್ತಾ ಇರುತ್ತಾರೆ. ಇಂತಹ ಪಲ್ಲಟಗಳು ಸಾಮಾನ್ಯವಾಗಿ ಹೆಚ್ಚಿನ ಅವಕಾಶಕ್ಕಾಗಿ, ಅಧಿಕ ಸಂಪಾದನೆಗಾಗಿ, ಮೇಳದಲ್ಲಿ ಸಮಸ್ಯೆಯಾದಾಗ, ವೈಯಕ್ತಿಕ ಸಮಸ್ಯೆಗಳು ಮೊದಲಾದ ಕಾರಣಗಳಿಂದ ಇಂದಿಗೂ ಹೆಚ್ಚಾಗಿ ನಡೆಯುತ್ತಿರುವುದನ್ನು ಅಧ್ಯಯನದಲ್ಲಿ ತಿಳಿದುಕೊಳ್ಳಲಾಗಿದೆ. ವಿಭಕ್ತ ಕುಟುಂಬಗಳು, ಸಾರಿಗೆ ಸಂಪರ್ಕ ವ್ಯವಸ್ಥೆಗಳು ಹೆಚ್ಚಿರುವ ಕಾರಣದಿಂದ ಹೆಚ್ಚಿನ ಕಲಾವಿದರು ದಿನಾ ಮನೆಗೆ ಹೋಗಿ ಬರುತ್ತಿದ್ದಾರೆ. ಇದಲ್ಲದೆ ವಾಹನ ವ್ಯವಸ್ಥೆ ಇಲ್ಲದ, ದೂರದ ಊರಿನಿಂದ, ಹಳ್ಳಿಗಳಿಂದ ಬರುವ ಕಲಾವಿದರು ಹೆಚ್ಚಾಗಿ ವಾರಕ್ಕೊಮ್ಮೆ, ಎರಡು ವಾರಕ್ಕೊಮ್ಮೆ ಅಥವಾ ತಿಂಗಳಿಗೊಮ್ಮೆ ಹೋಗಿಬರುವುದನ್ನು ಪಸ್ತುತಕಾಲಘಟ್ಟದಲ್ಲಿ ಕಾಣಬಹುದು. ಕೌಟುಂಬಿಕ ಅಥವಾ ಇತರ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿಕ್ಕೆ ದಿನಾ ಮನೆಗೆ ಹೋಗಿ ಬರುವವರಿಗೆ ಅನುಕೂಲವಾಗಿದೆ ಹಾಗೂ ವಾರಕ್ಕೊಮ್ಮೆ, ತಿಂಗಳಿಗೊಮ್ಮೆ ಬರುವ ಕಲಾವಿದರು ತೊಂದರೆ ಎದುರಿಸುತ್ತಿದ್ದಾರೆ. ರಾತ್ರಿಯಿಡೀ ಯಕ್ಷಗಾನವಿರುವುದರಿಂದ ಕಲಾವಿದರಿಗೆ ನಿದ್ದೆಯ ಅವಕಾಶಗಳು ಕಡಿಮೆ ಇತ್ತು. ಆದರೆ ಇಂದು ಹೆಚ್ಚಿನ ಕಲಾವಿದರು ಸ್ವಂತ ವಾಹನವನ್ನು ಒಳಗೊಂಡಿರುವುದರಿಂದ ತಮ್ಮ ಪಾತ್ರಗಳನ್ನು ಮುಗಿಸಿ ಮನೆಗೆ ಹೋಗಲು ಸಿಗುವ ಕಾರಣ ನಿದ್ದೆಗೂ ಅವಕಾಶ ಸಿಗುತ್ತಿದೆ. ಆದರೆ ಹಗಲಿನಲ್ಲಿ ಬೇರೆ ಉದ್ಯೋಗವನ್ನು ಮಾಡುವ ಕಲಾವಿದರು ನಿದ್ದೆಯ ಸಮಸ್ಯೆಯನ್ನು ಹೆಚ್ಚು ಅನುಭವಿಸುತ್ತಿದ್ದಾರೆ. ನಿದ್ದೆಗೆಡುವುದರಿಂದ ಕಲಾವಿದರ ಆರೋಗ್ಯದ ಮೇಲಾಗುವ ತೊಂದರೆಗಳನ್ನು ಗಮನಿಸಿದಾಗ ಪ್ರಮುಖವಾಗಿ ಅಧಿಕ ರಕ್ತದೊತ್ತಡ, ನಿಶಕ್ತಿ, ಮಾನಸಿಕ ತೊಂದರೆ ಅಥವಾ ಕಿರಿಕಿರಿ, ತಲೆನೋವು, ತಲೆಸುತ್ತು ಬರುವುದು, ವಾಂತಿ, ಪಿತ್ತ, ದೈಹಿಕ ಆಯಾಸ ಹೀಗೆ ಹಲವು ರೀತಿಯಲ್ಲಿ ಆರೋಗ್ಯದ ತೊಂದರೆಗಳು ಕಲಾವಿದರಿಗೆ ಎದುರಾಗುತ್ತದೆ.

ಕಲಾವಿದರ ಮದ್ಯಪಾನ ಅಥವಾ ಇತರ ವ್ಯಸನಗಳ ಬಗ್ಗೆ ತಿಳಿಯುವುದಾದರೆ ಯಕ್ಷಗಾನ ಕಲಾವಿದರೆಂದರೆ ದುಶ್ಚಟಗಳ ದಾಸರು ಎಂಬ ಒಂದು ರೀತಿಯ ತಾತ್ಸಾರ ಭಾವನೆಯೂ ಹಿಂದೆ ಸಮಾಜದಲ್ಲಿತ್ತು. ಪ್ರಸ್ತುತ ಕಾಲದಲ್ಲಿಯೂ ಯಕ್ಷಗಾನ ಕಲಾವಿದರಲ್ಲಿ ದುಶ್ಚಟಗಳ ಬಗ್ಗೆ ಜಾಗೃತಿ ಮೂಡಿದೆಯಾದರೂ ಬಹಳಷ್ಟು ಕಲಾವಿದರು ಮದ್ಯಪಾನ, ಬೀಡಿ, ಸಿಗರೇಟು, ತಂಬಾಕು ಸೇವನೆ, ಗುಟ್ಕಾ, ತಂಬಾಕು ಸಹಿತ ಎಲೆಅಡಿಕೆ ಸೇವನೆ ಮೊದಲಾದ ವ್ಯಸನಗಳಿಗೆ ಅಂಟಿಕೊಂಡಿರುವುದು ಅಧ್ಯಯನದಲ್ಲಿ ಕಂಡುಬಂದಿದೆ. ಯಕ್ಷಗಾನ ಕಲಾವಿದರಿಗೆ ಸಮಾಜದಲ್ಲಿ ಸಿಗುವ ಸಾಮಾಜಿಕ ಗೌರವಗಳ ಬಗೆಗೆ ಗಮನ ಹರಿಸಿದರೆ ಹಿಂದಿನ ಕಾಲಕ್ಕಿಂತ ಪ್ರಸ್ತುತ ಕಾಲಘಟ್ಟದ ಕಲಾವಿದರಿಗೆ ಹೆಚ್ಚಿನ ಗೌರವಗಳು, ಸಾಮಾಜಿಕ ಸ್ಥಾನಮಾನಗಳು ಒದಗಿಬರುವಂತೆ ಕಂಡರೂ ಯಕ್ಷಗಾನ ಕಲಾವಿದರಿಗೆ

ಮಹತ್ತರವಾದ ಸ್ಥಾನಮಾನ ಸಮಾಜದಲ್ಲಿ ಲಭಿಸಿಲ್ಲ ಹಾಗೂ ಪ್ರಸಿದ್ಧಿ ಪಡೆದ ಕಲಾವಿದರನ್ನು ಬಿಟ್ಟು ಉಳಿದ ಕಲಾವಿದರನ್ನು ತಾತ್ಸಾರ ಭಾವನೆಯಿಂದ ನೋಡುವ ಅಂಶಗಳನ್ನು ಕೂಡಾ ಅಧ್ಯಯನದಲ್ಲಿ ಗಮನಿಸಲಾಗಿದೆ.

ಹಿಂದಿನ ಕಾಲದ ಯಕ್ಷಗಾನದ ಕಷ್ಟದ ದಿನಗಳಿಗೆ ಹೋಲಿಸಿದರೆ ಯಕ್ಷಗಾನ ಮತ್ತು ಕಲಾವಿದರ ಆರ್ಥಿಕ ಸ್ಥಿತಿಗತಿಯಲ್ಲಿ ಬದಲಾವಣೆಗಳಾಗಿವೆ. ಕಲೆಯ ಮೇಲಿನ ಪ್ರೀತಿ, ದುಡಿಯುವ ಹುಮ್ಮಸ್ಸು, ಆಸಕ್ತಿ ಇದ್ದ ಕಲಾವಿದರಿಗೆ ಸಂಪಾದನೆಗೆ ಬಹಳಷ್ಟು ಅವಕಾಶಗಳು ಸಿಗುತ್ತಿವೆ. ಆದರೂ ಇಂದಿನ ವೃತ್ತಿ ಕಲಾವಿದರ ವೃತ್ತಿ ಜೀವನದ ಪಯಣದಲ್ಲಿ ಹಲವಾರು ಸಂಗತಿಗಳು, ಸಮಸ್ಯೆಗಳು ಹೊರಪ್ರಪಂಚಕ್ಕೆ ಕಾಣುತ್ತಿಲ್ಲ. ಯಕ್ಷಗಾನವು ಶ್ರೀಮಂತ ಕಲೆಯಾದರೂ ಕಲೆಗಾಗಿ ಜೀವನವನ್ನೇ ಮುಡಿಪಾಗಿಟ್ಟಿರುವ ವೃತ್ತಿಕಲಾವಿದರಲ್ಲಿ ಹೆಚ್ಚಿನವರು ಇಂದಿಗೂ ಬಡವರೇ ಆಗಿದ್ದಾರೆ ಎಂಬುದನ್ನು ಗಮನಿಸಬಹುದಾಗಿದೆ. ಯಕ್ಷಗಾನ ಕ್ಷೇತ್ರವು ಇಂದು ಎಷ್ಟೋ ಜನರಿಗೆ ಉದ್ಯೋಗವನ್ನು ನೀಡಿದೆ. ಯಕ್ಷಗಾನದಿಂದಲೇ ಸಾವಿರಾರು ಕಲಾವಿದರರು ತಮ್ಮ ಕುಟುಂಬದ ನಿರ್ವಹಣೆಯನ್ನು ಮಾಡುತ್ತಿದ್ದಾರೆ. ಹಿಂದಿನ ಕಲಾವಿದರಿಗಿಂತ ಈಗಿನ ಕಲಾವಿದರ ವೇತನದಲ್ಲಿ ಹೆಚ್ಚಳ ಕಂಡು ಬರುತ್ತಿವೆಯಾದರೂ ಇಂದಿನ ಆಧುನಿಕತೆಯಲ್ಲಿ ಜನರ ಖರ್ಚುವೆಚ್ಚಗಳೂ ದುಪ್ಪಟ್ಟುಗೊಂಡಿವೆ. ಇತರ ಉದ್ಯೋಗ, ಸಂಪಾದನೆಗೆ ಹೋಲಿಸಿದರೆ ಯಕ್ಷಗಾನ ವೃತ್ತಿ ಕಲಾವಿದರ ಸಂಪಾದನೆ ಬಹಳ ಕಡಿಮೆಯೇ ಎಂದು ಹೇಳಬಹುದು. ಹೆಚ್ಚಿನ ಕಲಾವಿದರು ಕಲೆಯ ಮೇಲಿನ ಪ್ರೀತಿ ಹೊಂದಿದ್ದಾರೆಯೇ ಹೊರತು ಅವರಲ್ಲಿ ಈ ಕಲೆಯಿಂದ ಸಿಗುವ ಆರ್ಥಿಕತೆಯ ತೃಪ್ತಿಯ ಭಾವ ಕಾಣುತ್ತಿಲ್ಲ.

ಕಲಾವಿದರು ಒಂದು ಊರಿನಿಂದ ಇನ್ನೊಂದೂರಿಗೆ ಪ್ರದರ್ಶನಕ್ಕೆ ಹೋಗುವಾಗ ಸ್ವಂತ ವಾಹನಗಳನ್ನು ಬಳಸಿಕೊಂಡು ಹೋಗುವವರ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಿವೆ. ಇದರಿಂದ ಕ್ಯಾಂಪಿನಲ್ಲಿ ಉಳಿದುಕೊಳ್ಳುತ್ತಿರುವ ಕಲಾವಿದರ ಸಂಖ್ಯೆ ಕಡಿಮೆಯಾಗುತ್ತದೆ. ಯಕ್ಷಗಾನವಿಲ್ಲದ ಆರು ತಿಂಗಳಲ್ಲಿ ಯಕ್ಷಗಾನ ಕಲಾವಿದರು ಬದುಕನ್ನು ಸಾಗಿಸಲು ಬೇರೆ ಪರ್ಯಾಯ ಆರ್ಥಿಕ ವ್ಯವಸ್ಥೆಯನ್ನು ಮಾಡಿಕೊಳ್ಳಲೇಬೇಕಾಗುತ್ತದೆ. ಯಕ್ಷಗಾನವನ್ನೇ ವೃತ್ತಿಯಾಗಿಸಿದ ಕಲಾವಿದರಿಗೆ ಈ ಆರು ತಿಂಗಳು ಸವಾಲಿನ ಸಮಯವಾಗಿದ್ದು, ಈ ಅವಧಿಯಲ್ಲಿ ಸಾಮಾನ್ಯವಾಗಿ ಮೇಳಗಳಲ್ಲಿ ರಜಾಸಂಬಳ ಎಂದು ನೀಡುವ ಕ್ರಮ ಇರುವುದಿಲ್ಲ. ಆದರೆ ಕಟೀಲು ಮೇಳಗಳಲ್ಲಿ ಕಲಾವಿದರ ಅನುಭವ ಮತ್ತು ಸೀಟಿನ ಆಧಾರದ ಮೇಲೆ ಸಣ್ಣ ಪ್ರಮಾಣದಲ್ಲಿ ರಜೆಯ ಸಂಬಳವನ್ನು ಕೊಡುವ ಕ್ರಮವನ್ನು ಬೆಳೆಸಿಕೊಂಡಿದೆ. ತೆಂಕುತಿಟ್ಟಿನ ಬೇರೆ ಯಾವ ಮೇಳದಲ್ಲಿಯೂ ಇಂತಹ ವ್ಯವಸ್ಥೆ ಇರುವುದಿಲ್ಲ.

ಯಕ್ಷಗಾನವನ್ನೇ ಬದುಕನ್ನಾಗಿಸಿದ ಯಕ್ಷಗಾನ ಕಲಾವಿದರು ಯಕ್ಷಗಾನದ ತಿರುಗಾಟ ಇಲ್ಲದ ಆರು ತಿಂಗಳಲ್ಲಿ ತಮ್ಮ ಹಾಗೂ ಕುಟುಂಬದ ಜೀವನ ನಿರ್ವಹಣೆಗಾಗಿ ಪರ್ಯಾಯ ಉದ್ಯೋಗವನ್ನು ಅವಲಂಬಿಸಲೇ ಬೇಕಾಗುವುದು ಅನಿವಾರ್ಯವಾಗುತ್ತದೆ. ಪ್ರಸಿದ್ಧ ಅಥವಾ ಸೀಮಿತ ಸಂಖ್ಯೆಯ ಕಲಾವಿದರಿಗೆ ಮಳೆಗಾಲದ ಪ್ರದರ್ಶನದಲ್ಲಿ ಅವಕಾಶಗಳು ದೊರೆಯುತ್ತವೆ. ಕೆಲವರು ಚಿಕ್ಕಮೇಳಗಲ್ಲಿ, ಯಕ್ಷಗಾನ ತರಬೇತಿ ನೀಡುವುದರಲ್ಲಿಯೂ, ವೇಷಭೂಷಣ, ಮಣಿಸಾಮಾನು ರಿಪೇರಿ ಮೊದಲಾದವುಗಳಲ್ಲಿ ಸಂಪಾದನೆಗೊಂದು ದಾರಿ ಹುಡುಕಿಕೊಳ್ಳುತ್ತಾರೆ. ಶೈಕ್ಷಣಿಕವಾಗಿ ಉತ್ತಮವಾಗಿರುವ ಕೆಲವು ಕಲಾವಿದರು ಕಂಪೆನಿ ಅಥವಾ ಇತರ ಸಂಸ್ಥೆಗಳಲ್ಲಿ ತೊಡಗಿಸಿಕೊಂಡರೆ, ಶಿಕ್ಷಣ ಕಡಿಮೆ ಇರುವ ಕಲಾವಿದರು ಕೃಷಿ ಕೆಲಸ, ಕೂಲಿ ಕೆಲಸಗಳಲ್ಲಿಯೂ ತೊಡಗಿಸಿಕೊಂಡಿರುವುದನ್ನು ನಾವು ಗಮನಿಸಬಹುದಾಗಿದೆ. ಅಲ್ಲದೆ ಬೇರೆ ಉದ್ಯೋಗವಿಲ್ಲದೆ ಬೀಡಿ ಕಟ್ಟಿ ಜೀವನ ನಿರ್ಹಹಿಸುತ್ತಿರುವ ಕಲಾವಿದರನ್ನು ಕೂಡಾ ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ. ಇತ್ತೀಚೆಗೆ ಯಕ್ಷಗಾನ ಕ್ಷೇತ್ರದಲ್ಲಿ ವೃತ್ತಿಪರವಾಗಿ ದುಡಿಯುವ ಕಲಾವಿದರಿಗೆ ಹಗಲಿನ ವೇಳೆಯಲ್ಲಿ ಇತರ ವೃತ್ತಿಯಲ್ಲಿ ತೊಡಗಿಸಿಕೊಳ್ಳುವ ಅವಕಾಶಗಳು ಹೆಚ್ಚುತ್ತಿವೆ. ಯಕ್ಷಗಾನದಲ್ಲಿ ಸಿಗುವ ಆರ್ಥಿಕ

ಸಂಪಾದನೆ ಕಲಾವಿದರಿಗೆ ತಮ್ಮ ಕುಟುಂಬದ ಜವಾಬ್ಧಾರಿಯನ್ನು ನಿಭಾಯಿಸಲು ಸಾಕಾಗದ ಕಾರಣ ಹಾಗೂ ಯಕ್ಷಗಾನವನ್ನೂ ಕಲೆಯ ಅಭಿಮಾನದಿಂದ ಬಿಡಲು ಮನಸ್ಸಾಗದೆ ಹಗಲಿನಲ್ಲಿ ಬೇರೆ ವೃತ್ತಿಯಲ್ಲಿ ತೊಡಗಿಸಿಕೊಳ್ಳುತ್ತಿರುವುದನ್ನು ಗಮನಿಸಬಹುದು. ಇಲ್ಲಿ ಕುಟುಂಬವನ್ನು ಸಲಹುದಕ್ಕಾಗಿ ಯಕ್ಷಗಾನದಿಂದ ಸಂಪಾದನೆ ಸಾಕಾಗದೆ ಬೇರೆ ಉದ್ಯೋಗವನ್ನೂ ಮಾಡಲಾಗದೆ ಬೀಡಿ ಕಟ್ಟಿ ಬದುಕು ಸಾಗಿಸುತ್ತಿರುವ ಕೆಲವು ಕಲಾವಿದರನ್ನು ಗಮನಿಸಿದರೆ ಇಂದಿನ ಕಾಲದಲ್ಲೂ ಕಲಾವಿದರ ಆರ್ಥಿಕಸಂಕಷ್ಟ ಸ್ಥಿತಿಯ ಬಗ್ಗೆ ಮನವರಿಕೆಯಾಗುತ್ತದೆ.

ಕಲಾವಿದರಲ್ಲಿ ಹೆಚ್ಚಿನವರು ಮುಂದಿನ ಭವಿಷ್ಯಕ್ಕಾಗಿ ಉಳಿತಾಯ ಮಾಡುವ ಮನೋಭಾವವನ್ನು ಇಂದು ಬೆಳೆಸಿಕೊಂಡಿದ್ದಾರೆ. ಹೆಚ್ಚಿನವರು ಬ್ಯಾಂಕ್, ಫಂಡ್, ಅಂಚೆ ಖಾತೆಗಳಲ್ಲಿ ಉಳಿತಾಯವನ್ನು ಮಾಡುತ್ತಿದ್ದಾರೆ. ಅಲ್ಲದೆ ಬಹುತೇಕ ಕಲಾವಿದರು ಎಲ್ಐಸಿ ಸೇರಿದಂತೆ, ಅಂಚೆ ವಿಮೆ, ಅಪಘಾತ ವಿಮೆ ಮೊದಲಾದ ವಿಮಾ ವ್ಯವಸ್ಥೆಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಯಕ್ಷಗಾನ ಕಲಾವಿದರಿಗೆ ಪಿಎಫ್ ವ್ಯವಸ್ಥೆ ಸಿಗಬೇಕು ಎನ್ನುವ ಕೂಗು ಹಲವಾರು ವರ್ಷದಿಂದ ಕಲಾವಿದರ ವಲಯದಿಂದ ಕೇಳಿ ಬರುತ್ತಿದ್ದರೂ ತೆಂಕುತಿಟ್ಟಿನಲ್ಲಿ ಧರ್ಮಸ್ಥಳ ಮೇಳವನ್ನು ಹೊರತುಪಡಿಸಿ ಬೇರೆ ಯಾವ ಮೇಳದಲ್ಲಿಯೂ ಪಿಎಫ್ ವ್ಯವಸ್ಥೆಗಳು ಕಲಾವಿದರಿಗೆ ಇನ್ನು ಲಭ್ಯವಾಗಿಲ್ಲ. ಅಲ್ಲದೆ ನಿವೃತ್ತ ಕಲಾವಿದರಿಗೆ ಸರ್ಕಾರದಿಂದ ಮಾಸಾಶನ ಸಿಗುವ ವ್ಯವಸ್ಥೆ ಇದ್ದರೂ ಅದು ಹೆಚ್ಚು ಪರಿಣಾಮಕಾರಿಯಾಗಿಲ್ಲ. ಕಠಿಣ ನಿಯಮಗಳಿಂದ ಹೆಚ್ಚಿನ ಕಲಾವಿದರಿಗೆ ಇದರ ಲಾಭ ದೊರೆಯುತ್ತಿಲ್ಲ ಹಾಗೂ ಬಹುತೇಕ ಕಲಾವಿದರಿಗೆ ಮಾಸಾಶನ ವ್ಯವಸ್ಥೆಯ ಬಗೆಗೆ ಮಾಹಿತಿಯೇ ಇಲ್ಲದಿರುವುದು ಅಧ್ಯಯನದಲ್ಲಿ ಕಂಡು ಬಂದಿದೆ. ಯಕ್ಷಗಾನ ಕಲಾವಿದರ ಕ್ಷೇಮಾಭಿವೃದ್ಧಿಗಾಗಿ ಯಕ್ಷಗಾನ ಕಲಾರಂಗ ಉಡುಪಿ ಹಾಗೂ ಯಕ್ಷಧ್ರುವ ಪಟ್ಲ ಟ್ರಸ್ಟ್ ಸಂಸ್ಥೆಗಳು ಕಲಾವಿದರಿಗೆ ವಿಮೆ, ಪ್ರಶಸ್ತಿ, ಬಸ್ ಪಾಸ್, ಅಸೌಖ್ಯ ಕಲಾವಿದರಿಗೆ ಸಹಾಯಧನ ಸೇರಿದಂತೆ ಹಲವಾರು ಸೌಲಭ್ಯಗಳನ್ನು ಒದಗಿಸಿಕೊಟ್ಟು ವೃತ್ತಿ ಕಲಾವಿದರಿಗೆ ಹಲವು ಸಂಘಟನೆಗಳು ನೆರವಾಗುತ್ತಿರುವುದನ್ನು ಕಾಣಬಹುದು.

ಸಮಾಜದಲ್ಲಿ ಹಲವಾರು ರೀತಿಯ ಪರಿವರ್ತನೆ, ಬದಲಾವಣೆಗಳು ನಡೆಯುತ್ತಿರುವಂತೆಯೇ ಯಕ್ಷಗಾನ ಕಲೆಯು ತನ್ನ ಮೂಲ ಸಂಪ್ರಾದಾಯವನ್ನು ಉಳಿಸಿಕೊಂಡು ಹಲವಾರು ರೀತಿಯ ಬದಲಾವಣೆಗಳಿಗೆ ತೆರೆದುಕೊಂಡಿರುವುದನ್ನು ಕಾಣಬಹುದು. ಇಂತಹ ಬದಲಾವಣೆಗಳು ಯಕ್ಷಗಾನ ಕಲಾವಿದರ ಬದುಕಿನಲ್ಲಿಯೂ ಹಲವಾರು ಪರಿವರ್ತನೆ, ವೈಪರಿತ್ಯಗಳಿಗೂ ಕಾರಣವಾಗುತ್ತಿವೆ. ಯಕ್ಷಗಾನಕ್ಕೆ ಪ್ರೇಕ್ಷಕರ ಸಂಖ್ಯೆ ಕಡಿಮೆಯಾಗುತ್ತಿದೆ ಎಂಬ ಮಾತುಗಳು ಕೇಳಿ ಬರುತ್ತಿವೆಯಾದರೂ ಯಕ್ಷಗಾನ ಕಲಾವಿದರ ಪ್ರಕಾರ ಯಕ್ಷಗಾನಕ್ಕೆ ಪ್ರೇಕ್ಷಕರು ಕಡಿಮೆಯಾಗಿಲ್ಲ, ಇಂದಿನ ಕೆಲಸಗಳ ಒತ್ತಡ, ವಿಭಕ್ತ ಕುಟುಂಬದ ಪರಿಣಾಮ ಬೆಳಗಿನವರೆಗೆ ಯಕ್ಷಗಾನವನ್ನು ನೋಡುವವರ ಸಂಖ್ಯೆ ಕಡಿಮೆಯಾಗುತ್ತಿದ್ದಾರೆ. ಯಕ್ಷಗಾನ ಕಲೆಯಲ್ಲಿ ಸಾಂಪ್ರದಾಯಿಕತೆಯ ಅಂಶಗಳು ಆಧುನಿಕತೆಗೆ ತಕ್ಕಂತೆ ಮತ್ತು ಜನರ ಅಭಿರುಚಿಗೆ ತಕ್ಕಂತೆ ಸ್ವಲ್ಪ ಬದಲಾವಣೆಯಾಗಿದೆ ಎಂಬುದನ್ನು ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ. ಪರಂಪರೆ ಮತು ಸಂಪ್ರದಾಯದ ರೀತಿಯಲ್ಲಿ ಯಕ್ಷಗಾನವನ್ನು ಆಸ್ವಾಧಿಸುವವರು ಕಾಲಮಿತಿ ವಿರೋಧಿಸುತ್ತಾರೆ. ಹಾಗೆಯೇ ಇಂದಿನ ಯುವ ಕಲಾವಿದರು, ಯುವ ಪ್ರೇಕ್ಷಕರು ಕಾಲಮಿತಿ ಯಕ್ಷಗಾನಕ್ಕೇ ಹೆಚ್ಚಿನ ಒಲವು ತೋರಿಸುತ್ತಿದ್ದಾರೆ. ಆಧುನಿಕ ತಂತ್ರಜ್ಞಾನದ ನಡುವೆ ಯಕ್ಷಗಾನವನ್ನು ಮತ್ತಷ್ಟು ಬೆಳೆಸುವ ಶ್ರೀಮಂತಗೊಳಿಸುವ ಬಗೆಗೆ ಯಕ್ಷಗಾನಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡುವುದರಿಂದ, ಶಾಲಾ ಕಾಲೇಜುಗಳಲ್ಲಿ ತರಬೇತಿ, ಕೋರ್ಸ್, ಸಂಘ ಸಂಸ್ಥೆಗಳಿಂದ ಸರ್ಕಾರದಿಂದ ಯಕ್ಷಗಾನಕ್ಕೆ, ಕಲಾವಿದರಿಗೆ ಪ್ರೋತ್ಸಾಹ, ಸೌಲಭ್ಯಗಳು ವಿಸ್ತರಿಸಿದರೆ ಖಂಡಿತವಾಗಿಯೂ ಯಕ್ಷಗಾನವನ್ನು ಮತ್ತಷ್ಟು ಶ್ರೀಮಂತಗೊಳಿಸಲು ಸಾಧ್ಯವಿದೆ ಎಂಬ ಅಭಿಪ್ರಾಯಗಳು ಯಕ್ಷಗಾನ ಕಲೆಯನ್ನು ಮುನ್ನಡೆಸುತ್ತಿರುವ ಕಲಾವಿದರರ ಸಮೂಹದಿಂದ ಕೇಳಬರುತ್ತದೆ.

ಒಂದು ಸಂದರ್ಭದಲ್ಲಿ ತೀರ ಶೋಚನೀಯವಾಗಿದ್ದ ಯಕ್ಷಗಾನ ಕಲೆಗೆ ಇಂದು ಸಮಾಜದ ವಿವಿಧ ಸಂಘ ಸಂಸ್ಥೆಗಳ ಪ್ರೋತ್ಸಾಹವೂ ಸಿಗುತ್ತಿದೆ. ಪ್ರಮುಖವಾಗಿ ಅಧ್ಯಯನದಲ್ಲಿ ಗಮನಿಸಿದ ಹಾಗೆ ಸಂಘ ಸಂಸ್ಥೆಗಳು ಕಲಾವಿದರನ್ನು ಗುರುತಿಸಿ ಗೌರವಿಸುವ ಕೆಲಸ ಮಾಡುತ್ತಿವೆ, ಯಕ್ಷಗಾನ ಪ್ರದರ್ಶನಕ್ಕೆ ಅವಕಾಶ ಪ್ರೋತ್ಸಾಹ, ಬಡ, ಅಸೌಖ್ಯ ಕಲಾವಿದರಿಗೆ ಸಹಾಯ ಹೀಗೆ ವಿವಿಧ ರೀತಿಯಲ್ಲಿ ಸಂಘ ಸಂಸ್ಥೆಗಳು ಯಕ್ಷಗಾನಕ್ಕೆ ಪ್ರೋತ್ಸಾಹಕ ಶಕ್ತಿಯಾಗಿ ನಿಂತಿದೆ. ಯಕ್ಷಗಾನವು ಅಕಾಡೆಮಿಕ್ ಆಗಿಯೂ ಗುರುತಿಸಲ್ಪಟ್ಟು ವಿಶ್ವವಿದ್ಯಾಲಯ ಮಟ್ಟದಲ್ಲಿಯೂ ಸಂಶೋಧನೆ, ಅಧ್ಯಯನಗಳು, ಕಮ್ಮಟ, ರಾಷ್ಟ್ರೀಯ ವಿಚಾರಸಂಕಿರಣ ಮೊದಲಾದ ಶೈಕ್ಷಣಿಕ ಚಟುವಟಿಕೆಗಳು ನಡೆಯುತ್ತಿವೆ.

ಒಟ್ಟಿನಲ್ಲಿ ಯಕ್ಷಗಾನವು ಇಂದು ಸಮಾಜದಲ್ಲಿ ಶ್ರೀಮಂತಕಲೆಯಾಗಿ ರೂಪುಗೊಂಡು ಪ್ರದರ್ಶನವು ಕೂಡಾ ಅದ್ದೂರಿಯಾಗಿ ನಡೆಯುತ್ತಿದೆ. ಆದರೆ ಈ ಕಲೆಯಲ್ಲಿ ವ್ಯವಸಾಯ ಮಾಡುತ್ತಿರುವ ವೃತ್ತಿ ಕಲಾವಿದರು ಹಿಂದಿನ ಕಲಾವಿದರಿಗಿಂತ ಸುಧಾರಣೆಯನ್ನು ಕಂಡಿದ್ದರೂ ಆರ್ಥಿಕವಾಗಿ, ಸಾಮಾಜಿಕವಾಗಿ ಇನ್ನೂ ಹಿಂದುಳಿದಿದ್ದಾರೆ. ಈ ನಿಟ್ಟಿನಲ್ಲಿ ಯಕ್ಷಗಾನ ಮೇಳಗಳು, ಸಂಘ ಸಂಸ್ಥೆಗಳು, ಸಂಘಟನೆಗಳು, ಯಕ್ಷಗಾನ ಅಕಾಡೆಮಿ, ಸರ್ಕಾರ ಕಲಾವಿದರ ಶ್ರೇಯೋಭಿವೃದ್ಧಿಗಾಗಿ ಹಾಗೂ ಕಲೆಯ ಸಂರಕ್ಷಣೆಗಾಗಿ ಕಾರ್ಯೋನ್ಮುಖವಾಗಬೇಕಾದ ಅಗತ್ಯತೆಯೂ ಇದೆ.

ಯಕ್ಷಗಾನ ಮತ್ತು ಈ ರಂಗಭೂಮಿಯಲ್ಲಿ ಸಕ್ರಿಯವಾಗಿ ತೊಡಗಿರುವ ಕಲಾವಿದರ ಸಾಮಾಜಿಕ ಬದುಕು ಮತ್ತು ಆರ್ಥಿಕತೆಯ ಸಂಬಂಧವನ್ನು ಸಮಾಜಶಾಸ್ತ್ರೀಯ ಚೌಕಟ್ಟಿನಲ್ಲಿ ಅಧ್ಯಯನ ನಡೆಸಿರುವುದು ಈ ಸಂಶೋಧನೆಯ ಧನಾತ್ಮಕ ಅಂಶವಾಗಿದೆ. ಯಕ್ಷಗಾನವನ್ನು ಪುರಾಣ, ಧಾರ್ಮಿಕತೆ, ಕಲಾತ್ಮಕತೆ – ಹೀಗೆ ಹಲವು ನೆಲೆಗಳಲ್ಲಿ ಪರಿಶೀಲಿಸಿದ ಹಲವು ಅಧ್ಯಯನಗಳಿವೆ. ಈ ಬಗೆಯ ಅಧ್ಯಯನಗಳಲ್ಲಿ ಯಕ್ಷಗಾನವನ್ನು ಕಲಾಪ್ರಕಾರವೆಂದೂ, ಧಾರ್ಮಿಕ ರಂಗಭೂಮಿಯೆಂದೂ, ಪುರಾಣಗಳ ನೀತಿಯನ್ನು ಪ್ರಸಾರಮಾಡುವ ಮಾಧ್ಯಮವೆಂದೂ ಅರ್ಥೈಸಿ ವಿವರಿಸಿರುವುದು ಹೆಚ್ಚಾಗಿ ಕಂಡು ಬರುತ್ತದೆ. ಹೀಗೆ ನಿರ್ಣಯಿಸುವಾಗ ಯಕ್ಷಗಾನವನ್ನು ಧರ್ಮ, ಪುರಾಣ ಮತ್ತು ಕಲೆಗಳನ್ನು ಮಾನದಂಡಗಳನ್ನಾಗಿ ಇಟ್ಟುಕೊಂಡಿರುವುದು ಸ್ಪಷ್ಟ. ವಾಸ್ತವವಾಗಿ ಯಕ್ಷಗಾನವು 'ಕಲಾವಿದ ಕೇಂದ್ರಿತ' ಸಂರಚನೆಯಾಗಿದೆ. ಈ ಹಿನ್ನೆಲೆಯಲ್ಲಿ ನೋಡಿದರೆ 'ಯಕ್ಷಗಾನವು ಸಾಮಾಜಿಕ ಉತ್ಪನ್ನ'(Social Product) ಎಂಬುದು ಸಿದ್ಧವಾಗುತ್ತದೆ. ಕಲಾವಿದರ ಸಾಮಾಜಿಕ ಬದುಕು ಯಕ್ಷಗಾನವನ್ನು ರೂಪಿಸುತ್ತಾ ಬಂದು ಅದರ ಸ್ವರೂಪವನ್ನು ನಿರ್ಣಯಿಸುತ್ತಾ ಬಂದ ಸಮಾಜಶಾಸ್ತ್ರೀಯ ಶಕ್ತಿಯಾಗಿದೆ. ಪ್ರಸ್ತುತ ಅಧ್ಯಯನವು ಯಕ್ಷಗಾನವನ್ನು ಕರಾವಳಿ ವಲಯದ ಸಮಾಜಶಾಸ್ತ್ರೀಯ ಶಕ್ತಿಗಳು(Sociological forces) ಮುನ್ನಡೆಸುತ್ತಾ ಬಂದಿವೆ ಎಂಬುದನ್ನು ಸಾಬೀತು ಪಡಿಸಿದೆ.

ಕೆಲವು ಪ್ರಮುಖ ಸಲಹೆಗಳು:

- ಯಕ್ಷಗಾನ ಕಲೆಯಲ್ಲಿ ಇಂದು ಸಾವಿರಾರು ಕಲಾವಿದರು ತಮ್ಮ ಬದುಕನ್ನು ಕಟ್ಟಿಕೊಂಡಿದ್ದಾರೆ. ಆದರೆ ಯಕ್ಷಗಾನ ಕಲಾವಿದರ ಸುಸಂಘಟಿತವಾದ ಬೃಹತ್ ಸಂಘದ ಅರಿವು ಇನ್ನೂ ಸರಿಯಾಗಿ ಆಗಿಲ್ಲ. ಆದ್ದರಿಂದ ಕಲಾವಿದರನ್ನು ಒಂದು ಸಮೂಹವಾಗಿ ಗುರುತಿಸಲು ಸಾಧ್ಯವಾಗುತ್ತಿಲ್ಲ ಹಾಗೂ ವೃತ್ತಿ ಕಲಾವಿದರು ಹಲವಾರು ಮೂಲಭೂತ ಸೌಲಭ್ಯಗಳಿಂದ ವಂಚಿತರಾಗುತ್ತಿದ್ದಾರೆ. ಬೇಡಿಕೆಗಳ ಈಡೇರಿಕೆಗಾಗಿ ಹಾಗೂ ಬದುಕಿನ ಭದ್ರತೆಗಾಗಿ ಕಲಾವಿದರು ಸಂಘಟಿತರಾಗಬೇಕಾದುದು ಅಗತ್ಯವಾಗಿದೆ.

- ಕಲಾವಿದರು ಸಂಘಟಿತರಾಗುವುದರೊಂದಿಗೆ ಮೇಳಗಳು ವಾಣಿಜ್ಯ ಉದ್ಯಮಗಳ ಸಾಲಿನಲ್ಲಿ ರೂಪುಗೊಳ್ಳಬೇಕು. ಆಗ ಅದರಲ್ಲಿ ದುಡಿಯವವರು ಕೂಡಾ ಉದ್ಯಮ ವಿವಾದ ಶಾಸನದ(Industrial Disputes Act) ಪ್ರಕಾರ ಕಾರ್ಮಿಕರಾಗಿ ಕನಿಷ್ಠ ವೇತನ, ವೇತನ ಶ್ರೇಣಿ. ನ್ಯಾಯ ವೇತನ, ಬೋನಸ್ ಮೊದಲಾದ ಸವಲತ್ತುಗಳನ್ನು ಪಡೆಯಲು ಸಾಧ್ಯತೆಗಳಿರುತ್ತದೆ.

- ಸರ್ಕಾರವು ಯಕ್ಷಗಾನದ ಅಭಿವೃದ್ಧಿಗಾಗಿ ಯಕ್ಷಗಾನ ಅಕಾಡೆಮಿಯನ್ನು ಸ್ಥಾಪಿಸಿ ಪ್ರೋತ್ಸಾಹಿಸುತ್ತಿದ್ದರೂ ಇದರ ಸವಲತ್ತುಗಳು ಪೂರ್ಣ ಪ್ರಮಾಣದಲ್ಲಿ ಕಲಾವಿದರಿಗೆ ತಲುಪುತ್ತಿಲ್ಲ ಹಾಗೂ ಇರುವ ಸೌಲಭ್ಯಗಳ ಬಗ್ಗೆ ಕಲಾವಿದರಿಗೆ ಮಾಹಿತಿಯ ಕೊರೆತೆಯೂ ಇದೆ. ಸರ್ಕಾರವು ಯಕ್ಷಗಾನ ಕಲೆಯ ಬೆಳವಣಿಗೆ ಹಾಗೂ ವೃತ್ತಿ ಕಲಾವಿದರ ಶ್ರೇಯೋಭಿವೃದ್ಧಿಗಾಗಿ, ಅವರ ಬದುಕಿನ ಭದ್ರತೆಗಾಗಿ, ಹಿತರಕ್ಷಣೆಗೆ ಹೆಚ್ಚಿನ ಆದ್ಯತೆ ನೀಡಿ ಕಾರ್ಯಪ್ರವೃತ್ತವಾಗಬೇಕಿದೆ.
- ಯಕ್ಷಗಾನ ಕಲಾವಿದರಿಗೆ ಯಕ್ಷಗಾನ ಕಲೆಯನ್ನು ಸಂಪ್ರದಾಯಬದ್ಧವಾಗಿ ಮುಂದಿನ ಪೀಳಿಗೆಗೆ ಕೊಂಡೊಯ್ಯುವ ಜವಬ್ದಾರಿಯ ನೆಲೆಯಲ್ಲಿ ಕಲಾವಿದರು ಅಧ್ಯಯನಶೀಲರಾಗಬೇಕಿದೆ. ಇದರಿಂದ ಯಕ್ಷಗಾನ ರಂಗದಲ್ಲಿ ಜ್ಞಾನ, ಕೌಶಲ್ಯದೊಂದಿಗೆ ಪರಿಪೂರ್ಣತೆಯನ್ನು ಬೆಳೆಸಿಕೊಂಡು ಮುನ್ನಡೆಯಲು ಸಾಧ್ಯವಿದೆ.
- ಸರ್ಕಾರದ ಮುಜುರಾಯಿ ಇಲಾಖೆಯ ಅಧೀನದ ದೇವಳದ ಹೆಸರಿನಲ್ಲಿ ಅದೇ ದೇವಳದ ಮೇಳಗಳ ಪ್ರದರ್ಶನ ನಡೆಯುತ್ತಿದ್ದರೂ ಇಲ್ಲಿಯ ಕಲಾವಿದರಿಗೆ ಸರ್ಕಾರದ ಕಡೆಯಿಂದ ಯಾವುದೇ ಸೌಲಭ್ಯಗಳು ಲಭಿಸುತ್ತಿಲ್ಲ. ಆದ್ದರಿಂದ ಇಂತಹ ದೇವಾಲಯದ ಅಡಿಯಲ್ಲಿ ಕಾರ್ಯಾಚರಿಸುವ ಯಕ್ಷಗಾನ ಮೇಳಗಳ ಕಲಾವಿದರಿಗೆ ಹೆಚ್ಚಿನ ಸೌಲಭ್ಯಗಳನ್ನು ಒದಗಿಸಲು ಅವಕಾಶಗಳಿವೆ.
- ಯಕ್ಷಗಾನವು ಧಾರ್ಮಿಕವಾಗಿ, ಮನೋರಂಜನಾತ್ಮಕವಾಗಿ ಜನತೆ ಸ್ಪೂರ್ತಿಯ ಸೆಲೆಯಾಗಿ ಹಾಗೂ ಸಾಮಾಜಿಕವಾಗಿ ಸಾವಿರಾರು ಕಲಾವಿದರಿಗೆ, ಕಲೋಪಜೀವಿಗಳ ಬದುಕಿಗೆ ಆಸರೆಯಾಗಿದ್ದರೂ ಯಕ್ಷಗಾನಕ್ಕೆ ಸರಿಯಾದ ಮನ್ನಣೆ ಸಿಕ್ಕಿಲ್ಲ, ಅದರ ವಿಶ್ವರೂಪ ದರ್ಶನವಾಗಿಲ್ಲ. ಯಕ್ಷಗಾನವನ್ನು ರಾಜ್ಯ ಕಲೆಯಾಗಿ ಘೋಷಿಸಿ ಮನ್ನಣೆ ಸಿಗಬೇಕಿದೆ. ಈ ದಿಶೆಯಲ್ಲಿ ಮೇಳ, ಸಂಘಟಕರು ಹಾಗೂ ಸರ್ಕಾರ ಗಮನಹರಿಸಬೇಕಾದ ಅಗತ್ಯತೆ ಇದೆ.
- ಯಕ್ಷಗಾನ ಶಿಬಿರ ಅಥವಾ ಕ್ಯಾಂಪ್‌ಗಳಲ್ಲಿ ಕಲಾವಿದರು ಹಲವಾರು ಸಮಸ್ಯೆಗಳನ್ನು ಇಂದಿಗೂ ಎದುರಿಸುತ್ತಿದ್ದಾರೆ. ಮೇಳಗಳು ಆಟ ನಡೆಯುವ ಸ್ಥಳದಲ್ಲಿ ಬಿಡಾರ ಹೂಡುವಾಗ ಕೆಲವೊಂದು ಕಡೆಯಲ್ಲಿ ಶೌಚಾಲಯ ಸಮಸ್ಯೆಗಳು, ಕುಡಿಯುವ ನೀರಿನ ಸಮಸ್ಯೆಗಳು, ವಿಶ್ರಾಂತಿಗೆ ಸರಿಯಾದ ಜಾಗ ಇಲ್ಲದಿರುವುದು ಮೊದಲಾದ ಸಮಸ್ಯೆಗಳು ಎದುರಾಗುತ್ತವೆ. ಇಂತಹ ಸಮಸ್ಯೆಗಳ ಪರಿಹಾರಕ್ಕೆ ಮೇಳದ ಸಂಘಟಕರು ಗಮನಹರಿಸಬೇಕಾಗಿದೆ.
- ಯಕ್ಷಗಾನವು ಇಂದು ಅಕಾಡೆಮಿಕ್ ಆಗಿ ಗುರುತಿಸಿಕೊಳ್ಳುತ್ತಿದೆ. ಯಕ್ಷಗಾನ ವಿಷಯಕ್ಕೆ ಪೂರಕವಾಗಿ ಸಂಶೋಧನೆ, ಅಧ್ಯಯನಗಳು, ವಿಚಾರಸಂಕಿರಣಗಳು, ಕಮ್ಮಟಗಳು ಸೇರಿದಂತೆ ಹಲವಾರು ಯೋಜನೆಗಳು ನಡೆಯುತ್ತಿವೆ. ಯಕ್ಷಗಾನ ಅಧ್ಯಯನ ಕೇಂದ್ರಗಳೂ ರೂಪುಗೊಂಡಿವೆ. ಇದರೊಂದಿಗೆ ಯಕ್ಷಗಾನವು ಶಾಲಾ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಲ್ಲಿ ಯಕ್ಷ ತರಬೇತಿಯೊಂದಿಗೆ ಪಠ್ಯ ರೂಪದಲ್ಲಿ ಯಕ್ಷಶಿಕ್ಷಣ ದೊರೆಯಬೇಕಿದೆ. ವಿಶ್ವವಿದ್ಯಾಲಯ

ಮಟ್ಟದಲ್ಲಿಯೂ ಯಕ್ಷಗಾನ ಸರ್ಟಿಫಿಕೇಟ್ ಕೋರ್ಸ್, ಡಿಪ್ಲೊಮಾ ಕೋರ್ಸ್ ಮೊದಲಾದ ಶೈಕ್ಷಣಿಕ ಚಟುವಟಿಕೆಗಳು ಹೆಚ್ಚು ಆರಂಭಗೊಳ್ಳಬೇಕು.

ಗ್ರಂಥ ಋಣ

- ಭಟ್ಟ.ಜಿ.ಎಸ್. ***ಯಕ್ಷಗಾನ ಪರಿಶೀಲನ***. ಬೆಂಗಳೂರು: ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, 1995
- ಕುಂಟಾರ್, ಮೋಹನ್. ***ಯಕ್ಷಗಾನ ಸ್ಥಿತ್ಯಂತರ***. ಹೊಸಪೇಟೆ: ಯಾಜಿ ಪ್ರಕಾಶನ, 2013
- ಸೋಮೇಶ್ವರ, ಅಮೃತ.***ಯಕ್ಷಾಂದೋಳ***. ಉಚ್ಚಿಲ: ಕಲಾಗಂಗೋತ್ರಿ, ಅಮೃತಸೋಮೇಶ್ವರ ಅಭಿನಂಧನಾ ಸಮಿತಿ, 1995
- ಮಲಶೆಟ್ಟಿ, ಬಸವರಾಜ. ***ಉತ್ತರ ಕರ್ನಾಟಕದ ಬಯಲಾಟಗಳು***.ಬೆಂಗಳೂರು: ಕೆ.ಎಸ್.ಮುದ್ದಪ್ಪ ಸ್ಮಾರಕ ಟ್ರಸ್ಟ್, 2008
- ಕುಕ್ಕಿಲ,ಕೃಷ್ಣ ಭಟ್ಟ. ***ಪಾರ್ತಿಸುಬ್ಬನ ಯಕ್ಷಗಾನಗಳು.*** ಸಂಪಾಜೆ: ಡಾ.ಕಿಲಾರು ಗೋಪಾಲಕೃಷ್ಣಯ್ಯ ಪ್ರತಿಷ್ಠಾನ, 1975
- ಬೋರಲಿಂಗಯ್ಯ, ಹಿ.ಚಿ. ***ಕರ್ನಾಟಕ ಜನಪದ ಕಲೆಗಳ ಕೋಶ***. ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, 1996
- ಕಾಣೆಮಾರ್, ವಾಸುದೇವ. ***ಕಲಾಪ್ರಕಾರಗಳು.*** ಮಂಗಳೂರು: ಭಾರದ್ವಾಜ ಪ್ರಕಾಶನ ಕದಿರೆ, 2001
- ಜೋಶಿ, ಎಂ.ಪ್ರಭಾಕರ. ***ಮಾರುಮಾಲೆ***. ಬೆಂಗಳೂರು: ನ್ಯೂ ಸ್ಟಾರ್ ಪಬ್ಲಿಕೇಶನ್, 1990
- ರಾವ್ ಎಚ್.ಬಿ.ಎಲ್. /ಪೆರ್ಲ ಕೃಷ್ಣ ಭಟ್. ***ಯಕ್ಷಪದ್ಮ***. ಮುಂಬಯಿ: ಪದವೀಧರ ಯಕ್ಷಗಾನ ಸಮಿತಿ, 1989
- ಉಪಾಧ್ಯಾಯ, ಸುಶೀಲಾ ಪಿ. ***ಜನಪದ ಆರಾಧನೆ ಮತ್ತು ರಂಗಕಲೆ.*** ಉಡುಪಿ: ಪ್ರಾದೇಶಿಕ ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರ, 1989
- ಬಿಳಿಮಲೆ, ಪುರುಷೋತ್ತಮ. ***ಕೂಡುಕಟ್ಟು***.ಮಲ್ಲಾಡಿಹಳ್ಳಿ: ಆನಂದಕಂಥ ಗ್ರಂಥಮಾಲೆ 1997
- ಮಂಡೆಕೋಲು, ಚಂದ್ರಶೇಖರ. ***ಯಕ್ಷಭಂಡಾರಿ.*** ಮಂಗಳಗಂಗೋತ್ರಿ: ಯಕ್ಷಗಾನ ಅಧ್ಯಯನ ಕೇಂದ್ರ, 2011

- ಎನ್.ನಾಗವೇಣಿ. ***ಯಕ್ಷಸ್ತ್ರೀ.*** ಮಂಗಳೂರು ವಿಶ್ವವಿದ್ಯಾನಿಲಯ: ಯಕ್ಷಗಾನ ಅಧ್ಯಯನ ಕೇಂದ್ರ, 2012
- ಜೋಶಿ, ಎಂ.ಪ್ರಭಾಕರ.***ಮುಡಿ.*** ಉಡುಪಿ: ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರ.2006
- ಪ್ರಭು, ಎಂ.ಮುಕುಂದ. ***ಪೋಲಿ.*** ಮಂಗಳೂರು: ಜಿಲ್ಲಾಧಿಕಾರಿ ದ.ಕ.ಜಿಲ್ಲೆ, 2000
- ನಂಬಿಯಾರ್ ಡಾ.ಕೆ.ರಾಘವ. ***ಹಿಮ್ಮೇಳ,*** ಉಡುಪಿ:ವತ್ಸಲಾ ರಾಘವನ್ ಪಂಚಮೂಲ,2007
- ಕಡತೋಕ, ಗೋಪಾಲಕೃಷ್ಣ ಭಾಗವತ: ***ಯಕ್ಷವನ ವಿಹಾರ.*** ಹೊನ್ನಾವರ: ಯಕ್ಷರಂಗಿ, 2009
- ಹಡಗಿ, ಸದಾನಂದ ಹೆಗಡೆ. ***ಕಲ್ಪದ ಕಲಾವಿದ,*** ಮಂಗಳೂರು: ದಿ.ಕೆರೆಮನೆ ಶಂಭು ಹೆಗಡೆ ಸಂಸ್ಮರಣಾ ಸಮಿತಿ, 2010
- ನಂಬಿಯಾರ್, ಕೆ.ಎಂ.ರಾಘವ. ***ಯಕ್ಷಸೇಚನ.*** ಬೆಂಗಳೂರು: ಸಾಗರ್ ಪ್ರಕಾಶನ. 2010
- ರಂಗ ಸಂಕಥನಕಾರ ***ಚಿಟ್ಟಾಣಿ ರಾಮಚಂದ್ರ ಹೆಗಡೆ; ಒಂದು ಅಧ್ಯಯನ,*** ಸಂಶೋಧನಾ ಪ್ರಬಂಧ.2009
- ನಂಬಿಯಾರ್, ಡಾ.ಕೆ.ಎಂ. ರಾಘವ. ***ದೀವಟಿಕೆ.*** ಮಂಗಳೂರು: ಅತ್ರಿಬುಕ್ ಸೆಂಟರ್, 2003
- ಟಿ.ಕೇಶವ ಭಟ್ಟ. ***ಯಕ್ಷಗಾನ ಕಲಾದರ್ಶನ.*** ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು, 2002
- ಭಟ್, ಶ್ರೀನಿವಾಸ್. ***ಯಕ್ಷಗಾನ ಕಲಾವಿದರು.*** ಕಿನ್ನಿಗೋಳಿ: ಯುಗಪುರುಷ ಪ್ರಕಟನಾಲಯ, 1973
- ಭಟ್, ಮಂಜುನಾಥ. ***ಯಕ್ಷಸುರಕ್ಷಾ.*** ಉಡುಪಿ: ಯಕ್ಷಗಾನ ಕಲಾರಂಗ, 2009
- ಪ.ಗೋಪಾಲಕೃಷ್ಣ. ***ಬಣ್ಣದ ಬದುಕು.ಕುರಿಯ ವಿಠಲಶಾಸ್ತ್ರಿ ಆತ್ಮಕಥನ.*** ಪುತ್ತೂರು: ಕರ್ನಾಟಕ ಸಂಘ, 2002
- ನಾವಡ, ಎ.ವಿ. ***ಕರಾವಳಿ ಜಾನಪದ.*** ಮಂಗಳೂರು: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್,2007
- ಕುಂಬಳೆ, ಸುಂದರರಾವ್. ***ಯಕ್ಷೋಪಾಸಕರು.*** ಬೆಂಗಳೂರು: ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ, 2011
- ಶೆಟ್ಟಿ, ಸಂಜೀವ. ***ಯಕ್ಷತಾರೆ.*** ಮುಂಬಾಯಿ: ಅರಾಟೆ ಮಂಜುನಾಥ ಸನ್ಮಾನ ಸಮಿತಿ, 1999
- ಜೋಶಿ, ಎಂ.ಪ್ರಭಾಕರ. ***ಯಕ್ಷಗಾನ ಪದಕೋಶ.*** ಉಡುಪಿ: ಪ್ರಾದೇಶಿಕ ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರ, 1994
- ಕುಕ್ಕುವಳ್ಳಿ, ಬಾಸ್ಕರ ರೈ. ***ಒಡ್ಡೋಲಗ.*** ಮಂಗಳೂರು:ಬಂಟರ ಯಕ್ಷಗಾನ ಕಲೋತ್ಸವ ಸಮಿತಿ, 2012

- ಉಪಾಧ್ಯ .ಜಿ.ಎನ್. ***ಕಲಾತಪಸ್ವಿ ಎಚ್ ಬಿ ಎಲ್ ರಾವ್.*** ಮುಂಬಾಯಿ: ಕನ್ನಡ ವಿಭಾಗ ಮುಂಬಾಯಿ ವಿಶ್ವವಿದ್ಯಾನಿಲಯ, 2012
- ವೇಣುಗೋಪಾಲ, ***ಬಯಲಾಟ.*** ಪುತ್ತೂರು: ಕನ್ನಡ ಪ್ರಪಂಚ ಪ್ರಕಾಶನ, 2003
- ಕದ್ರಿ, ಶರತ್ ಕುಮಾರ್. ***ಯಕ್ಷ ಕದಳಿ.*** ಮಂಗಳೂರು: ಹವ್ಯಾಸಿ ಬಳಗ ಕದ್ರಿ, 2006
- ಜೋಶಿ, ಎಂ. ಪ್ರಭಾಕರ: ***ರಂಗವೆಂಕಟ.*** ಮಂಗಳೂರು:ಪಣಂಬೂರು ವೆಂಕಟರಮಣ ಐತಾಳ ಸಂಸ್ಮರಣಾ ಸಮಿತಿ, 2010
- ಸೋಮೇಶ್ವರ, ಅಮೃತ. ***ಸುಂದರಕಾಂಡ.*** ಕುಂಬಳೆ: ಚೌಟ ಪ್ರತಿಷ್ಠಾನ ಕುಂಬಳೆ ಅಭಿನಂದನಾ ಸಮಿತಿ, 2007
- ಪಾದೆಕಲ್ಲು, ನರಸಿಂಹ ಭಟ್ಟ. ***ರಂಗವೈಖರಿ.*** ಮಿತ್ತನಡ್ಕ: ಶ್ರೀ ಮಾಂಬಾಡಿ ನಾರಾಯಣ ಭಾಗವತರ ಸನ್ಮಾನ ಸಮಿತಿ, 1981
- ಉಪಾಧ್ಯಾಯ, ವೆಂಕಟೇಶ್ವರ. ***ಅಕ್ಷರ ಯಕ್ಷಗಾನ.*** ಮಂಗಳೂರು, ಪ್ರಜ್ಞಾ ದೀಪ್ತಿ ಪ್ರಕಾಶನ, 2007
- ಮಂಚಿ, ನಾಗವೇಣಿ. ***ಬಲಿಪ ಗಾನಯಾನ.*** ಮಂಗಳಗಂಗೋತ್ರಿ; ಡಾ.ಪಿ.ದಯಾನಂದ ಪೈ ಮತ್ತು ಶ್ರೀ ಪಿ.ಸತೀಶ್ ಪೈ ಯಕ್ಷಗಾನ ಅಧ್ಯಯನ ಕೇಂದ್ರ, 2015
- ಜೋಶಿ, ಎಂ. ಪ್ರಭಾಕರ. ***ಯಕ್ಷಗಾನ ಸ್ಥಿತಿಗತಿ.*** ಮಂಗಳಗಂಗೋತ್ರಿ; ಡಾ.ಪಿ.ದಯಾನಂದ ಪೈ ಮತ್ತು ಶ್ರೀ ಪಿ.ಸತೀಶ್ ಪೈ ಯಕ್ಷಗಾನ ಅಧ್ಯಯನ ಕೇಂದ್ರ, 2015
- ಪಾದೆಕಲ್ಲು, ವಿಷ್ಣುಭಟ್ಟ/ಕನ್ಯಾನ ರಾಜಗೋಪಾಲ. ***ಯಕ್ಷಭೀಮನ ನೂರು ಹೆಜ್ಜೆಗಳು.*** ಸುಳ್ಯ: ಡಾ.ಕೃಷ್ಣಮೂರ್ತಿ ಪಂಜ, 2004
- ಶಾಸ್ತ್ರಿ ಎಲ್.ಎಸ್. ***ಮಹಾಬಲ.*** ಬೆಂಗಳೂರು: ಸುಮುಖ ಪ್ರಕಾಶನ, 2008
- ಪಾದೆಕಲ್ಲು, ವಿಷ್ಣುಭಟ್ಟ. ***ಅನನ್ಯ ವ್ಯಕ್ತಿ.*** ಮೂಡಬಿದ್ರೆ: ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ, 2010.
- ಶೆಟ್ಟಿ, ಆರ್.ಸೀತಾರಾಮ್. ***ನಾದಲೋಲ.*** ಮುಂಬಾಯಿ: ಅಜೆಕಾರು ಕಲಾಭಿಮಾನಿ ಬಳಗ, 2009
- ಗೌಡ, ಚಿನ್ನಪ್ಪ. ***ಭೂತಾರಾಧನೆ: ಒಂದು ಜನಪದೀಯ ಅಧ್ಯಯನ.*** ಮಂಗಳಗಂಗೋತ್ರಿ: ಮುಡಿಪು ಪ್ರಕಾಶನ, 1990
- ಶೆಟ್ಟಿ, ಎಸ್.ಪಿ. ***ಕೃಷ್ಣಸ್ಮರಣ.*** ಶಿರಸಿ: ಕೇರೆಕೈ ಕೃಷ್ಣ ಭಟ್ಟ ಸಂಸ್ಮರಣಾ ಸಮಿತಿ, 2009

- ಉದ್ಯಾವರ ಮಾಧವ ಆಚಾರ್ಯ. ***ರಂಗಸ್ಥಳದ ಕನವರಿಕೆಗಳು***. ಉಡುಪಿ:ವ್ಯಾಸ ಪ್ರಕಾಶನ, 2001
- ರಾಮನಾಥ್, ಎಚ್.ಕೆ. ***ರಂಗಸಂಬಂಧ.*** ಮೈಸೂರು: ಸ್ಕಾಲರ್ಸ್ ಬುಕ್ ಸೀರೀಸ್, 2004
- ಹಿರಣ್ಯ, ವೆಂಕಟೇಶ್ವರ ಭಟ್ಟ. ***ರಸಿಕ ರತ್ನ***. ಪರ್ಕಳ: ರಸಿಕ ರತ್ನ ವಿಟ್ಲ ಜೋಶಿ ಪ್ರತಿಷ್ಠಾನ, 2013
- ಕಾರ್ನಡ, ವಿಶ್ವನಾಥ. ***ಸಂಚಯ.*** ಅಂಕೋಲ: ಶ್ರೀ ರಾಘವೇಂದ್ರ ಪ್ರಕಾಶನ, 1994
- ಮೂಡಂಬೈಲು, ಗೋಪಾಲಶಾಸ್ತ್ರಿ. ***ಕುಮಾರ ವಿಜಯ.*** ಮಂಗಳೂರು: ಮುದ್ದಣ್ಣ ಪ್ರಕಾಶನ.2015
- ಪೆರಾಜೆ, ಮಾಧವ. ***ಯಕ್ಷಗಾನ ತಾಳಮದ್ದಳೆ.*** ಹಂಪಿ: ಕನ್ನಡ ವಿಶ್ವವಿದ್ಯಾನಿಲಯ,2000
- ಅತಿಕಾರಿ,ಸಿ.ಪಿ./ನರಸಿಂಹಮೂರ್ತಿ. ***ಯಕ್ಷವಿಶಂತಿ.*** ಕುಂದಾಪುರ: ಭಂಡಾರ್ಸ್ ಕಾಲೇಜು, 1995
- ವೇಮಗಲ್, ನಾರಾಯಣ ಸ್ವಾಮಿ. ***ಕೇಳಿಕೆ.*** ಬೆಂಗಳೂರು: ಸಿವಿಜಿ ಪಬ್ಲಿಕೇಶನ್ಸ್, 2005
- ಕುಲಕರ್ಣಿ, ಮಾಧವ. ***ರಂಗಸಮೀಕ್ಷೆ.*** ಉಡುಪಿ: ವ್ಯಾಸ ಪ್ರಕಾಶನ, 1977
- ಉಪಧ್ಯಾಯ, ಕೆ.ಎಸ್. ***ನಮ್ಮೂರ ಯಕ್ಷರು.*** ಮಂಗಳೂರು: ಸಿದ್ದಾರ್ಥ ಪ್ರಕಾಶನ, 1987
- ಶರ್ಮ, ಕೇಶವ. ತೆಂಕುತಿಟ್ಟು ***ಯಕ್ಷಗಾನದ ಮುಖವರ್ಣಿಕೆ.*** ಶಿವಮೊಗ್ಗ:ಕನ್ನಡ ಭಾರತಿ ಕುವೆಂಪು ವಿಶ್ವವಿದ್ಯಾನಿಲಯ, 2004
- ಅಂಚನ್, ರವಿ. ***ಯಕ್ಷರಂಗ.*** ಮುಂಬಯಿ: ಕನ್ನಡ ಸಾಹಿತ್ಯ ಸಂಗಮ, 1992
- ಶೆಟ್ಟಿ, ಕೃಷ್ಣ. ***ಯಕ್ಷಗಾನ ಪುರಾಣ ಜ್ಞಾನ ದರ್ಶನ.*** ಮಂಗಳೂರು: ಪರಿಣಿತ ಪ್ರಕಾಶನ, 2011
- ಮೂರ್ತಿ, ಜಿ.ವಿ.ಆನಂದ. ***ಕರಾವಳಿ ಯಕ್ಷಗಾನ.*** ಬೆಂಗಳೂರು: ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, 2000
- ಉಪ್ಪೂರ. ಶ್ರೀಧರ. ***ಯಕ್ಷಗಾನ ಮತ್ತು ನಾಟಕ.*** ಮಂಗಳೂರು: ದಿಗಂತ ಸಾಹಿತ್ಯ, 1998
- ಶೇಣಿ, ಗೋಪಾಲಕೃಷ್ಣ ಭಟ್ಟ. ***ಶೇಣಿ ಕೃತಿ ಶ್ರೇಣಿ.*** ಪುತ್ತೂರು: ಯಕ್ಷಕೂಟ, 1995
- ಭಟ್.ಜಿ.ಎಸ್. ***ಯಕ್ಷಗಾನ ಮಹಾಭಾರತ ಪ್ರಸಂಗಗಳು.*** ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, 2006
- ವಳಕ್ಕುಂಜ, ರವಿಶಂಕರ್. ***ಯಕ್ಷಗಾನ ಪ್ರಸಂಗ ದೃಶ್ಯಾವಳೀ.*** ಪುತ್ತೂರು: ವಳಕ್ಕುಂಜ ಪ್ರಕಾಶನ, 2016
- ರಾಜೇಗೌಡ, ಹ.ಕ. ***ಜಾನಪದ ಶೋಧ.*** ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, 2007

- ಚಿಗುರುಪಾದೆ, ಯೋಗೀಶ ರಾವ್. ***ಬೆಳ್ಳಿಗೆಜ್ಜೆ.*** ಮಂಜೇಶ್ವರ: ರಾಮಚಂದ್ರ ಹೆಗ್ಡೆ ವೇದಿಕೆ ಬೆಜ್ಜ, 2017
- ಭಟ್, ಶ್ರೀಪಾದ. ***ಯಕ್ಷಗಾನ.*** ಹೊನ್ನಾವರ: ಬಂಡಾಯ ಪ್ರಕಾಶನ, 2013
- ಮಡಿವಾಳ, ಸತೀಶ್. ***ಯಕ್ಷ ನಾಟ್ಯಾಂಜಲಿ ತೆಂಕುತಿಟ್ಟು.*** ಕಾರ್ಕಳ: ಶ್ರೀ ಮಹಾಗಣಪತಿ ಯಕ್ಷಗಾನ ಕಲಾ ಕೇಂದ್ರ, 2018
- ಪೆರಾಜೆ, ನಾ ಕಾರಂತ. ***ಅಡ್ಡಿಗೆ.*** ಪುತ್ತೂರು: ಜ್ಞಾನ ಗಂಗಾ ಪ್ರಕಾಶನ, 2017.
- ಭಟ್ಟ, ಸದಾಶಿವ. ***ನಳಚರಿತ್ರೆ.*** ಉಡುಪಿ: ಕನಕದಾಸ ಅಧ್ಯಯನ ಸಂಶೋಧನಾ ಪೀಠ, 2011
- Bapat ,Gururao. ***Semiotics of Yakshagana*** Udupi:Regional Resources centre for folk performing Arts, MGMCollege ,1998
- Kapila, Vatsyayan. ***Traditional Indian Theatre***. Delhi: National book trust in India, 1980
- Karanth, K.Shivarama. ***Yakshagana***. Delhi:Indira Gandhi National Centre for the Arts,
- Sinduvally, Anantha murthy. ***TheatreMovement in Karnataka.***Mysore: Prasaranga, University of Mysore, 1985

ಲೇಖನಗಳು ಮತ್ತು ಮ್ಯಾಗಝಿನ್‌ಗಳು

- ಬಳ್ಕೂರು, ಕರುಣಾಕರ. ***ಕಾರಂತರ ಯಕ್ಷಗಾನ ಸೃಷ್ಟಿ.*** ವಿಜಯಕರ್ನಾಟಕ, 09.02.2010
- ಎಡನಾಡು, ಸುರೇಶ್. ***ತೆಂಕುತಿಟ್ಟು ಯಕ್ಷ ಬೊಂಬೆಯಾಟ.*** ಜಾಗತಿಕ ಪಯಣ. ಪ್ರಜಾವಾಣಿ, 27.03.2010
- ಹೆಬ್ಬಾರ್, ಮಂಜುನಾಥ. ***ತೆಂಕುತಿಟ್ಟಿನ ಯಜಮಾನರ ಕಾಲ ನೆನಪಷ್ಟೇ.*** ಪ್ರಜಾವಾಣಿ, 24.12.2011
- ಹೆಬ್ಬಾರ್, ಮಂಜುನಾಥ. ***ಕರಾವಳಿಯಲ್ಲಿನ್ನು ಚೆಂಡೆ ಮದ್ದಳೆಗಳ ಸದ್ದು.*** ಪ್ರಜಾವಾಣಿ, 19.11.2011
- ಬಿಳಿಮಲೆ, ಪುರುಷೋತ್ತಮ. ***ಕೆಳವರ್ಗದ ಸಮರ್ಥ ನಾಯಕರು.*** ಮುಂಗಾರು, 21.04.1985
- ಕಡತೋಕ, ಮಂಜುನಾಥ ಭಾಗವತ. ***ಯಕ್ಷಗಾನ.*** ಯಕ್ಷಗಾನ ಮಾಸಪತ್ರಿಕೆ ಸಂಪುಟ-1, 1981
- ಶೆಣೈ, ವಿಜಯನಾಥ. ***ರಂಗದಲ್ಲಿ ಶ್ರೀಮಂತರು ಬದುಕಿನಲ್ಲಿ ಬಡವರು.*** ಉದಯವಾಣಿ, 28.11.20
- ಹೆಗಡೆ, ಸಂಧ್ಯಾ. ***ಕಲಾವಿದರ ಕಂಗಳಲ್ಲಿ ಭರವಸೆಯ ಮಿಂಚು.*** ಪ್ರಜಾವಾಣಿ, 06.12.2020

- ಚಂಬಲ್ತಿಮಾರ್, ಎಂ.ನಾ. ***ಶ್ರೀ ಧರ್ಮಸ್ಥಳದ ವಜ್ರಪುಷ್ಪ ಡಿ ಹರ್ಷೇಂದ್ರ ಕುಮಾರ್.*** ಕಣಿಪುರ, 2018 ನವೆಂಬರ್
- ಚಂಬಲ್ತಿಮಾರ್, ಎಂ.ನಾ. ***ಗುರು ಮಾದರಿ ಕಲಾವಿದನಾಗಬೇಕು.*** ಕಣಿಪುರ, 2019 ಜೂನ್
- ವರ್ಕಾಡಿ ತಾರಾನಾಥ, ***ಕಡಲತೀರದ ಕೋಗಿಲೆಯ ಹಾಡಿನ ಕಥನ.*** ಬಲ್ಲಿರೇನಯ್ಯಾ, 2019 ಆಗಸ್ಟ್
- ಅಮ್ಮೆನಡ್ಕ, ರಾಮಪ್ರಸಾದ್. ***ಸಾಗರದಾಚೆ ಯಕ್ಷಗಾನ.*** ಯಕ್ಷದೀಪ, 2017 ಎಪ್ರಿಲ್
- ಉಪಾಧ್ಯ, ಆನಂದರಾಮ. ***ಕಾರಂತ ಉತ್ಸವ.*** ಯಕ್ಷರಂಗ, 2019, ಜುಲೈ

ಅಂತರ್ಜಾಲ ತಾಣಗಳು:

- www.yakshagana.com
- www.wikipedia.org/wiki/yakshagana
- www.bayalata.com
- www.yakshadeepa.com
- www.yakshaganakeremane.com
- http://yaksharangabykattelusitla.blogspot.com
- www.yakshaganakalaranga.com